ಶನಿವಾರ, ಸೆಪ್ಟೆಂಬರ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 244 | ಪುಟ 22
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	₹/$
65,387 ▲	19,435 ▲	82.62 ▲

ಭಾರತ – ಪಾಕಿಸ್ತಾನ ಕ್ರಿಕೆಟ್ ಹಣಾಹಣಿ ಇಂದು

ಸ್ಥಳ	ಸಮಯ	ನೇರ ಪ್ರಸಾರ
ಪಲೇಕೆಲೆ	ಮಧ್ಯಾಹ್ನ 3	ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್

ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದಲ್ಲಿ ಸಮಿತಿ ರಚನೆ • ಪರ – ವಿರೋಧ ಚರ್ಚೆ

'ಒಂದು ದೇಶ, ಒಂದು ಚುನಾವಣೆ'

ನವದೆಹಲಿ(ಪಿಟಿಐ): ರಾಜ್ಯಗಳ ವಿಧಾನ ಸಭೆಗಳು ಹಾಗೂ ಲೋಕಸಭೆಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಉದ್ದೇಶದ 'ಒಂದು ದೇಶ– ಒಂದು ಚುನಾವಣೆ'ಯ ಕಾರ್ಯಸಾಧ್ಯತೆ ಪರಿಶೀಲನೆಗಾಗಿ ಕೇಂದ್ರ ಸರ್ಕಾರವು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದಲ್ಲಿ ಸಮಿತಿಯನ್ನು ಶುಕ್ರವಾರ ರಚಿಸಿದೆ.

ಸಮಿತಿ ಸದಸ್ಯರ ಕುರಿತ ವಿವರಗಳು ಬಹಿರಂಗವಾಗಿಲ್ಲ. ಕೇಂದ್ರದ ಈ ನಡೆಯು ಅವಧಿಪೂರ್ಣಗೊಳ್ಳುವ ಮುನ್ನವೇ ಲೋಕಸಭಾ ಚುನಾವಣೆ ಘೋಷಿಸುವ ಸಾಧ್ಯತೆ ಕುರಿತ ಚರ್ಚೆಗೆ ಕಾರಣವಾಗಿದೆ.

ಸಮಿತಿ ರಚಿಸಿದ ಬೆನ್ನಲ್ಲೇ, 'ಒಂದು ದೇಶ–ಒಂದು ಚುನಾವಣೆ' ಕುರಿತು ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಬಿಜೆಪಿ ನೇತೃತ್ವದ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ನಾಯಕರು ಈ ನಿರ್ಧಾರವನ್ನು ಸ್ವಾಗತಿಸಿದ್ದರೆ, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಕೇಂದ್ರದ ನಡೆಯನ್ನು ಟೀಕಿಸಿವೆ.

ಈ ನಡುವೆ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ನವದೆಹಲಿಯಲ್ಲಿರುವ ಕೋವಿಂದ್ ನಿವಾಸಕ್ಕೆ ಭೇಟಿ ನೀಡಿ ಚರ್ಚೆ ನಡೆಸಿದ್ದಾರೆ. ಈ ವಿವರಗಳು ಬಹಿರಂಗವಾಗಿಲ್ಲ.

1967ರ ವರೆಗೆ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸಲಾಗುತ್ತಿತ್ತು. ಇದೇ ಮಾದರಿಯಲ್ಲಿ ಈಗ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸಲು ಸಾಧ್ಯವೇ? ಈ ನಿಟ್ಟಿನಲ್ಲಿ ಅನುಸರಿಸಬೇಕಿರುವ ವಿಧಾನ ಕಾರ್ಯಸಾಧುವೇ ಎಂಬ ಬಗ್ಗೆ ಕೋವಿಂದ್ ಅವರು ಪರಿಶೀಲಿಸುವರು ಎಂದು ಮೂಲಗಳು ಹೇಳಿವೆ.

ಈ ವಿಷಯ ಕುರಿತು ಅವರು ವಿವಿಧ ರಾಜಕೀಯ ಪಕ್ಷಗಳು ಹಾಗೂ ತಜ್ಞರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸುವ ನಿರೀಕ್ಷೆ ಇದೆ ಎಂದು ಇವೇ ಮೂಲಗಳು ಹೇಳಿವೆ.

ಸೆಪ್ಟೆಂಬರ್ 18ರಿಂದ 22ರ ವರೆಗೆ ಸಂಸತ್‌ನ ವಿಶೇಷ ಅಧಿವೇಶನ ಕರೆಯಲು ಕೇಂದ್ರ ಸರ್ಕಾರ ನಿರ್ಧರಿಸಿದ ಮಾರನೆ ದಿನವೇ 'ಒಂದು ದೇಶ ಒಂದು ಚುನಾವಣೆ' ಕುರಿತ ಸಮಿತಿ ರಚಿಸಲಾಗಿದೆ. ವಿಶೇಷ ಅಧಿವೇಶನದ ಕಾರ್ಯಸೂಚಿ ಇನ್ನೂ ಗೌಪ್ಯವಾಗಿಯೇ ಇದೆ.

2014ರಲ್ಲಿ ಅಧಿಕಾರಕ್ಕೆ ಬಂದ ದಿನದಿಂದಲೂ ಪ್ರಧಾನಿ ನರೇಂದ್ರ ಮೋದಿ ಅವರು ಸ್ಥಳೀಯ ಸಂಸ್ಥೆಗಳು ಸೇರಿದಂತೆ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ.

ನಿರಂತರವಾಗಿ ಚುನಾವಣೆಗಳು ನಡೆಯುವುದರಿಂದ ಅಪಾರ ಹಣ ವ್ಯಯವಾಗಿ, ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದರಿಂದ ಈ ಎಲ್ಲ ತೊಂದರೆ ತಪ್ಪಿಸಬಹುದು ಎಂಬ ಕಾರಣಗಳನ್ನು ಮೋದಿ ನೀಡುತ್ತಿದ್ದಾರೆ.

2017ರಲ್ಲಿ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ನಂತರ, ಕೋವಿಂದ್ ಅವರು ಕೂಡ ಮೋದಿ ಅವರ ನಿಲುವನ್ನು ಬೆಂಬಲಿಸಿದ್ದರು. ಪದೇ ಪದೇ ಚುನಾವಣೆಗಳು ನಡೆಯುವುದರಿಂದ ಆಗುವ ತೊಂದರೆಗಳ ಬಗ್ಗೆ 2018ರಲ್ಲಿ ಸಂಸತ್ ಅಧಿವೇಶನ ಉದ್ದೇಶಿಸಿ ಮಾತನಾಡಿದ್ದ ವೇಳೆ ಪ್ರಸ್ತಾಪಿಸಿದ್ದರು.

5 ತಿದ್ದುಪಡಿಗಳು ಅಗತ್ಯ

'ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ಸಂವಿಧಾನಕ್ಕೆ 5 ತಿದ್ದುಪಡಿಗಳನ್ನು ತರಬೇಕು. ಹೆಚ್ಚುವರಿಯಾಗಿ ಬೃಹತ್ ಸಂಖ್ಯೆಯ ಇವಿಎಂಗಳು, ವಿವಿಪ್ಯಾಟ್ ಯಂತ್ರಗಳು ಅಗತ್ಯ. ಇದಕ್ಕಾಗಿ ಕೋಟ್ಯಂತರ ರೂಪಾಯಿ ಬೇಕು' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಸಂವಿಧಾನದ 83ನೇ ವಿಧಿ (ಸಂಸತ್‌ನ ಅವಧಿಗೆ ಸಂಬಂಧಿಸಿದ್ದು), 85ನೇ ವಿಧಿ (ರಾಷ್ಟ್ರಪತಿಯಿಂದ ಲೋಕಸಭೆ ವಿಸರ್ಜನೆ), 172ನೇ ವಿಧಿ (ರಾಜ್ಯಗಳ ಅವಧಿಗೆ ಸಂಬಂಧಿಸಿದ್ದು), 174ನೇ ವಿಧಿ (ವಿಧಾನಸಭೆಗಳ ವಿಸರ್ಜನೆ) ಹಾಗೂ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸುವುದಕ್ಕೆ ಸಂಬಂಧಿಸಿದ 356ನೇ ವಿಧಿಗೆ ತಿದ್ದುಪಡಿ ಅಗತ್ಯ' ಎಂದು ತಿಳಿಸಿದ್ದಾರೆ.

'ಈ ವಿಷಯಕ್ಕೆ ಸಂಬಂಧಿಸಿ ಸಂಸದೀಯ ಸಮಿತಿಯು ಚುನಾವಣಾ ಆಯೋಗ ಸೇರಿದಂತೆ ವಿವಿಧ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸಿದ್ದು, ಹಲವು ಶಿಫಾರಸುಗಳನ್ನು ಮಾಡಿದೆ' ಎಂದೂ ತಿಳಿಸಿದ್ದಾರೆ.

'ಈ ವಿಷಯ ಈಗ ಕಾನೂನು ಆಯೋಗದ ಮುಂದಿದ್ದು, ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿ ಮಾರ್ಗೋಪಾಯಗಳು ಹಾಗೂ ಚೌಕಟ್ಟು ಕುರಿತು ಆಯೋಗ ಪರಿಶೀಲನೆ ನಡೆಸಲಿದೆ' ಎಂದು ಹೇಳಿದ್ದಾರೆ. 'ಇವಿಎಂಗಳ ಬಳಕೆ ಅವಧಿ 15 ವರ್ಷಗಳಿರುವ ಕಾರಣ ಸಾಕಷ್ಟು ಸಂಖ್ಯೆಯ ಇವಿಎಂಗಳು ಬೇಕಾಗುತ್ತವೆ. ಹೆಚ್ಚುವರಿ ಚುನಾವಣೆ ಸಿಬ್ಬಂದಿ, ಭದ್ರತಾ ಸಿಬ್ಬಂದಿ ನಿಯೋಜನೆ ಮಾಡಬೇಕಾಗುತ್ತದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿರೋಧ ಪಕ್ಷಗಳಿಂದ ಖಂಡನೆ

ಮುಂಬೈ/ಚೆನ್ನೈ: 'ಒಂದು ದೇಶ– ಒಂದು ಚುನಾವಣೆ' ಕಾರ್ಯಸಾಧ್ಯತೆ ಪರಿಶೀಲನೆಗೆ ಸಮಿತಿ ರಚಿಸಿರುವ ಕೇಂದ್ರದ ನಡೆಯನ್ನು ವಿರೋಧ ಪಕ್ಷಗಳು ಖಂಡಿಸಿವೆ.

'ಕೇಂದ್ರ ಸರ್ಕಾರದ ಈ ನಡೆ ದೇಶದ ಒಕ್ಕೂಟ ವ್ಯವಸ್ಥೆಗೆ ಅಪಾಯ ಒಡ್ಡುವುದು' ಎಂದು ಆರೋಪಿಸಿದ್ದಾರೆ.

'ದೇಶದ ಜ್ವಲಂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರ. ಕೇಂದ್ರ ಸರ್ಕಾರ ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಜನರನ್ನು ಮೋಸಗೊಳಿಸಲು ಇನ್ನು ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಸರ್ವಾಧಿಕಾರ ಧೋರಣೆಯ ಈ ಸರ್ಕಾರದ ಪತನ ಖಚಿತ. ಕ್ಷಣಗಣನೆ ಆರಂಭವಾಗಿದೆ' ಎಂದೂ ಹೇಳಿದ್ದಾರೆ.

ಕೇಂದ್ರದ ನಡೆಯನ್ನು ತಮಿಳುನಾಡು ಆಡಳಿತಾರೂಢ ಪಕ್ಷ ಡಿಎಂಕೆ ವಿರೋಧಿಸಿದೆ.

'ಒಂದು ದೇಶ– ಒಂದು ಚುನಾವಣೆಯು ದೇಶದ ಹಿತಾಸಕ್ತಿಗೆ ವಿರುದ್ಧವಾದುದು' ಎಂದು ಡಿಎಂಕೆ ವಕ್ತಾರ ಶರವಣನ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶಿವಸೇನಾ (ಶಿಂದೆ ಬಣ), ಎಐಎಡಿಎಂಕೆ, ಎಸ್‌ಎಡಿ ಪಕ್ಷಗಳು ಬೆಂಬಲ ನೀಡಿದ್ದರೆ, ಇದು ದೇಶದ ಜನರ ಗಮನ ಬೇರೆಡೆ ಸೆಳೆಯುವ ವ್ಯರ್ಥ ಕಸರತ್ತು ಎಂದು ಜೆಡಿಯು ಟೀಕಿಸಿದೆ.




ನಭಕ್ಕೆ ಇಂದು ಜಿಗಿಯುವ 'ಆದಿತ್ಯ'

125 ನೇ ದಿನಕ್ಕೆ ಲಗ್ರಾಂಜಿಯನ್ ಬಿಂದು ಸೇರುವ ನೌಕೆ

• ಎಸ್.ರವಿಪ್ರಕಾಶ್

ಬೆಂಗಳೂರು: ಸುಂದರ ಬೆಳಗು, ನಯನ ಮನೋಹರ ಸೂರ್ಯಾಸ್ತಕ್ಕೆ ಮಾರು ಹೋಗದವರು ಯಾರು? ಆದರೆ, ನಡು ಮಧ್ಯಾಹ್ನ, ಸುಡು ಬೇಸಿಗೆಯಲ್ಲಿ ಸೂರ್ಯ ಅಹನೀಯ. ಕಂಗೆಡಿಸುವ ಬರಗಾಲ, ಬದುಕನ್ನೇ ಕಸಿಯುವ ನೈಸರ್ಗಿಕ ವಿಕೋಪ, ಪ್ರಳಯ ಸ್ವರೂಪಿ ಮಳೆ, ಪ್ರವಾಹ. ಇವೆಲ್ಲಕ್ಕೂ ಸೂರ್ಯನಿಗೂ ಸಂಬಂಧವಿದೆಯೇ? ಇದ್ದರೆ ಅದು ಹೇಗೆ? ಅದರಿಂದ ಪಾರಾಗುವುದು ಹೇಗೆ?

ಇತ್ಯಾದಿ ಪ್ರಶ್ನೆಗಳ ಕಗ್ಗಂಟನ್ನು ಬಿಡಿಸಲು ಮತ್ತು ಅದಕ್ಕೆ ಮುಂದಿನ ದಿನಗಳಲ್ಲಿ ಪರಿಹಾರ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸೂರ್ಯನ ಅಧ್ಯಯನಕ್ಕಾಗಿ ಆದಿತ್ಯ ಎಲ್–1 ಅಂತರಿಕ್ಷ ವೀಕ್ಷಣಾಲಯವನ್ನು ಶನಿವಾರ (ಸೆ.2) ಶ್ರೀಹರಿಕೋಟದಿಂದ ಪಿಎಸ್‌ಎಲ್‌ವಿ-ಸಿ 57 ರಾಕೆಟ್ ಮೂಲಕ ಉಡಾವಣೆ ಮಾಡಲಾಗುವುದು. ಇದಕ್ಕಾಗಿ ಕ್ಷಣಗಣನೆ ಆರಂಭಗೊಂಡಿದೆ.



ಪ್ರತಿ ದಿನ 1,440 ಚಿತ್ರಗಳು

ಲಗ್ರಾಂಜಿಯನ್ ಬಿಂದುವಿಗೆ ಸೇರಿದ ಬಳಿಕ ಇದರಲ್ಲಿರುವ ವಿಸಿಬಲ್ ಎಮಿಷನ್ ಕೊರೋನಾಗ್ರಫಿ (ವಿಇಎಲ್‌ಸಿ) ಉಪಕರಣವು ಪ್ರತಿ ದಿನ 1,440 ಚಿತ್ರಗಳನ್ನು ಭೂಮಿಗೆ ಕಳಿಸುತ್ತದೆ. ಇದನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಇದು ಅತ್ಯಂತ ಬೃಹತ್ ಮತ್ತು ತಾಂತ್ರಿಕವಾಗಿ ಸವಾಲುಗಳನ್ನು ಹೊಂದಿರುವ ಉಪಕರಣವಾಗಿದೆ. ಇದನ್ನು ಬೆಂಗಳೂರಿನ ಭಾರತೀಯ ಖಭೌತವಿಜ್ಞಾನ ಸಂಸ್ಥೆ ರೂಪಿಸಿದೆ.

- ಉಡಾವಣೆ:ಶ್ರೀಹರಿಕೋಟ
- ಸಮಯ: ಬೆಳಿಗ್ಗೆ 11.50
- ದೂರ: 15 ಲಕ್ಷ ಕಿ.ಮೀ
- ವೆಚ್ಚ: ₹400 ಕೋಟಿ
- ಕಾರ್ಯಾವಧಿ:5 ವರ್ಷ
- ಉಡಾವಣೆ ನೇರ ಪ್ರಸಾರ

7ನೇ ಪುಟ ನೋಡಿ

ಅನೂರ್ಜಿತ ಮದುವೆಯಿಂದ ಜನಿಸಿದ ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು: 'ಸುಪ್ರೀಂ'

ನವದೆಹಲಿ(ಪಿಟಿಐ): ಅನೂರ್ಜಿತಗೊಳಿಸಲಾದ ಅಥವಾ ಅನೂರ್ಜಿತಗೊಳಿಸಬಹುದಾದ ಮದುವೆಯಿಂದ ಜನಿಸಿದ ಮಕ್ಕಳು, ಹಿಂದೂ ಉತ್ತರಾಧಿಕಾರ ಕಾಯ್ದೆ ಅನ್ವಯ ಪಾಲಕರ ಆಸ್ತಿಯಲ್ಲಿ ಹಕ್ಕು ಹೊಂದಿದ್ದಾರೆ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.



ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಈ ಕುರಿತು ತೀರ್ಪು ನೀಡಿದೆ.

ಮದುವೆಗೂ ಮುನ್ನ ಜೋಡಿಗೆ ಜನಿಸಿದ ಮಕ್ಕಳಿಗೆ ಹಿಂದೂ ಉತ್ತರಾಧಿಕಾರ ಕಾಯ್ದೆಯಡಿ, ತಮ್ಮ ಪಾಲಕರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇದೆಯೇ ಎಂಬ ವಿಚಾರವಾಗಿ 2011ರಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು. ಈ ಅರ್ಜಿಗೆ ಸಂಬಂಧಿಸಿ ನೀಡಿರುವ ತೀರ್ಪಿನಲ್ಲಿ ನ್ಯಾಯಪೀಠ ಈ ಮಾತನ್ನು ಹೇಳಿದೆ.

'ಇದೇ ರೀತಿ, ಪುತ್ರಿಯರಿಗೂ ಸಮಾನ ಹಕ್ಕುಗಳನ್ನು ನೀಡಲಾಗಿದೆ' ಎಂದು ನ್ಯಾಯಪೀಠವು ತೀರ್ಪಿನಲ್ಲಿ ಹೇಳಿದೆ.

ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 16(3)ರ ಪ್ರಕಾರ, ಅನೂರ್ಜಿತಗೊಳಿಸಲಾದ ಅಥವಾ ಅನೂರ್ಜಿತಗೊಳಿಸಬಹುದಾದ ಮದುವೆಯಿಂದ ಜನಿಸಿದ ಮಕ್ಕಳು, ತಮ್ಮ ಪಾಲಕರ ಸ್ವಯಾರ್ಜಿತ ಆಸ್ತಿಯಲ್ಲಿ ಮಾತ್ರ ಹಕ್ಕು ಹೊಂದಿದ್ದಾರೆಯೇ ಎಂಬ ಪ್ರಶ್ನೆಯನ್ನೂ ನ್ಯಾಯಪೀಠವು ಇತ್ಯರ್ಥಪಡಿಸಿದೆ. ಈ ಕುರಿತ ವಿವರವಾದ ಆದೇಶ ಲಭ್ಯವಾಗಬೇಕಿದೆ.ಈ ಎಲ್ಲ ಪ್ರಶ್ನೆಗಳನ್ನು ವಿಸ್ತೃತ ನ್ಯಾಯಪೀಠಕ್ಕೆ ವರ್ಗಾಯಿಸಿ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು 2011ರ ಮಾರ್ಚ್ 31ರಂದು ಆದೇಶಿಸಿತ್ತು.

ವಾಣಿಜ್ಯ ಬಳಕೆ ಸಿಲಿಂಡರ್ ದರ ₹158 ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ₹157.5ರಷ್ಟು ಇಳಿಕೆ ಮಾಡಿವೆ.



ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಅಡುಗೆ ಅನಿಲ ಸಿಲಿಂಡರ್ ಬೆಲೆಯು ₹158ರಷ್ಟು ಇಳಿಕೆ ಆಗಿದ್ದು, ₹1,609.5ಕ್ಕೆ ತಲುಪಿದೆ ಎಂದು ಹೋಟೆಲ್ ಉದ್ಯಮದ ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ಪ್ರತಿ ಸಿಲಿಂಡರ್ ದರ ₹1,522.5ಕ್ಕೆ ಇಳಿಕೆ ಕಂಡಿದೆ. ಈ ಹಿಂದೆ ಆಗಸ್ಟ್ 1ರಂದು ಸಿಲಿಂಡರ್‌ಗೆ ₹100ರಷ್ಟು ಇಳಿಕೆ ಮಾಡಲಾಗಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಸಿಲಿಂಡರ್ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರ ತಗ್ಗಿಸಲಾಗಿದೆ ಎಂದು ಕಂಪನಿಗಳು ತಿಳಿಸಿವೆ.

ಎಲ್‌ಪಿಜಿ ಆಮದಿಗೆ ಕೃಷಿ ಸೆಸ್ ಇಲ್ಲ: ಎಲ್‌ಪಿಜಿ, ಲಿಕ್ವಿಡ್ ಪ್ರೊಪೇನ್ ಮತ್ತು ಲಿಕ್ವಿಡ್ ಬ್ಯೂಟೇನ್ ಆಮದು ಮೇಲೆ ಇದ್ದ ಕೃಷಿ ಸೆಸ್ ಅನ್ನು ಶುಕ್ರವಾರದಿಂದ ಜಾರಿಗೆ ಬರುವಂತೆ ಕೈಬಿಡಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಸರ್ಕಾರವು ಈ ಉತ್ಪನ್ನಗಳ ಆಮದು ಮೇಲೆ ಜುಲೈನಲ್ಲಿ ಶೇ 15ರಷ್ಟು ಕೃಸಿ ಸೆಸ್ ವಿಧಿಸಿತ್ತು.

ಪ್ರಸ್ತಾವ ಪರಿಶೀಲನೆಯಲ್ಲಿ: ಸಚಿವ ಎಂ.ಬಿ. ಪಾಟೀಲ

ಸರ್ಕಾರಿ ವಿಮಾನಯಾನ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಸ್ವಂತ ವಿಮಾನಯಾನ ಕಂಪನಿ ಆರಂಭಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿಯೇ ಈ ಕುರಿತು ಅಂತಿಮ ನಿರ್ಧಾರಕ್ಕೆ ಬರಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಹೊಸ ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚುತ್ತಿವೆ. ಅಲ್ಲಿಗೆ ಹೆಚ್ಚಿನ ಸಂಖ್ಯೆಯ ವಿಮಾನಗಳ ಹಾರಾಟ ಸೌಲಭ್ಯ ಕಲ್ಪಿಸುವುದಕ್ಕಾಗಿ ಸರ್ಕಾರಿ ವಿಮಾನಯಾನ ಸಂಸ್ಥೆ ಆರಂಭಿಸುವ ಕುರಿತು ಪರಿಶೀಲಿಸಲಾಗುತ್ತಿದೆ. ವಿಮಾನಯಾನ ಕ್ಷೇತ್ರದ ಪರಿಣಿತರ ಜತೆಗೂ ಚರ್ಚೆ ನಡೆದಿದೆ' ಎಂದರು.

₹ 200 ಕೋಟಿ ವೆಚ್ಚದಲ್ಲಿ ಒಂದು ವಿಮಾನ ಖರೀದಿಸಬಹುದು. ₹600 ಕೋಟಿ ವ್ಯಯಿಸಿ ಮೂರು ವಿಮಾನಗಳನ್ನು ಖರೀದಿಸಿ, ಅವುಗಳನ್ನು ಬಳಸಿಕೊಂಡು ರಾಜ್ಯದೊಳಗೆ ವಿಮಾನಯಾನ ಸೇವೆ ಒದಗಿಸಬಹುದು. ಬೆಂಗಳೂರಿನಿಂದ ಕಲಬುರಗಿ, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ ಸೇರಿದಂತೆ ವಿವಿಧ ಜಿಲ್ಲಾ ಕೇಂದ್ರಗಳಿಗೆ ಹಾಗೂ ರಾಜ್ಯದೊಳಗೆ ಅಂತರ ಜಿಲ್ಲಾ ವಿಮಾನಯಾನ ಸೇವೆ ಒದಗಿಸುವ ಯೋಚನೆ ಇದೆ ಎಂದು ವಿವರಿಸಿದರು.

ರಾಜ್ಯ ಸರ್ಕಾರದ ಸಹಭಾಗಿತ್ವ ಮತ್ತು ಹೂಡಿಕೆಯಲ್ಲಿ ನಿರ್ಮಿಸುವ ವಿಮಾನ ನಿಲ್ದಾಣಗಳ ನಿರ್ವಹಣೆಗೆ ರಾಜ್ಯ ವಿಮಾನ ನಿಲ್ದಾಣ ಪ್ರಾಧಿಕಾರವನ್ನೂ ಅಸ್ತಿತ್ವಕ್ಕೆ ತರಲಾಗುವುದು ಎಂದರು.

7ನೇ ಪುಟ ನೋಡಿ

'ರಫ್ತಿಗೆ ಉತ್ತೇಜನ'

'ರಫ್ತು ಚಟುವಟಿಕೆಗಳಿಗೆ ಉತ್ತೇಜನ ನೀಡುವುದಕ್ಕೆ ಪೂರಕವಾಗಿ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲಾಗುವುದು. ವಿದ್ಯುತ್ ಚಾಲಿತ ವಾಹನ, ಸರಕು ಸಂಗ್ರಹಣೆ (ವೇರ್ ಹೌಸಿಂಗ್) ಮತ್ತು ಸಾಗಣೆ ಉದ್ಯಮಗಳನ್ನು ಕೇಂದ್ರೀಕರಿಸಿ ನೀತಿ ರೂಪಿಸಲಾಗುವುದು. ಶೀಘ್ರದಲ್ಲೇ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸಲಾಗುವುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ತಿಳಿಸಿದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ
ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವೀ ಶಿಕ್ಷಕರಿಂದ ಸಿದ್ಧಪಡಿಸಿರುವ 'ಮಾದರಿ ಪ್ರಶ್ನೋತ್ತರ' ಗಳ ಪರೀಕ್ಷಾ ದಿಕ್ಸೂಚಿ ಶೀಘ್ರದಲ್ಲೇ...

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆದರಿಕೆ: ನಕಲಿ ಡಿವೈಎಸ್ಪಿ ಸಹಾಯಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದ ಆರೋಪದಡಿ ಸಂತೋಷ್ ಕೊಪ್ಪದ (25) ಅವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬೆಳಗಾವಿ ಜಿಲ್ಲೆಯ ಸಂತೋಷ್, ಎಸ್ಸೆಸ್ಸೆಲ್ಸಿವರೆಗೆ ಓದಿದ್ದ. ಎಸಿಬಿ ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ ಡಿವೈಎಸ್ಪಿ ಎಂದು ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದ ಪ್ರಮುಖ ಆರೋಪಿ ವಿಶಾಲ್ ಪಾಟೀಲ ಜೊತೆ ಸೇರಿ ಕೃತ್ಯ ಎಸಗುತ್ತಿದ್ದ. ವಿಶಾಲ್ ಸದ್ಯ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

‘ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಹಣ ಸಂಪಾದಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದ ವಿಶಾಲ್ ಪಾಟೀಲ ವಿರುದ್ಧ ಬೈಲಹೊಂಗಲ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ವಿಶಾಲ್ ಬಂಧನವೂ ಆಗಿತ್ತು.

ಜಾಮೀನು ಮೇಲೆ ಜೈಲಿನಿಂದ ಹೊರಬಂದಿದ್ದ ಈತ, ತನ್ನ ಕೃತ್ಯವನ್ನು ಮತ್ತೆ ಮುಂದುವರಿಸಿದ್ದ ಎನ್ನಲಾಗಿದೆ. ಇದಕ್ಕಾಗಿ ಸಂತೋಷ್ ಕೊಪ್ಪದನನ್ನೇ ತನ್ನ ಸಹಾಯಕನೆಂದು ಹೇಳಿಕೊಳ್ಳುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿ ಕೃತ್ಯ: ‘ಆರೋಪಿ ವಿಶಾಲ್, ಸರ್ಕಾರಿ ಅಧಿಕಾರಿಗಳ ಪಟ್ಟಿ ಸಿದ್ಧಪಡಿಸುತ್ತಿದ್ದ. ನಂತರ, ಎಸಿಬಿ ಡಿವೈಎಸ್ಪಿ ಹೆಸರಿನಲ್ಲಿ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.



ಸಂತೋಷ ಕೊಪ್ಪದ

‘ನಿಮ್ಮ ವಿರುದ್ಧ ದೂರು ಬಂದಿದೆ. ಸದ್ಯದಲ್ಲೇ ನಿಮ್ಮ ಮನೆ ಹಾಗೂ ಕಚೇರಿ ಮೇಲೆ ದಾಳಿ ಮಾಡಲಿದ್ದೇವೆ’ ಎಂದು ವಿಶಾಲ್ ಬೆದರಿಸುತ್ತಿದ್ದ. ‘ನಿಮ್ಮ ಮೇಲೆ ದಾಳಿ ಮಾಡಬಾರದು ಎಂದಾದರೆ ನನಗೆ ಹಣ ನೀಡಬೇಕು’ ಎಂಬುದಾಗಿ ಬೇಡಿಕೆ ಇರಿಸುತ್ತಿದ್ದ. ಈತನ ಮಾತಿನಿಂದ ಹೆದರುತ್ತಿದ್ದ ಅಧಿಕಾರಿಗಳು, ವಿಶಾಲ್‌ನನ್ನು ಭೇಟಿಯಾಗುತ್ತಿದ್ದರು. ಸಹಾಯಕ ಸಂತೋಷ್ ಕೊಪ್ಪದ ಕೈಗೆ ಹಣ ನೀಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಈ ಇಬ್ಬರೂ ಆರೋಪಿಗಳ ಕಿರುಕುಳದಿಂದ ಬೇಸತ್ತಿದ್ದ ಅಧಿಕಾರಿಯೊಬ್ಬರು 2022ರಲ್ಲಿ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳಿಬ್ಬರೂ ತಲೆಮರೆಸಿಕೊಂಡಿದ್ದರು ಎನ್ನಲಾಗಿದೆ.

ಇತ್ತೀಚೆಗೆ ಆರೋಪಿಗಳ ಕುರಿತು ಕೆಲ ಸುಳಿವುಗಳು ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬೆಳಗಾವಿಯಲ್ಲಿ ಸಂತೋಷ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಸಿಬಿ ರದ್ದಾದ ನಂತರ, ಲೋಕಾಯುಕ್ತ ಪೊಲೀಸರ ಹೆಸರಿನಲ್ಲೂ ಆರೋಪಿಗಳು ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡಿರುವ ಮಾಹಿತಿ ಇದೆ’ ಎಂದು ಪೊಲೀಸ್ ಇಲಾಖೆ ಮೂಲಗಳು ಮಾಹಿತಿ ನೀಡಿವೆ.

ನೇಮಕಾತಿ ಆಗುವವರೆಗೆ ತಾತ್ಕಾಲಿಕ ವ್ಯವಸ್ಥೆ–ಕೆಎಸ್‌ಆರ್‌ಟಿಸಿ

ಗುತ್ತಿಗೆ ಆಧಾರದಲ್ಲಿ 500 ಮಂದಿ ಚಾಲಕರ ನೇಮಕ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಚಾಲಕರ ಕೊರತೆ ಆಗದಂತೆ ನೋಡಿಕೊಳ್ಳಲು ಗುತ್ತಿಗೆ ಆಧಾರದಲ್ಲಿ 500 ಚಾಲಕರನ್ನು ನೇಮಿಸಿಕೊಳ್ಳಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

2016ರಲ್ಲಿ ನೇಮಕಾತಿ ನಡೆದಿತ್ತು. ಅಲ್ಲಿಂದ ಈಚೆಗಿನ ಏಳು ವರ್ಷಗಳಲ್ಲಿ 16 ಸಾವಿರ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ನಿವೃತ್ತರಾಗಿದ್ದಾರೆ. ಇದರಿಂದ ಸಿಬ್ಬಂದಿಯ ಕೊರತೆ ಉಂಟಾಗಿದೆ. ಇದನ್ನು ನೀಗಿಸಲು ಸಾರಿಗೆ ಇಲಾಖೆ ಮುಂದಾಗಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ಎನ್‌ಡಬ್ಲ್ಯುಕೆಆರ್‌ಟಿಸಿಯ 13,415 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭಿಸಿದೆ.

ಸಿಬ್ಬಂದಿ ಕೊರತೆಯಿಂದಾಗಿ ಹಲವು ಕಡೆಗಳಲ್ಲಿ ಬಸ್ ಇದ್ದರೂ ಓಡಿಸುವುದು ದುಸ್ತರ ಆಗಿದೆ. ನೇಮಕಾತಿ ಪ್ರಕ್ರಿಯೆಗೆ ಸಮಯ ಹಿಡಿಯುವುದರಿಂದ ಅಲ್ಲಿವರೆಗೆ ಕೊರತೆ ನೀಗಿಸಲು ತಾತ್ಕಾಲಿಕ ವ್ಯವಸ್ಥೆಗೆ ಮುಂದಾಗಿದೆ.

‘ಕೆಎಸ್‌ಆರ್‌ಟಿಸಿಯ 16 ವಿಭಾಗಗಳ ವ್ಯಾಪ್ತಿಯಲ್ಲಿ ತೀರ ಅಗತ್ಯ ಇರುವಲ್ಲಿ ಚಾಲಕರನ್ನು ನೇಮಕಾತಿ ಮಾಡಿಕೊಳ್ಳಲು ಸೂಚನೆ ನೀಡಿದ್ದೇನೆ. ಶಿವಮೊಗ್ಗ ಸಹಿತ ಕೆಲವು ಕಡೆಗಳಲ್ಲಿ ಈಗಾಗಲೇ ನೇಮಕಾತಿ ಮಾಡಿಕೊಂಡಿದ್ದಾರೆ. ಉಳಿದ ಕಡೆಗಳಲ್ಲಿ ಶೀಘ್ರ ಈ ಪ್ರಕ್ರಿಯೆ ನಡೆಯಲಿದೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಒಟ್ಟು 500 ಸಿಬ್ಬಂದಿಯನ್ನು ತೆಗೆದುಕೊಳ್ಳಲಾಗುವುದು. ಈ ತಾತ್ಕಾಲಿಕ ಗುತ್ತಿಗೆಯ ಅವಧಿ 11 ತಿಂಗಳು ಆಗಿರುತ್ತದೆ. ಅಷ್ಟು ಹೊತ್ತಿಗೆ ನೇಮಕಾತಿ ಪ್ರಕ್ರಿಯೆ ಮುಗಿದಿರುತ್ತದೆ ಎಂದು ವಿವರಿಸಿದರು.

ಗುತ್ತಿಗೆ ಪದ್ಧತಿಯಲ್ಲಿ ಈಗಾಗಲೇ ಕೆಲಸಕ್ಕೆ ಹಾಜರು ಆಗಿರುವವರಿಗೆ ಆಯಾ ಡಿಪೊದಲ್ಲಿ ತರಬೇತಿ ನೀಡಲಾಗುತ್ತಿದೆ.

‘ನಾನು ನೇಮಕಾತಿಗೆ ಅರ್ಜಿ ಸಲ್ಲಿಸಿದ್ದೇನೆ. ಅದರ ಜೊತೆಗೆ ಈಗ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ಒಂದು ವಾರದಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಡಿಪೊ ವ್ಯಾಪ್ತಿಯಲ್ಲಿ 30 ಮಂದಿಯನ್ನು ತೆಗೆದುಕೊಂಡಿದ್ದಾರೆ’ ಎಂದು ಕೆಎಸ್‌ಆರ್‌ಟಿಸಿಯ ಶಿವಮೊಗ್ಗ ವಿಭಾಗದ ತಾತ್ಕಾಲಿಕ ಚಾಲಕರೊಬ್ಬರು ತಿಳಿಸಿದರು.

ನೇಮಕ ಪ್ರಕ್ರಿಯೆ: ಕೆಎಸ್‌ಆರ್‌ಟಿಸಿಯಲ್ಲಿ 3,745 ಚಾಲನಾ ಸಿಬ್ಬಂದಿ, 726 ತಾಂತ್ರಿಕ ಸಿಬ್ಬಂದಿಯ ನೇಮಕಾತಿಗೆ ಈಗಾಗಲೇ ಕರೆಯಲಾಗಿರುವ ಜಾಹೀರಾತು ಪ್ರಕ್ರಿಯೆಯನ್ನು ಮುಂದುವರಿಸಲಾಗಿದೆ.

ಹೊಸದಾಗಿ ಕೆಎಸ್‌ಆರ್‌ಟಿಸಿಗೆ 1,433 ಚಾಲನಾ ಸಿಬ್ಬಂದಿ, 2,738 ತಾಂತ್ರಿಕ ಸಿಬ್ಬಂದಿ, ಬಿಎಂಟಿಸಿಗೆ 2,000 ನಿರ್ವಾಹಕರು, 1,000 ಚಾಲಕ ಕಂ ನಿರ್ವಾಹಕರು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 1,773 ನಿರ್ವಾಹಕರ ನೇಮಕಾತಿ ನಡೆಯಲಿದೆ.





11 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಲಿರುವವರಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ



ಸಿಬ್ಬಂದಿ ಇಲ್ಲದೇ ಬಸ್ ಓಡಾಟ ನಿಲ್ಲಬಾರದು ಎಂಬ ಕಾರಣಕ್ಕೆ ಕೆಎಸ್‌ಆರ್‌ಟಿಸಿಯಲ್ಲಿ ಈ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.
ವಿ. ಅನ್ಬು ಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

ಸುದ್ದಿ 2 ನಿಮಿಷ

ಕಾರಂಜಿಯಾಗಿ ಪವಿತ್ರ ಶಿವಲಿಂಗ ಬಳಕೆ: ಎಎಪಿ ಆಕ್ರೋಶ

ಬೆಂಗಳೂರು: ಹಿಂದೂಗಳ ಆರಾಧ್ಯ ದೈವ ಶಿವಲಿಂಗವನ್ನು ಕಾರಂಜಿ ರೂಪದಲ್ಲಿ ಆಲಂಕಾರಿಕ ವಸ್ತುವನ್ನಾಗಿ ದೆಹಲಿಯ ಬೀದಿಗಳಲ್ಲಿ ಬಳಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೋಟ್ಯಂತರ ಭಾರತೀಯರಿಗೆ ಅವಮಾನ ಮಾಡಿದೆ ಎಂದು ಆಮ್ ಆದ್ಮಿ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಕುಶಲಾ ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಧರ್ಮವನ್ನು ಬಿಜೆಪಿ ದಂಧೆ ಮಾಡಿಕೊಂಡಿದೆ. ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿಕೊಂಡು, ದ್ವೇಷದ ಬೆಳೆ ಬಿತ್ತಿ ಅದನ್ನೇ ಉಸಿರಾಡುತ್ತಿರುವ ಬಿಜೆಪಿ ಬಣ್ಣ ಬಯಲಾಗುತ್ತಿದೆ. ಬಿಜೆಪಿ ಶಿವ ದ್ವೇಷಿಯಾಗಿದೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ದೆಹಲಿಯ ಧೌಲಾ ಕೌನ್‌ನಲ್ಲಿ ಜಿ-20 ಶೃಂಗಸಭೆಯ ಹಿನ್ನೆಲೆಯಲ್ಲಿ ಶಿವಲಿಂಗದ ಆಕಾರದ ಕಾರಂಜಿಗಳನ್ನು ಅಳವಡಿಸಿದ್ದಾರೆ. ಬಿಜೆಪಿಯ ನಾಯಕರು ಇಂತಹ ಅವಮಾನಕರ ಫೋಟೊ, ವಿಡಿಯೊಗಳನ್ನು ನಾಚಿಕೆಯಿಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚುತ್ತಿದ್ದಾರೆ. ಇದು ಖಂಡನಾರ್ಹ. ಕೇಂದ್ರ ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಂಡು ಶಿವಲಿಂಗ ಆಕಾರದ ಆಲಂಕಾರಿಕ ಕಾರಂಜಿಗಳನ್ನು ತೆರವುಗೊಳಿಸಬೇಕು. ಸಮಸ್ತ ಭಾರತೀಯರ ಕ್ಷಮೆ ಕೇಳಬೇಕು. ಸೂಕ್ತ ಸ್ಥಳಗಳಲ್ಲಿ ಗೌರವಪೂರ್ವಕವಾಗಿ ಪ್ರತಿಷ್ಠಾಪನೆ ಮಾಡಬೇಕು ಎಂದು ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆಗ್ರಹಿಸಿದರು.

ಇದೇ 8ರಿಂದ ರಸಪ್ರಶ್ನೆ ಸ್ಪರ್ಧೆ

ಬೆಂಗಳೂರು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯಿಂದ ಸೆಪ್ಟೆಂಬರ್ 8 ಮತ್ತು 9ರಂದು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಿದೆ.

ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಗೌರವ ಮೂಡಿಸುವುದು, ಚಳವಳಿಯ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡುವಂತೆ ಪ್ರೇರೇಪಿಸುವುದು, ಸಾಮಾಜಿಕ ಕಳಕಳಿ, ಸೌಹಾರ್ದ ಮನೋಭಾವ ಬೆಳೆಸುವ ಉದ್ದೇಶದಿಂದ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ.

ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ₹ 5 ಸಾವಿರ, ದ್ವಿತೀಯ ಸ್ಥಾನ ಪಡೆದವರಿಗೆ ₹ 4 ಸಾವಿರ, ತೃತೀಯ ಸ್ಥಾನ ಪಡೆದವರಿಗೆ ₹ 3 ಸಾವಿರ ನಗದು, ಜಿಲ್ಲಾಮಟ್ಟದಲ್ಲಿ ಮೊದಲ ಸ್ಥಾನ ಪಡೆದವರಿಗೆ ₹ 1 ಸಾವಿರ ನಗದು ಸ್ಮರಣಿಕೆ ಪ್ರಶಸ್ತಿ ಪತ್ರ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 080-35835292, 9448957666

ಉಪನಗರ ರೈಲು ಕಾರಿಡಾರ್ ಎಲ್ ಆ್ಯಂಡ್ ಟಿಗೆ ಟೆಂಡರ್

ಬೆಂಗಳೂರು: ಉಪನಗರ ರೈಲು ಯೋಜನೆಯ ಕಾರಿಡಾರ್–4 ಸಿವಿಲ್ ಕಾಮಗಾರಿಗಳ ಟೆಂಡರ್ 'ಎಲ್ ಆ್ಯಂಡ್ ಟಿ' ಕಂಪನಿ ಪಾಲಾಗಿದೆ. ಬಿಡ್ ಮಾಡಿದ್ದ ನಾಲ್ಕು ಕಂಪನಿಗಳಲ್ಲಿ ಎಲ್ ಆ್ಯಂಡ್ ಟಿ ಅತಿ ಕಡಿಮೆ ಬಿಡ್ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೀಲಲಿಗೆ - ರಾಜಾನುಕುಂಟೆ ನಡುವಿನ ಕಾರಿಡಾರ್–4ಕ್ಕೆ ‘ಕನಕ’ ಮಾರ್ಗ (ಹಳದಿ) ಎಂದು ಹೆಸರಿಸಲಾಗಿದೆ. ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2 ಕಾಮಗಾರಿಗಳು ಈಗಾಗಲೇ ನಡೆಯುತ್ತಿದ್ದು, ಕಾರಿಡಾರ್–4 ಬಿಡ್‌ದಾರರಿಗೆ ಹಸ್ತಾಂತರವಾಗಲಿದೆ.

ಬಿಎಸ್‌ಆರ್‌ಪಿ ಒಟ್ಟು 149.34 ಕಿಲೋಮೀಟರ್ ಮಾರ್ಗ ಹೊಂದಿದ್ದು, ಅದರಲ್ಲಿ ಕಾರಿಡಾರ್–4ರಲ್ಲಿ 46.88 ಕಿ.ಮೀ. ನಿರ್ಮಾಣಗೊಳ್ಳಲಿದೆ. 8.96 ಕಿ.ಮೀ. ವಯಡಕ್ಟ್ (ಕಮಾನು ಸೇತುವೆ) ಹಾಗೂ 37.92 ಕಿ.ಮೀ. ಗ್ರೇಡ್ ನಿರ್ಮಾಣಗೊಳ್ಳಲಿದೆ. ಎತ್ತರಿಸಿದ (ಎಲಿವೇಟೆಡ್) 2 ನಿಲ್ದಾಣಗಳು ಸೇರಿದಂತೆ ಒಟ್ಟು 19 ರೈಲು ನಿಲ್ದಾಣಗಳ ನಿರ್ಮಾಣಕ್ಕೆ ಪ್ರತ್ಯೇಕ ಪ್ಯಾಕೇಜ್ ಮಾಡಲಾಗಿದೆ.

ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿ (ಕೆ-ರೈಡ್) ಈ ವರ್ಷದ ಜನವರಿಯಲ್ಲಿ ಟೆಂಡರ್ ಕರೆದಿತ್ತು. ಅಫ್ಕಾನ್ಸ್ ಇನ್ಫ್ರಾಸ್ಟ್ರಕ್ಚರ್, ದಿನೇಶ್ಚಂದ್ರ ಆರ್. ಅಗರವಾಲ್ ಇನ್ಫ್ರಾ ಕಾನ್, ಇನ್‌ಟಾವರ್ಶೊ ಟೆಕ್ನಾಲಜೀಸ್ ಮತ್ತು ಎಲ್ ಆ್ಯಂಡ್ ಟಿ ಕಂಪನಿಗಳು ಬಿಡ್ ಸಲ್ಲಿಸಿದ್ದವು. ಬಿಡ್ ತೆರೆದು ಪರಿಶೀಲಿಸಲಾಯಿತು. ದಿನೇಶ್ಚಂದ್ರ ಆರ್. ಅಗರವಾಲ್ ಇನ್ಫ್ರಾ ಕಾನ್, ಇನ್‌ಟಾವರ್ಶೊ ಟೆಕ್ನಾಲಜೀಸ್ ಬಿಡ್‌ಗಳು ಷರತ್ತಿಗೆ ಅನುಗುಣವಾಗಿರಲಿಲ್ಲ. ಅಫ್ಕಾನ್ಸ್ ಇನ್ಫ್ರಾಸ್ಟ್ರಕ್ಚ ₹1,424 ಕೋಟಿ ಹಾಗೂ ಎಲ್ ಆ್ಯಂಡ್ ಟಿ ಕಂಪನಿಯು ₹ 1,021 ಕೋಟಿ ಬಿಡ್ ಸಲ್ಲಿಸಿದ್ದವು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಈ ಮಾರ್ಗದಲ್ಲಿ ರಾಜಾನುಕುಂಟೆ, ಮುದ್ದನಹಳ್ಳಿ, ಯಲಹಂಕ (ಎಲಿವೇಟೆಡ್ ಇಂಟರ್‌ಚೇಂಜ್), ಜಕ್ಕೂರು, ಹೆಗಡೆ ನಗರ, ಥಣಿಸಂದ್ರ, ಹೆಣ್ಣೂರು, ಹೊರಮಾವು, ಚನ್ನಸಂದ್ರ, ಬೆನ್ನಿಗಾನಹಳ್ಳಿ (ಇಂಟರ್‌ಚೇಂಜ್), ಕಗ್ಗದಾಸಪುರ, ಮಾರತ್ತಹಳ್ಳಿ (ಎಲಿವೇಟೆಡ್), ಬೆಳಂದೂರು ರಸ್ತೆ, ಕಾರ್ಮೆಲರಾಂ, ಅಂಬೇಡ್ಕರ್ ನಗರ, ಹುಸ್ಕೂರು, ಸಿಂಗೇನ ಅಗ್ರಹಾರ, ಬೊಮ್ಮಸಂದ್ರ ಮತ್ತು ಹೀಲಲಿಗೆಯಲ್ಲಿ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. 30 ತಿಂಗಳ ಒಳಗೆ ಕಾಮಗಾರಿ ಮುಗಿಸಲು ಷರತ್ತು ವಿಧಿಸಲಾಗಿದೆ.

ಈಗಾಗಲೇ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ನಡುವಿನ ಕಾರಿಡಾರ್–2 ಮಲ್ಲಿಗೆ ಮಾರ್ಗ (ನೀಲಿ) ಕಾಮಗಾರಿ ಪ್ರಗತಿಯಲ್ಲಿದೆ. ಬೆಂಗಳೂರು ನಗರ–ದೇವನಹಳ್ಳಿ ನಡುವಿನ ಕಾರಿಡಾರ್–1 ಸಂಪಿಗೆ ಮಾರ್ಗ (ಹಸಿರು), ಕೆಂಗೇರಿ–ವೈಟ್‌ಫೀಲ್ಡ್ ನಡುವಿನ ಕಾರಿಡಾರ್–2 ಪಾರಿಜಾತ ಮಾರ್ಗ (ಕೆಂಪು) ಕಾಮಗಾರಿಗಳಿಗೆ ಇನ್ನಷ್ಟೇ ಚಾಲನೆ ದೊರೆಯಬೇಕಿದೆ.

ಕ್ಯಾಷಿಯರ್‌ಗೆ ಚಾಕು ಇರಿತ

ಬೆಂಗಳೂರು: ಯಡಿಯೂರು ಬಳಿಯ ಬಾರ್‌ವೊಂದರ ಕ್ಯಾಷಿಯರ್ ಸ್ವಾಗತ್ ಗೌಡ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಗಸ್ಟ್ 28ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಸ್ವಾಗತ್ ಅವರು ದೂರು ನೀಡಿದ್ದಾರೆ. ಆರೋಪಿ ಪುನೀತ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸ್ವಾಗತ್ ಅವರು ರಾತ್ರಿ ಎಂದಿನಂತೆ ಬಾರ್ ಮುಚ್ಚಿದ್ದರು. ಮನೆಗೆ ಹೊರಡಲು ಸಜ್ಜಾಗಿದ್ದರು. ಅದೇ ಸಮಯದಲ್ಲಿ ಬೈಕ್‌ನಲ್ಲಿ ಬಂದಿದ್ದ ಮೂವರು ಆರೋಪಿಗಳು, ಮದ್ಯ ನೀಡುವಂತೆ ಕೇಳಿದ್ದರು. ‘ಬಾರ್ ಬಂದ್ ಮಾಡಲಾಗಿದೆ. ಮದ್ಯವಿಲ್ಲ’ ಎಂದು ಸ್ವಾಗತ್ ಹೇಳಿದ್ದರು. ಮದ್ಯ ನೀಡದಿದ್ದಕ್ಕೆ ಕೋಪಗೊಂಡಿದ್ದ ಆರೋಪಿಗಳು, ಸ್ವಾಗತ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ನಂತರ, ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

ಬಾರ್ ಸಿಬ್ಬಂದಿ ಹಾಗೂ ಸ್ಥಳೀಯರು, ಸ್ವಾಗತ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಸದ್ಯ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಆರೋಪಿಗಳು ಗಾಂಜಾ ಮತ್ತಿನಲ್ಲಿ ಕೃತ್ಯ ಎಸಗಿರುವ ಅನುಮಾನವಿದೆ’ ಎಂದು ಪೊಲೀಸರು ತಿಳಿಸಿದರು.

ವಾಟ್ಸ್‌ಆ್ಯಪ್‌ನಲ್ಲಿ ಡ್ರಗ್ಸ್ ದಂಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಇಮ್ಯಾನ್ಯೂಲ್ ಆಫಾಮ್ (43) ಹಾಗೂ ಯುಚ್ಚೆನಾ ಲೀವಿಯಸ್ (36) ಬಂಧಿತರು. ಇವರಿಂದ 608 ಗ್ರಾಂ ತೂಕದ 1281 ಎಕ್ಸ್‌ಟೆಸ್ಸಿ ಮಾತ್ರೆಗಳು ಹಾಗೂ 463 ಗ್ರಾಂ ತೂಕದ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆಗಸ್ಟ್ 23ರಂದು ಬೇಗೂರು–ಕೊಪ್ಪ ರಸ್ತೆಯಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳಿಬ್ಬರು, ಉದ್ಯೋಗ ಹಾಗೂ ವಿದ್ಯಾಭ್ಯಾಸದ ಉದ್ದೇಶದಿಂದ ನಗರಕ್ಕೆ ಬಂದಿದ್ದರು. ಹುಳಿಮಾವು ಸಾಯಿ ಗಾರ್ಡನ್ ಬಳಿಯ ಮನೆಯೊಂದರಲ್ಲಿ ನೆಲೆಸಿದ್ದರು. ಹೆಚ್ಚು ಹಣ ಸಂಪಾದಿಸಲು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು. ನೈಜೀರಿಯಾದ ಪೆಡ್ಲರ್‌ಗಳ ಜೊತೆ ಒಡನಾಟ ಹೊಂದಿದ್ದ ಆರೋಪಿಗಳು, ಅವರ ಮೂಲಕವೇ ಡ್ರಗ್ಸ್ ಖರೀದಿಸಿ ನಗರಕ್ಕೆ ತರಿಸಿಕೊಳ್ಳುತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ನಗರದಲ್ಲಿರುವ ಕೆಲ ಕಾಲೇಜು ವಿದ್ಯಾರ್ಥಿಗಳು, ಕಂಪನಿಗಳ ನೌಕರರು ಹಾಗೂ ಇತರರನ್ನು ವಾಟ್ಸ್‌ಆ್ಯಪ್ ಮೂಲಕ ಆರೋಪಿಗಳು ಸಂಪರ್ಕಿಸುತ್ತಿದ್ದರು. ನಂತರ, ಗ್ರಾಹಕರ ಸ್ಥಳಕ್ಕೆ ಹೋಗಿ ಡ್ರಗ್ಸ್ ನೀಡುತ್ತಿದ್ದರು. ನಗದು ಹಾಗೂ ಇ-ಪೇಮೆಂಟ್ ಮೂಲಕ ಹಣ ಪಡೆದುಕೊಳ್ಳುತ್ತಿದ್ದರು’ ಎಂದು ಹೇಳಿವೆ.

ಬಸ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಲೂಕಾಸ್ (64) ಅವರು ಮೃತಪಟ್ಟಿದ್ದಾರೆ.

‘ಈಜಿಪುರದ ನಿವಾಸಿ ಲೂಕಾಸ್, ನಗರದ ಕಾಲೇಜೊಂದರ ನಿವೃತ್ತ ನೌಕರ. ಅಪಘಾತದಲ್ಲಿ ಪತ್ನಿಗೂ ಗಾಯವಾಗಿದೆ’ ಎಂದು ಶಿವಾಜಿನಗರ ಠಾಣೆ ಪೊಲೀಸರು ಹೇಳಿದರು.

ಇಬ್ಬರೂ ಶುಕ್ರವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಚರ್ಚ್‌ಗೆ ಹೊರಟಿದ್ದಾಗ ಕಬ್ಬನ್ ರಸ್ತೆಯ ಮೇನ್ ಗಾರ್ಡ್ ಜಂಕ್ಷನ್ ಬಳಿ ಅಪಘಾತ ಸಂಭವಿಸಿದೆ.

‘ದ್ವಿಚಕ್ರ ವಾಹನ ಸಮೇತ ರಸ್ತೆಗೆ ಬಿದ್ದಿದ್ದ ಲೂಕಾಸ್ ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಜಮೀನು ಮರುಮಂಜೂರಾತಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಯಲಹಂಕ: ಗಂಟಿಗಾನಹಳ್ಳಿ ಗ್ರಾಮದಲ್ಲಿ ಬಡವರ ನಿವೇಶನಕ್ಕಾಗಿ ಸರ್ಕಾರದಿಂದ ಮಂಜೂರಾಗಿದ್ದ ಜಾಗವನ್ನು ಅಧಿಕಾರಿಗಳು ಅಕ್ರಮವಾಗಿ ನಿವೃತ್ತ ಸೈನಿಕರ ಸಂಘಕ್ಕೆ ಮರು ಮಂಜೂರು ಮಾಡಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿದರು.

ಜಾಗವನ್ನು ಬಡವರ ಮನೆಗಳಿಗೆ ಮತ್ತು ಗ್ರಾಮದ ಉಪಯೋಗಕ್ಕೆ ಮೀಸಲಿರಿಸಬೇಕು ಎಂದು ಒತ್ತಾಯಿಸಿದರು.

ಸುಮಾರು 1200 ಜನಸಂಖ್ಯೆ ಇರುವ ಗಂಟಿಗಾನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 17, 18 ಮತ್ತು 19ರಲ್ಲಿ ಸುಮಾರು 6 ಎಕರೆ ಸರ್ಕಾರಿ ಜಾಗವಿದೆ. ಈ ಹಿಂದೆ ರಾಜೀವ್ ಗಾಂಧಿ ಆಶ್ರಯ ಅನುದಾನದಡಿಯಲ್ಲಿ ವಸತಿ ಇಲಾಖೆಯಿಂದ 150 ಮನೆಗಳನ್ನು ನಿರ್ಮಿಸಲಾಗಿತ್ತು. ಈ ಮನೆಗಳಲ್ಲಿ ಗ್ರಾಮದ ಬಡಜನರು ವಾಸಿಸುತ್ತಿದ್ದಾರೆ. 94ಸಿಸಿ ಅಡಿಯಲ್ಲಿ ಹಕ್ಕುಪತ್ರ ನೀಡಬೇಕೆಂದು ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಅಧಿಕಾರಿಗಳು ಈ ಜಮೀನನ್ನು ಮುಖ್ಯ ರಸ್ತೆಯನ್ನೂ ಸೇರಿಸಿ ನಿವೃತ್ತ ಸೈನಿಕರ ವಸತಿ ಸಮುಚ್ಚಯಕ್ಕೆ ಅಕ್ರಮವಾಗಿ ಮರು ಮಂಜೂರು ಮಾಡಿ ಆದೇಶ ಹೊರಡಿಸಿದ್ದಾರೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಲಕ್ಷ್ಮೀಪತಿ ನೇತೃತ್ವದಲ್ಲಿ ಗ್ರಾಮಸ್ಥರು ದೂರಿದರು.

ಗಂಟಿಗಾನಹಳ್ಳಿ ಗ್ರಾಮದ ನಿವಾಸಿ ಸುಶೀಲಮ್ಮ, ರಾಮಮೂರ್ತಿ ಮತ್ತಿತರರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.


ಗ್ರಾಮದ ಸರ್ಕಾರಿ ಜಾಗದಲ್ಲಿ ದೇವಸ್ಥಾನ, ರಾಜಕಾಲುವೆ, ನೀರಿನ ಮೂಲಗಳು ಹಾಗೂ ಸ್ಮಶಾನವಿದೆ. ತಲತಲಾಂತರದಿಂದ ಗ್ರಾಮಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಬಗ್ಗೆ ಮತ್ತು ಈಗಾಗಲೇ ನೀಡಿರುವ ನಿವೇಶಗಳು ಹಾಗೂ ಶಾಲೆ, ಸ್ಮಶಾನ ಮತ್ತಿತರ ಗ್ರಾಮದ ಅನುಕೂಲಕ್ಕಾಗಿ ಜಾಗವನ್ನು ಮೀಸಲಿಡಬೇಕೆಂದು ಈ ಹಿಂದೆ ಗ್ರಾಮಸ್ಥರು ಸಲ್ಲಿಸಿದ್ದ ಮನವಿಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ನೀಡಲಾಗಿದೆ ಎಂದು ಪಿಡಿಒ ಪೂಣಚ್ಚ ತಿಳಿಸಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಲಾವಣ್ಯ ನರಸಿಂಹಮೂರ್ತಿ ಇದ್ದರು.



ಗಂಟಿಗಾನಹಳ್ಳಿ ಗ್ರಾಮಸ್ಥರು ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿದರು.



ಜಲಾವೃತಗೊಂಡಿದ್ದ ಆರ್‌ಎಂವಿ 2ನೇ ಹಂತದ ಸೌಂದರ್ಯ ಉದ್ಯಾನ – ಪ್ರಜಾವಾಣಿ ಚಿತ್ರಗಳು



ಹೆಬ್ಬಾಳ ಮೇಲ್ಸೇತುವೆಯಲ್ಲಿ ನೀರು ಹೊರಹಾಕಲು ಶ್ರಮಿಸಿದ ಸಂಚಾರ ವಿಭಾಗದ ಕಾನ್‌ಸ್ಟೆಬಲ್

ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ

ನಗರದಲ್ಲಿ ಭಾರೀ ಮಳೆಗೆ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಸಂಚಾರ ವಿಭಾಗದ ಪೊಲೀಸರು ತಡರಾತ್ರಿ ತನಕ ಉತ್ತಮ ಕೆಲಸ ಮಾಡಿ ಸಂಚಾರಕ್ಕೆ ಅನುಕೂಲ ಕಲ್ಪಿಸಿದ್ದಾರೆ. ಹೆಬ್ಬಾಳದಲ್ಲಿ ಸಂಗ್ರಹವಾಗಿದ್ದ ಅಪಾರ ಪ್ರಮಾಣದ ನೀರಿನಲ್ಲೇ ಮುಂದೆ ಸಾಗಿ ನೀರು ಹೊರಹೋಗುವಂತೆ ಮಾಡಿದ್ದಾರೆ. ಪೊಲೀಸರ ಕಾರ್ಯ ಶ್ಲಾಘನೀಯ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು 'ಎಕ್ಸ್' ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ.



ಡಾಲರ್ಸ್ ಕಾಲೊನಿಯಲ್ಲಿ ರಸ್ತೆಗೆ ಉರುಳಿದ್ದ ಮರ

ದೇಗುಲ, ಉದ್ಯಾನಕ್ಕೆ ನುಗ್ಗಿದ ನೀರು: ದೊಡ್ಡ ಬೊಮ್ಮಸಂದ್ರ, ಗುಟ್ಟಹಳ್ಳಿಯಲ್ಲಿ ಭಾರೀ ಮಳೆ

ಮಳೆ ಆರ್ಭಟ: ಹಲವೆಡೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಲಿಕಾನ್ ಸಿಟಿ'ಯ ಬಹುತೇಕ ಭಾಗದಲ್ಲಿ ಗುರುವಾರ ರಾತ್ರಿ 9 ಗಂಟೆಯಿಂದ ತಡರಾತ್ರಿವರೆಗೆ ಸುರಿದ ಧಾರಾಕಾರ ಮಳೆಯಿಂದ, ಹಲವು ರಸ್ತೆಗಳು ಸಂಪೂರ್ಣ ಜಲಾವೃತಗೊಂಡಿದ್ದವು. ದೇವಸ್ಥಾನ, ಉದ್ಯಾನ, ಮನೆಗಳಿಗೂ ನೀರು ನುಗ್ಗಿ ನಷ್ಟ ಸಂಭವಿಸಿದೆ.

ಮಲ್ಲೇಶ್ವರದ ರಾಯರ ಮಠಕ್ಕೆ ಮಳೆ ನೀರು ನುಗ್ಗಿ ಪೂಜಾ ಕಾರ್ಯಕ್ಕೆ ಅಡ್ಡಿ ಉಂಟಾಯಿತು. ಅರ್ಚಕರು ಹಾಗೂ ಭಕ್ತರು ಮಳೆಯ ನೀರನ್ನು ಹೊರಹಾಕಲು ಶ್ರಮಿಸಿದರು. ನೀರು ಹೊರಹಾಕಿದ ನಂತರ ಪೂಜಾ ಕಾರ್ಯಗಳು ನಡೆದವು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನ ಸಂಚಾರ ಸ್ಥಗಿತಗೊಂಡಿತ್ತು. ಸಂಚಾರ ಪೊಲೀಸ್ ವಿಭಾಗದ ಕಾನ್‌ಸ್ಟೆಬಲ್ ಒಬ್ಬರು ನೀರಿನಲ್ಲಿಯೇ ಸಾಗಿ ಪೈಪ್‌ನಲ್ಲಿ ಕಟ್ಟಿದ್ದ ಕಸ ತೆಗೆದು ನೀರು ಸರಾಗವಾಗಿ ಹರಿಯುವಂತೆ ಮಾಡಿದರು. ನಂತರವೇ, ವಾಹನಗಳು ಮುಂದಕ್ಕೆ ಚಲಿಸಲು ಸಾಧ್ಯವಾಯಿತು. ಹೆಬ್ಬಾಳ ಸುತ್ತಮುತ್ತ ಭಾರೀ ಮಳೆ ಸುರಿದ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಶಿವಾನಂದ ಅಂಡರ್‌ಪಾಸ್‌ನಲ್ಲೂ ನೀರು ಸಂಗ್ರಹವಾಗಿದ್ದರಿಂದ ವಾಹನ ಸಂಚಾರ ಸ್ಥಗಿತಗೊಂಡಿತ್ತು. ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದವು. ಬಿಡಿಎ ಕಚೇರಿ ಬಳಿಯ ಕೆಳಸೇತುವೆ ಬಳಿ ಅಪಾರ ಪ್ರಮಾಣದ ನೀರು ನಿಂತು ಸಮಸ್ಯೆ ಎದುರಾಗಿತ್ತು. ಸಿಲ್ಕ್‌ಬೋರ್ಡ್ ಜಂಕ್ಷನ್‌ನಲ್ಲಿ ನೀರು ಸಂಗ್ರಹಗೊಂಡು ವಾಹನಗಳು ಸಾಗಲು ಸಮಸ್ಯೆ ಉಂಟಾಗಿತ್ತು. ಈ ಭಾಗದ ರಸ್ತೆಗಳು ಜಲಾವೃತಗೊಂಡಿದ್ದವು. ಶಾಂತಿನಗರದ ರಾಜಕಾಲುವೆಯಲ್ಲಿ ಅಪಾರ ಪ್ರಮಾಣದ ನೀರು ಹರಿಯಿತು. ಸಹಕಾರ ನಗರದಲ್ಲಿ ಹೋಟೆಲ್ ಮತ್ತು ಮೆಡಿಕಲ್ ಶಾಪ್‌ಗಳಿಗೆ ಮಳೆ ನೀರು ನುಗ್ಗಿ ನಷ್ಟವಾಗಿದೆ.

ಕೆರೆಯಂತಾದ ಉದ್ಯಾನ: ಆರ್‌ಎಂವಿ 2ನೇ ಹಂತದ ಸೌಂದರ್ಯ ಉದ್ಯಾನಕ್ಕೆ ಚರಂಡಿ ನೀರು ನುಗ್ಗಿ ಸಂಪೂರ್ಣ ಜಲಾವೃತಗೊಂಡಿತ್ತು. ಶುಕ್ರವಾರ ಬೆಳಿಗ್ಗೆ ವಾಯುವಿಹಾರಕ್ಕೆ ಬಂದವರು ಹಿಂತಿರುಗಿದರು.


ಎಂಎಸ್ ಪಾಳ್ಯದ ಹಲವು ಮನೆಗಳಿಗೆ ಮಳೆಯ ನೀರು ನುಗ್ಗಿತ್ತು. ಅಗತ್ಯ ವಸ್ತುಗಳು ನೀರಿನಲ್ಲಿ ತೇಲಿದವು. ರಾತ್ರಿಯಿಡೀ ಜಾಗರಣೆ ಮಾಡಿದ್ದ ನಿವಾಸಿಗಳು ಶುಕ್ರವಾರ ಬೆಳಿಗ್ಗೆ ನೀರು ಹೊರಹಾಕಿದರು.

ಉರುಳಿದ ಮರಗಳು: ಮಳೆ ಹಾಗೂ ಗಾಳಿಗೆ ನಗರದ 20 ಸ್ಥಳದಲ್ಲಿ ಬೃಹತ್ ಮರಗಳು ಧರೆಗೆ ಉರುಳಿದ್ದವು. ಸಂಜಯನಗರ, ಶಾಂತಿನಗರ, ಕೋರಮಂಗಲ, ಸದಾಶಿವನಗರ, ಹೊಸೂರು, ಕೋರಮಂಗಲ, ವೈಯ್ಯಾಲಿಕಾವಲ್ ಮುಖ್ಯರಸ್ತೆಯಲ್ಲಿ ಮರಗಳು ಉರುಳಿದ್ದವು. ಪರಪ್ಪನ ಅಗ್ರಹಾರದ ರಾಯಲ್ ಕಂಟ್ರಿ ಲೇಔಟ್‌ನಲ್ಲಿ ಮಳೆಯಿಂದ ರಸ್ತೆಯ ಒಂದು ಭಾಗ ಕೊಚ್ಚಿ ಹೋಗಿತ್ತು.

ಸೆ.7ರ ತನಕ ನಗರದಲ್ಲೂ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಎಚ್ಚರ ವಹಿಸುವಂತೆ ಹವಾಮಾನ ಇಲಾಖೆ ತಿಳಿಸಿದೆ.



ಮಳೆ, ಗಾಳಿಗೆ ಹೊಸೂರು ರಸ್ತೆಯಲ್ಲಿ ಧರೆಗುರುಳಿದ್ದ ಬೃಹತ್ ಮರ



ಡಾಲರ್ಸ್ ಕಾಲೊನಿಯ ಅಪಾರ್ಟ್‌ಮೆಂಟ್‌ನ ನೆಲಮಹಡಿಯಲ್ಲಿ ಸಂಗ್ರಹಗೊಂಡಿದ್ದ ಮಳೆ ನೀರು

ರಸ್ತೆಗಳು ಜಲಾವೃತ: ವಿದ್ಯುತ್ ವ್ಯತ್ಯಯ

ನೆಲಮಂಗಲ: ಪಟ್ಟಣದಲ್ಲೂ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಪಟ್ಟಣದಲ್ಲಿ 84 ಮಿ.ಮೀ, ಶಿವಗಂಗೆಯಲ್ಲಿ 76, ತ್ಯಾಮಗೊಂಡ್ಲುನಲ್ಲಿ 114 ಮೀ.ಮೀ ಮಳೆಯಾಗಿದೆ.

ನೆಲಮಂಗಲ ಕೆರೆ ಹಾಗೂ ರಾಜಕಾಲುವೆ ನೀರು ಮನೆಗಳಿಗೆ ನೀರು ನುಗ್ಗುಬಹುದು ಜನರು ರಾತ್ರಿಯಿಡೀ ಆತಂಕಗೊಂಡಿದ್ದರು. ರಸ್ತೆಗಳಲ್ಲಿ ಮೊಣಕಾಲುದ್ದ ನೀರು ಹರಿಯುತ್ತಿದ್ದರಿಂದ ದ್ವಿಚಕ್ರ ವಾಹನ ಸವಾರರು ಪರ್ಯಾಯ ರಸ್ತೆಗಳನ್ನು ಬಳಸಿ ಮನೆಗೆ ತೆರಳಿದರು.

24 ಗಂಟೆಯ ಅವಧಿಯಲ್ಲಿ ಸುರಿದ ಮಳೆ ಪ್ರಮಾಣ (ಮಿ.ಮೀಗಳಲ್ಲಿ)

ರಾಜಮಹಲ್ ಗುಟ್ಟಹಳ್ಳಿ	136
ದೊಡ್ಡ ಬೊಮ್ಮಸಂದ್ರ ಹಾಗೂ ವಿದ್ಯಾರಣ್ಯಪುರ	112
ಬಸವನಗುಡಿ, ವಿದ್ಯಾಪೀಠ, ಕುಮಾರಸ್ವಾಮಿ ಲೇಔಟ್	95
ಶಾಂತಿನಗರ, ಸಂಪಂಗಿರಾಮನಗರ	89
ಎಚ್‌ಎಎಲ್	87
ಕೊಡಿಗೇಹಳ್ಳಿ	86
ರಾಜರಾಜೇಶ್ವರಿನಗರ	84
ಕೆಂಗೇರಿ	76
ಯಲಹಂಕ	74

ಮಳೆ: ಸನ್ನದ್ಧರಾಗಲು ಸೂಚನೆ

ಬೆಂಗಳೂರು: ಮಳೆ ಸಂದರ್ಭದಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಲು ಸನ್ನದ್ಧರಾಗಿರಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸೆಪ್ಟೆಂಬರ್ ಮೊದಲ ವಾರದಲ್ಲಿ ಹೆಚ್ಚು ಮಳೆ ಸುರಿಯುವ ಮುನ್ಸೂಚನೆ ಇತ್ತು, ಎಲ್ಲ ವಲಯ ಆಯುಕ್ತರು, ಜಂಟಿ ಆಯುಕ್ತರು ಮತ್ತು ಮುಖ್ಯ ಎಂಜಿನಿಯರ್‌ಗಳು ಮಳೆ ಅವಘಡಗಳನ್ನು ಎದುರಿಸಲು ಸಜ್ಜಾಗಿರಬೇಕು ಎಂದು ಹೇಳಿದ್ದಾರೆ.

ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು, ಗುರುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಮುಖ್ಯ ಎಂಜಿನಿಯರ್‌ಗಳು ಭೇಟಿ ನೀಡಿ ಸಾರ್ವಜನಿಕರ ಅಹವಾಲುಗಳಿಗೆ ಕೂಡಲೇ ಸ್ಪಂದಿಸಬೇಕು ಎಂದರು.

ಪಾಲಿಕೆಯ ವಿಪತ್ತು ನಿರ್ವಹಣಾ ತಂಡ ದಿನದ 24 ಗಂಟೆಯೂ ಸನ್ನದರಾಗಿದ್ದು ಸಮರೋಪಾದಿಯಲ್ಲಿ ಅತಿವೃಷ್ಟಿ ಪ್ರದೇಶಗಳಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿಕೊಳ್ಳಬೇಕು ಎಂದು ಸೂಚಿಸಿದರು.

ಪಾಲಿಕೆ ಎಲ್ಲಾ ವಲಯದ ಮುಖ್ಯ ಎಂಜಿನಿಯರ್‌ಗಳು ತಕ್ಷಣವೇ ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳ ಜೊತೆ ಸಮನ್ವಯ ನಡೆಸಬೇಕು. ಪ್ರಮುಖ ನೀರು ನಿಲ್ಲುವ ಸ್ಥಳಗಳನ್ನು ಪರಿಶೀಲಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ತುಷಾರ್ ಗಿರಿನಾಥ್ ಹೇಳಿದರು.

ಮಣಿಪಾಲ್ ಹಾಸ್ಪಿಟಲ್ಸ್ ವತಿಯಿಂದ ಆರಂಭ: ಅತ್ಯಾಧುನಿಕ ಸೌಲಭ್ಯಗಳ ಆಂಬುಲೆನ್ಸ್

ನವಜಾತ ಶಿಶುಗಳ ಆರೈಕೆಗೆ 'ಮಾರ್ಸ್ ನೌ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಜಾತ ಶಿಶುಗಳಿಗೆ ಸಮಗ್ರ ವೈದ್ಯಕೀಯ ಸೇವೆ ಒದಗಿಸಲು ಮಣಿಪಾಲ್ ಹಾಸ್ಪಿಟಲ್ಸ್ ವತಿಯಿಂದ ಆರಂಭಿಸಿರುವ 'ಮಾರ್ಸ್ ನೌ' ಆಂಬುಲೆನ್ಸ್ ಸೇವೆಗೆ ಶುಕ್ರವಾರ ಚಾಲನೆ ನೀಡಲಾಯಿತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಈ ಸೇವೆಗೆ ಶುಕ್ರವಾರ ಚಾಲನೆ ನೀಡಿದರು.

ನವಜಾತ ಶಿಶುವಿನ ಜೀವನದ ಮೊದಲ ಕೆಲವು ಗಂಟೆಗಳು ಮತ್ತು ದಿನಗಳು ಮುಖ್ಯವಾಗಿರುತ್ತವೆ. ಅದರಲ್ಲೂ ಅವಧಿಪೂರ್ವ ಅಥವಾ ವಿವಿಧ ಪರಿಸ್ಥಿತಿಗಳೊಂದಿಗೆ ಜನಿಸಿದ ಮಕ್ಕಳು ಹೊರಗಿನ ಪ್ರಪಂಚದ ವಾತಾವರಣಕ್ಕೆ ಹೊಂದಿಕೊಳ್ಳಲು ಕಷ್ಟಪಡುತ್ತವೆ. ಹೀಗಾಗಿ, 'ಮಣಿಪಾಲ್ ಆಂಬುಲೆನ್ಸ್ ರೆಸ್ಪಾನ್ಸ್ ಸರ್ವಿಸ್ - ನಿಯೋನಾಟಲ್-ಕೇರ್ ಆನ್ ವೀಲ್ಸ್' ಯೋಜನೆ ರೂಪಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷ ಡಾ. ಎಚ್ ಸುದರ್ಶನ್ ಬಲ್ಲಾಳ್, 'ನವಜಾತ ಶಿಶುಗಳಿಗೆ ಉತ್ತಮ ಆರೈಕೆ ದೊರೆಯಬೇಕು ಎನ್ನುವ ಉದ್ದೇಶದಿಂದ ಹೊಸ ಸೌಲಭ್ಯ ಕಲ್ಪಿಸಲಾಗಿದೆ. ಈ ಸೇವೆಯು ಮಣಿಪಾಲ್ ಆಸ್ಪತ್ರೆಗಳಿಗೆ ಭೇಟಿ ನೀಡುವ ನವಜಾತ ಶಿಶು ರೋಗಿಗಳಿಗೆ ಮಾತ್ರವಲ್ಲದೆ ಬೆಂಗಳೂರು ಮತ್ತು ಕರ್ನಾಟಕದ ಇತರ ಅನೇಕ ಪ್ರದೇಶಗಳಲ್ಲಿ ವಾಸಿಸುವ ಅಗತ್ಯವಿರುವ ಜನರಿಗೂ ಲಭ್ಯವಿದೆ' ಎಂದು ತಿಳಿಸಿದರು.

'ಹೊಸದಾಗಿ ಪ್ರಾರಂಭಿಸಲಾದ ಸೇವೆಯು ಆಂಬುಲೆನ್ಸ್‌ನಲ್ಲಿ ಎಲ್ಲ ಅಗತ್ಯ ಇರುವ ಮತ್ತು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಸುಸಜ್ಜಿತವಾಗಿದೆ. ಯಾವುದೇ ಕಷ್ಟಕರ ಸಂದರ್ಭಗಳನ್ನು ಕಡಿಮೆಗೊಳಿಸುವ ಗುರಿಯನ್ನು ಇದು ಹೊಂದಿದೆ' ಎಂದು ತಿಳಿಸಿದರು.

'ಪ್ರತಿ ಆಂಬುಲೆನ್ಸ್‌ನಲ್ಲಿ ಶಿಶು ಇನ್‌ಕ್ಯುಬೇಟರ್‌ಗಳು, ಹೃದಯ ಮತ್ತು ಶ್ವಾಸಕೋಶದ ಮಾನಿಟರ್‌ಗಳು, ಹೈ-ಫ್ರೀಕ್ವೆನ್ಸಿ ಮತ್ತು ಸಾಂಪ್ರದಾಯಿಕ ವೆಂಟಿಲೇಟರ್‌ಗಳು, ನೈಟ್ರಿಕ್ ಆಕ್ಸೈಡ್ ಪೂರೈಕೆ, ಬ್ಲಾಂಕೆಟ್ ವಾರ್ಮರ್‌ಗಳು, ಸುರಕ್ಷಿತ ಪ್ರಯಾಣಕ್ಕಾಗಿ ಸುಧಾರಿತ ವಾಹನದ ಸಸ್ಪೆನ್ಷನ್ ಇತ್ಯಾದಿ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಸಂಪೂರ್ಣವಾಗಿ ಅಳವಡಿಸಲಾಗಿದೆ' ಎಂದು ವಿವರಿಸಿದರು.

ಮಣಿಪಾಲ್ ಹಾಸ್ಪಿಟಲ್‌ನ ಕನ್ಸಲ್ಟಂಟ್ ಡಾ. ಕಾರ್ತಿಕ್ ನಾಗೇಶ್ ಮಾತನಾಡಿ, 'ಮಾರ್ಸ್-ನೌನಲ್ಲಿ ಮಗುವು ಆಸ್ಪತ್ರೆ ಆವರಣ ತಲುಪುವ ಮೊದಲೇ ಆರೈಕೆಯನ್ನು ಪಡೆಯಲು ಆರಂಭಿಸುತ್ತದೆ. ಈಗ ನಾಲ್ಕು ಆಂಬುಲೆನ್ಸ್‌ಗಳೊಂದಿಗೆ ಪ್ರಾರಂಭಿಸಿದ್ದೇವೆ. ಪ್ರತಿ ಆಂಬುಲೆನ್ಸ್‌ಗಳಲ್ಲಿ ನವಜಾತ ಸಲಹೆಗಾರರು, ತರಬೇತಿ ಪಡೆದ ದಾದಿಯರು ಮತ್ತು ವೈದ್ಯಕೀಯ ಸಿಬ್ಬಂದಿ ಇರುತ್ತಾರೆ. ಇದು ಗಂಭೀರವಾದ ಅನಾರೋಗ್ಯವನ್ನು ಹೊಂದಿರುವ ಶಿಶುಗಳಿಗೆ ಸುರಕ್ಷಿತ ಪ್ರಯಾಣ ಒದಗಿಸುತ್ತದೆ' ಎಂದು ವಿವರಿಸಿದರು.

ನಟಿ ತಾರಾ ಅನುರಾಧ, ಡಾ. ಕಾರ್ತಿಕ್ ನಾಗೇಶ್, ಡಾ ರಜತ್ ಪೇಜಾವರ್, ಡಾ. ಎಚ್.ಎ. ವೆಂಕಟೇಶ್ ಇದ್ದರು.



ಮಣಿಪಾಲ್ ಆಸ್ಪತ್ರೆ ಆರಂಭಿಸಿರುವ 'ಮಾರ್ಸ್ ನೌ' ಆಂಬುಲೆನ್ಸ್ ಸೇವೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಡಾ.ಎಚ್.ಎ. ವೆಂಕಟೇಶ್, ಡಾ. ಸಂಜೀವ್ ರೆಡ್ಡಿ, ಡಾ. ರಜತ್ ಪೇಜಾವರ್, ಡಾ. ಸಾಗರ್ ಶರ್ಮಾ, ನಟಿ ತಾರಾ ಅನುರಾಧ, ಮಣಿಪಾಲ್ ಹಾಸ್ಪಿಟಲ್ಸ್ ಅಧ್ಯಕ್ಷ ಡಾ. ಎಚ್. ಸುದರ್ಶನ್ ಬಲ್ಲಾಳ್ ಇದ್ದರು.

ಬಿಬಿಎಂಪಿ ವಾರ್ಡ್ ಪುನರ್‌ರಚನೆ: 3 ಸಾವಿರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ರಚಿಸಿ ಸರ್ಕಾರ ಹೊರಡಿಸಿದ್ದ ಕರಡು ಅಧಿಸೂಚನೆಗೆ ಮೂರು ಸಾವಿರಕ್ಕೂ ಹೆಚ್ಚು ಆಕ್ಷೇಪಣೆಗಳು ಸಲ್ಲಿಕೆಯಾಗಿವೆ.

ಈ ಹಿಂದೆ ಅಧಿಸೂಚಿಸಿದ್ದ 224 ವಾರ್ಡ್‌ಗಳನ್ನು ಪುನರ್ ರಚಿಸಿ ಸರ್ಕಾರ, ಆ. 18ರಂದು 225 ವಾರ್ಡ್‌ಗಳ ಗಡಿ ಗುರುತಿಸಿ ಅಧಿಸೂಚಿಸಿತ್ತು. ಈ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಸೆ.1ರವರೆಗೆ ಅವಕಾಶವಿತ್ತು. ಈ ಅವಧಿಯಲ್ಲಿ 3 ಸಾವಿರ ಆಕ್ಷೇಪಣೆಗಳು ನಗರಾಭಿವೃದ್ಧಿ ಇಲಾಖೆಗೆ ತಲುಪಿವೆ.

ಗಡಿ, ವಾರ್ಡ್‌ಗಳ ಹೆಸರು, ಪ್ರದೇಶಗಳ ಹೆಸರು ನಮೂದಾಗದಿರುವುದು ಪ್ರಮುಖ ಆಕ್ಷೇಪಣೆಗಳಾಗಿವೆ. ಶುಕ್ರವಾರ ಸಂಜೆವರೆಗೂ ಆಕ್ಷೇಪಗಳನ್ನು ಸ್ವೀಕರಿಸಲಾಗಿದೆ. ಎಲ್ಲವನ್ನು ಒಟ್ಟುಗೂಡಿಸಿ, ವಿಷಯವಾರು ವರ್ಗಾಯಿಸಲಾಗುತ್ತದೆ. ಎಲ್ಲವನ್ನೂ ಪರಿಶೀಲಿಸಿ ಇನ್ನೊಂದು ವಾರದಲ್ಲಿ ವಾರ್ಡ್‌ಗಳ ಅಂತಿಮ ಅಧಿಸೂಚನೆ ಹೊರಬೀಳಲಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಚಿತ್ರಾವಳಿ



ಜಯನಗರದ 5ನೇ ಬ್ಲಾಕ್‌ನಲ್ಲಿರುವ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶುಕ್ರವಾರ 352ನೇ ಆರಾಧನಾ ಮಹೋತ್ಸವದ ಮಧ್ಯಾರಾಧನೆ ವಿಜೃಂಭಣೆಯಿಂದ ನೆರವೇರಿತು



ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ ಮಧ್ಯಾರಾಧನೆ ನಿಮಿತ್ತ ಭಕ್ತರು ಶುಕ್ರವಾರ ರಾಯರ ದರ್ಶನ ಪಡೆದರು – ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಇಂದು

ಶ್ರೀಮದ್ಭಾಗವತ ಸಪ್ತಾಹ: ಸ್ಕಂದ 8, 9 ಅಧ್ಯಾಯ-3(ಸ್ಕಂದ-10) ಶ್ರೀಕೃಷ್ಣ ಆವಿರ್ಭಾವ, ಆಯೋಜನೆ ಮತ್ತು ಸ್ಥಳ: ರಾಧಾಕೃಷ್ಣ ದೇವಸ್ಥಾನ ಭಕ್ತ ಮಂಡಳಿ, ಸಂಜಯನಗರ, ಬೆಳಿಗ್ಗೆ 6.30ರಿಂದ

ವಚನ ಶ್ರಾವಣ: ವಚನ ಗಾಯನ -ಎಸ್.ಪಿನಾಕಪಾಣಿ, ವಚನ ಚಿಂತನ: ಪ್ರಭು ಇಸುವನಹಳ್ಳಿ, ಅಧ್ಯಕ್ಷತೆ: ಸುರೇಶ್ ಸೂಡಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಎಸ್.ಎಸ್.ಪಬ್ಲಿಕ್ ಶಾಲೆ, ವಿಘ್ನೇಶ್ವರನಗರ, ಸುಂಕದಕಟ್ಟೆ, ಬೆಳಿಗ್ಗೆ 9.30

ಭರತನಾಟ್ಯ ರಂಗಪ್ರವೇಶ: ಅರುಷಿ ಯು.ಜಿ., ಶ್ರೀಲಕ್ಷ್ಮಿ ಪ್ರಣತಿ ಪಿ., ಅತಿಥಿಗಳು: ರೇಖಾ ರಾಜು, ಸ್ನೇಹಾ ಭಾಗವತ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10.30

'ಹಾಸ್ಯನಟ ನರಸಿಂಹರಾಜು ಅವರ ಶತಮಾನೋತ್ಸವ ಸಂದರ್ಭದಲ್ಲಿ ಒಂದು ನೆನಪು' ಉಪನ್ಯಾಸ: ಎನ್.ಎಸ್. ಶ್ರೀಧರ ಮೂರ್ತಿ, ಉಪಸ್ಥಿತಿ: ಸುಧಾ ನರಸಿಂಹಮೂರ್ತಿ, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ದಿ ಮಿಥಿಕ್ ಸೊಸೈಟಿ, ಸ್ಥಳ: ಬಿ.ಪಿ.ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ಶಿಕ್ಷಕರ ದಿನಾಚರಣೆ, 'ಡಾ.ಎಸ್. ರಾಧಾಕೃಷ್ಣನ್ ಪ್ರಶಸ್ತಿ' ಸಮಾರಂಭ: ಉದ್ಘಾಟನೆ: ಎಂ.ಬಿ.ಪಾಟೀಲ, ಪುಸ್ತಕ ಬಿಡುಗಡೆ: ದಿನೇಶ್ ಗುಂಡೂರಾವ್, ಪ್ರಶಸ್ತಿ ಪ್ರದಾನ: ಮಧು ಬಂಗಾರಪ್ಪ, ಜಿ.ಎಸ್.ಪಾಟೀಲ, ಪುಟ್ಟಣ್ಣ, ಪ್ರತಿಭಾ ಪರೀಕ್ಷೆ ಉದ್ಘಾಟನೆ: ಕೆ.ಗೋವಿಂದರಾಜು, ಎನ್.ಎಚ್. ಕೋನರಡ್ಡಿ, ಎಸ್.ಪಿ.ದಯಾನಂದ, ಆಯೋಜನೆ: ಕರ್ನಾಟಕ ಪ್ರತಿಭಾ ಅಕಾಡೆಮಿ, ಸ್ಥಳ: ಸರ್ ಪುಟ್ಟಣಚೆಟ್ಟಿ ಪುರಭವನ, ಬೆಳಿಗ್ಗೆ 10.30ರಿಂದ

ವರ್ಣಂ-2023: ಅತಿಥಿಗಳು: ಸಿ.ಕೆ.ರಾಮಮೂರ್ತಿ, ಭರತ ಭೂಪಣ್ಣ, ವಿನಯ ರತ್ನಸಿದ್ಧಿ, ಆಯೋಜನೆ: ಡ್ರೀಮ್ ಆ್ಯಂಡ್ ಸಿಜಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4ರಿಂದ

ಏರೊಸ್ಪೇಸ್ ಎಂಜಿನಿಯರ್‌ಗಳ ರಾಷ್ಟ್ರೀಯ ಸಮಾವೇಶ: ಅತಿಥಿಗಳು: ಗುಂಜನ್ ಕೃಷ್ಣನ್, ಬಿ.ಎನ್.ಸುರೇಶ್, ಆಯೋಜನೆ ಮತ್ತು ಸ್ಥಳ: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಸಂಜೆ 4.30ರಿಂದ

ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಸಂಸ್ಮರಣ ಸಂಗೀತೋತ್ಸವ: ಅತಿಥಿಗಳು-ಗೋಪಾಲ್ ಬಿ. ಹೊಸೂರ್, ಪ್ರವೀಣ್ ಗೋಡ್ಖಿಂಡಿ, 'ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಸ್ಮಾರಕ ಪ್ರಶಸ್ತಿ' ಪ್ರದಾನ ಪುರಸ್ಕೃತರು: ಪದ್ಮಾ ತಲ್ವಾಲ್ಕರ್, ಶೆಹನಾಯಿ: ಸಂಜೀವ ಶಂಕರ್, ಅಶ್ವನಿ ಶಂಕರ್, ತಬಲಾ: ಶುಭ ಮಹರಾಜ್, ಗಾಯನ: ಪದ್ಮಾ ತಲ್ವಾಲ್ಕರ್, ತಬಲಾ: ಜಗದೀಶ್ ಕುರ್ತಕೋಟಿ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5ರಿಂದ



ಪ್ರವೀಣ್ ಗೋಡ್ಖಿಂಡಿ

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ಭರತನಾಟ್ಯ ಪ್ರದರ್ಶನ: ಸುಚಿತ್ರ ಅಲಕನಂದ ಅವರ ಶಿಷ್ಯವೃಂದ, ಮಹಾರಥೋತ್ಸವ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಶೇಷಾದ್ರಿಪುರ, ಬೆಳಿಗ್ಗೆ 10ರಿಂದ

ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ: ಹರಿನಾಮ ಸಂಕೀರ್ತನೆ: ಸುಘೋಷ ಭಜನಾ ಮಂಡಳಿ ಬೆಳಿಗ್ಗೆ 9ಕ್ಕೆ, ಪಂಡಿತರಿಂದ ಪ್ರವಚನ 10ಕ್ಕೆ, ರಜತ ರಥೋತ್ಸವ 11ಕ್ಕೆ, ದೇವರನಾಮಗಳು: ಸರಸ್ವತಿ ಗಾನ ವೃಂದ ಸಂಜೆ 6ರಿಂದ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಶಾಕಾಂಬರಿನಗರ

ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ ಉತ್ತರಾಧನೆ: ರಾಜಬೀದಿ ರಥೋತ್ಸವ, ಬೆಳಿಗ್ಗೆ 8ಕ್ಕೆ, ಪ್ರವಚನ: ವಿಜಯವಿಠಲಾಚಾರ್ 10ಕ್ಕೆ, ಅತಿಥಿಗಳು: ಬೈರತಿ ಸುರೇಶ್, ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಬೆಳಿಗ್ಗೆ 11ಕ್ಕೆ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ

ರಾಘವೇಂದ್ರತೀರ್ಥ ಗುರುಸಾರ್ವಭೌಮರ ಆರಾಧನಾ ಸಪ್ತರಾತ್ರೋತ್ಸವ: ಸ್ಯಾಕ್ಸೊಫೋನ್ ವಾದನ: ದಿವ್ಯಶ್ರೀ ರಂಗನಾಥ ಮತ್ತು ತಂಡ, 'ರಾಘವೇಂದ್ರ ವಿಜಯ' ಪ್ರವಚನ: ಜಗನ್ನಾಥಾಚಾರ್ಯ ರಾಯಚೂರು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 5ರಿಂದ

ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ: ಪಂಚಾಮೃತ ಅಭಿಷೇಕ, ಪಾದಪೂಜೆ, ಕನಕಾಭಿಷೇಕ, ಪ್ರವಚನ, ರಥೋತ್ಸವ, ಪಲ್ಲಕ್ಕಿ ಉತ್ಸವ, ಸ್ವಸ್ತಿವಾಚನ, ಮಹಾಮಂಗಳಾರತಿ, ತೀರ್ಥ ಪ್ರಸಾದ, ಆರ್.ಕೆ.ಪ್ರಸನ್ನಕುಮಾರ್, ಆರ್.ಪಿ.ಪ್ರಶಾಂತ್ ತಂಡದಿಂದ ಯುಗಳಗಾನ, ಆಯೋಜನೆ ಮತ್ತು ಸ್ಥಳ: ಗುರುರಾಘವೇಂದ್ರ ಸೇವಾ ಟ್ರಸ್ಟ್, ಗುರುರಾಜ ಬಡಾವಣೆ, ಕೊತ್ತನೂರು ರಸ್ತೆ, ಕೋಣನಕುಂಟೆ, ಸಂಜೆ 6ರಿಂದ

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ದಾಸವಾಣಿ: ಭವಾನಿ ಭುವನ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಸೀತಾಪತಿ ಅಗ್ರಹಾರ, ಸಂಜೆ 6ರಿಂದ

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ದೇವರನಾಮ- ರಕ್ಷಿತ್ ಕುಲಕರ್ಣಿ, ಪದ್ಮಿನಿ ವಾಸುದೇವ, ರಜನಿ ಹರಿಪ್ರಸಾದ್, ಆಯೋಜನೆ ಮತ್ತು ಸ್ಥಳ: ವ್ಯಾಸರಾಜರ ಮಠ (ಸೋಸಲೆ), ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಸಂಜೆ 6ರಿಂದ

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ದಾಸವಾಣಿ: ಸಂಧ್ಯಾ ಶ್ರೀನಾಥ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಬನಶಂಕರಿ ಸರ್ವಜ್ಞ ಸೇವಾ ಬಳಗ, ಹೊಸಕೆರೆಹಳ್ಳಿ, ಸಂಜೆ 7ರಿಂದ

ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ: ಅಷ್ಟೋತ್ತರ ಸೇವೆ ಬೆಳಿಗ್ಗೆ 6ಕ್ಕೆ, ಪಾದ ಪೂಜೆ, ಪಂಚಾಮೃತ ಅಭಿಷೇಕ 7.30ಕ್ಕೆ, ಅಲಂಕಾರ, ಸಾಮೂಹಿಕ ಕನಕಾಭಿಷೇಕ, ಪ್ರವಚನ, ರಥೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, 9.30ಕ್ಕೆ, 'ರಾಘವೇಂದ್ರ ವಿಜಯ' ಯಕ್ಷಗಾನ ಪ್ರದರ್ಶನ: ಆಯೋಜನೆ: ಗುರುರಾಘವೇಂದ್ರ ಸೇವಾ ಟ್ರಸ್ಟ್, ಸ್ಥಳ: ದೂರವಾಣಿನಗರ

ಶ್ರಾವಣ ಸಂಧ್ಯಾ: ಅತಿಥಿಗಳು: ದ್ವಾರಕಾನಾಥ್ ಎ.ಆರ್., ಗಾಯನ: ಗಂಗಾಧರ ದೇಶಪಾಂಡೆ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಸತೀಶ್ ಭಟ್, ಆಯೋಜನೆ: ಸಪ್ತಕ, ಕಲಾನಂದನಂ, ಸ್ಥಳ: ಸೈಕ್ಸ್ ಸಿಇಒ ಸೆಂಟರ್, ದೊಡ್ಡಗುಬ್ಬಿ, ಕ್ಯಾಲಸನಹಳ್ಳಿ, ಸಂಜೆ 5.30

ಪ್ರವಚನ ವಾಹಿನಿ: ಭರತನಾಟ್ಯ ಪ್ರದರ್ಶನ: ಅರುಣಾ ಪರ್ಫಾಮಿಂಗ್ ಆರ್ಟ್ಸ್ ವಿದ್ಯಾರ್ಥಿಗಳಿಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6ರಿಂದ

'ಬೆಂಗಳೂರ್ ಬ್ಲ್ಯೂಸ್' ಪುಸ್ತಕದ ಬಗ್ಗೆ ಚರ್ಚೆ: ಕಿರ್ತನ ಕುಮಾರ್, ನಂದಿತಾ ಬೋಸ್, ಆಯೋಜನೆ ಮತ್ತು ಸ್ಥಳ: ಆಟ್ಟಾ ಗಲಾಟ್ಟ, ಇಂದಿರಾನಗರ, ಸಂಜೆ 6ರಿಂದ

'ದುಹಿತ್ರಿ' ನಾಟ್ಯ ಪ್ರದರ್ಶನ: ಕಾವ್ಯ ಚಂದ್ರಶೇಖರ್, ಅತಿಥಿಗಳು: ಎ.ಎನ್. ಸುಧೀರ್ ಕುಮಾರ್, ದ್ವಾರಿಥ ವಿಶ್ವನಾಥ್, ಶೇಷಾದ್ರಿ ಅಯ್ಯಂಗಾರ್, ಆಯೋಜನೆ: ನರ್ತಿತಂ, ಸ್ಥಳ: ಪರಂಪರಾ ಸಭಾಂಗಣ, ಬನಶಂಕರಿ, ಸಂಜೆ 6ರಿಂದ

'ಮುಖವಾಡ' ನಾಟಕ ಪ್ರದರ್ಶನ: ನಿರ್ದೇಶನ-ಪ್ರದೀಪ್ ಅಂಚೆ, ರಚನೆ: ಎಸ್.ವಿ.ಕೃಷ್ಣಶರ್ಮ, ಆಯೋಜನೆ: ಸಂಧ್ಯಾ ಕಲಾವಿದರು, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

'ಅಸಂಗತಗಳು' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಪಾಟೀಲ, ನಿರ್ದೇಶನ: ಬಸವರಾಜ ಎಮ್ಮಿಯವರ, ಆಯೋಜನೆ: ಕಲಾವಿಲಾಸಿ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಬಿಬಿಎಂಪಿ ಸಂಘಕ್ಕೆ ಚುನಾವಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿಗೆ ಸೆ.3ರಂದು ಚುನಾವಣೆ ನಡೆಯಲಿದೆ.

ನಾಮಪತ್ರ ವಾಪಸ್ ಪಡೆಯವ ಅವಧಿ ಮುಗಿದ ನಂತರ ಎನ್. ಜೆನಿಫರ್ ಫೆಬಿನಾ ಹಾಗೂ ಕುಮಾರಿ ಅವರು ಕಣದಿಂದ ಹಿಂದೆ ಸರಿದಿದ್ದಾರೆ. ಸಂಘದ ಪ್ರಸ್ತುತ ಅಧ್ಯಕ್ಷ ಅಮೃತ್ ರಾಜ್ ನೇತೃತದ ತಂಡಕ್ಕೆ ಬೆಂಬಲ ಘೋಷಿಸಿದ್ದಾರೆ. ಹೀಗಾಗಿ ಅಂತಿಮವಾಗಿ 33 ಅಭ್ಯರ್ಥಿಗಳು ಉಳಿದಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಭಾನುವಾರ ಮತದಾನ ನಡೆಯಲಿದೆ. ಸಂಜೆ ಫಲಿತಾಂಶ ಪ್ರಕಟವಾಗಲಿದೆ.

ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಚುನಾವಣೆಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಆರೋಗ್ಯ ವೈದ್ಯಾಧಿಕಾರಿ ಡಾ. ಶೋಭಾ ಅವರು ಕಣದಲ್ಲಿದ್ದು, ಹಿರಿಯ ಆರೋಗ್ಯ ಪರಿವೀಕ್ಷಕರಾದ ಆರ್. ರೇಣುಕಾಂಬ, ಕೆ. ಸಂತೋಷ ಕುಮಾರ ನಾಯ್ಕ ಸ್ಪರ್ಧೆಯಲ್ಲಿದ್ದಾರೆ. ಸಹಾಯ ಕಾರ್ಯಪಾಲಕ ಎಂಜಿನಿಯರ್ ಗಳಾದ ವಿ. ಉಮೇಶ್, ಎಚ್.ಕೆ.ತಿಪ್ಪೇಶ್, ಎಂ. ಸಂತೋಷ್‌ಕುಮಾರ್, ಸಹಾಯಕ ಎಂಜಿನಿಯರ್ ಕೆ.ಮಂಜೇಗೌಡ, ಪ್ರಾಂಶುಪಾಲರಾದ ಎನ್.ಎಸ್. ಸೋಮಶೇಖರ್ ಸ್ಪರ್ಧೆಗಿಳಿದಿದ್ದಾರೆ.

ಪ್ರಸ್ತುತ ಸಂಘದ ಅಧ್ಯಕ್ಷರಾಗಿರುವ ಎ. ಅಮೃತ್‌ರಾಜ್ ನೇತೃತ್ವದಲ್ಲಿ ಈ ಏಳು ಜನ ಸೇರಿದಂತೆ 17 ಜನ ಕಾರ್ಯಕಾರಿ ಸಮಿತಿಯ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ. ಅಳಿಲು, ಕೊಳಾಯಿ, ಸಿಂಹ, ಸ್ಟೆತಸ್ಕೋಪ್, ಆಟೊ, ಮೊಲ, ಗಾಳಿಪಟ, ಸೀಲಿಂಗ್ ಫ್ಯಾನ್ ಸೇರಿದಂತೆ ಹಲವು ರೀತಿಯ ಚಿಹ್ನೆಗಳನ್ನು ಅಭ್ಯರ್ಥಿಗಳಿಗೆ ನೀಡಲಾಗಿದೆ. ಸಂಘದಲ್ಲಿ 2600 ಸದಸ್ಯರಿದ್ದು, ಪ್ರತಿಯೊಬ್ಬರೂ 17 ಮಂದಿಗೆ ಮತ ಚಲಾಯಿಸಲು ಅವಕಾಶವಿದೆ.

ಸಂಕ್ಷಿಪ್ತ ಸುದ್ದಿ

ಸೌರವಿಜ್ಞಾನಿಗಳೊಂದಿಗೆ ಸಂವಾದ ಇಂದು

ಬೆಂಗಳೂರು: ಆದಿತ್ಯ ಎಲ್-1 ಉಡಾವಣೆ ಅಂಗವಾಗಿ ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸೆ. 2ರಂದು ಸೌರವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 10.30ಕ್ಕೆ ಸಂವಾದ ನಡೆಯಲಿದ್ದು, ಉದಯಪುರ ಸೌರ ವೀಕ್ಷಣಾಲಯದ ಮಾಜಿ ಮುಖ್ಯಸ್ಥ ಪಿ. ವೆಂಕಟಕೃಷ್ಣನ್, ಆದಿತ್ಯ ಯೋಜನೆ-2ರ ಜಗದೇವ ಸಿಂಗ್, ಇಸ್ರೊ ಮಾಜಿ ಸಹ ನಿರ್ದೇಶಕ ಬಿ.ಆರ್. ಗುರುಪ್ರಸಾದ್ ಹಾಗೂ ಎಚ್.ಆರ್. ಮಧುಸೂದನ್ ಭಾಗವಹಿಸಲಿದ್ದಾರೆ. ಬೆಳಿಗ್ಗೆ 11.30ಕ್ಕೆ ಉಡಾವಣೆಯ ನೇರಪ್ರಸಾರ, ವೀಕ್ಷಕರಿಗೆ ವಿವರಣೆ, ಸೂರ್ಯನ ಕುರಿತು ಭಿತ್ತಿಚಿತ್ರ ಪ್ರದರ್ಶನ ಇರಲಿದೆ.

'ಕಾಂತರಾಜು ವರದಿ ಸೋರಿಕೆ: ಆರೋಪ'

ಬೆಂಗಳೂರು: 'ಜೋಶುವಾ ಪ್ರಾಜೆಕ್ಟ್ ಎಂಬ ಕ್ರೈಸ್ತ ಸಂಸ್ಥೆಗೆ ಎಚ್. ಕಾಂತರಾಜು ಆಯೋಗದ ವರದಿಯು ಸೋರಿಕೆಯಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಸಂಬರಗಿ ದೂರಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಮೆರಿಕದ ಈ ಸಂಸ್ಥೆಯು ಬೇರೆ ಧರ್ಮದವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಕೆಲಸ ಮಾಡುತ್ತಿದೆ. ಆದ್ದರಿಂದ, ಮುಖ್ಯಮಂತ್ರಿ ಅವರು ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಅವರು ಒತ್ತಾಯಿಸಿದರು.

ಪರಿಸರ ಸ್ನೇಹಿ ಹಬ್ಬ ಆಚರಣೆಗೆ ನಾಗರಿಕರಲ್ಲಿ ಬಿಬಿಎಂಪಿ ಮನವಿ

ಗಣೇಶ ಹಬ್ಬ: 63 ಏಕಗವಾಕ್ಷಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಹಬ್ಬದ ಪ್ರಯುಕ್ತ ನಾಗರಿಕರಿಗೆ ಅನುಕೂಲವಾಗುವಂತೆ ಬಿಬಿಎಂಪಿ 64 ಉಪ ವಿಭಾಗಗಳ ಕಚೇರಿಯಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಿದೆ.

ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಶುಕ್ರವಾರ ಸೂಚಿಸಿದರು.

ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಹಾಗೂ ಪಾಲಿಕೆ ವತಿಯಿಂದ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ವಿವಿಧ ಇಲಾಖೆಗಳ ಜೊತೆ ಸಭೆ ನಡೆಸಿ ಅವರು ಮಾತನಾಡಿದರು.

ಗಣೇಶ ವಿಸರ್ಜನೆಗೆ ನಗರದ ಕೇಂದ್ರ ಭಾಗದಲ್ಲಿರುವ ಸ್ಯಾಂಕಿ ಕೆರೆ, ಹಲಸೂರು ಕೆರೆ, ಯಡಿಯೂರು ಕೆರೆ, ಹೆಬ್ಬಾಳ ಕೆರೆ ಹಾಗೂ ಇತರೆ ಪ್ರಮುಖ ಕೆರೆ/ಕಲ್ಯಾಣಿಗಳಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಕೆಲ ಪ್ರದೇಶಗಳಲ್ಲಿ ಕೆರೆಗಳು ವಸತಿ ಪ್ರದೇಶದಿಂದ ದೂರವಿರುವುದರಿಂದ ಸಾರ್ವಜನಿಕರು ಚಿಕ್ಕ-ಚಿಕ್ಕ ಮೂರ್ತಿಗಳನ್ನು ವಿಸರ್ಜನೆ ಮಾಡುವ ಸಲುವಾಗಿ ಪ್ರತಿ ವಲಯಗಳ ಪ್ರಮುಖ ಸ್ಥಳ, ಜಂಕ್ಷನ್ ಮತ್ತು ಅವಶ್ಯಕತೆ ಇರುವ ಕಡೆ ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕಗಳನ್ನು (ಮೊಬೈಲ್ ಟ್ಯಾಂಕ್) ಪ್ರತಿ ವರ್ಷದಂತೆ ವ್ಯವಸ್ಥೆ ಮಾಡಲು ಸೂಚಿಸಿದರು.

ಕೆರೆಗಳ ಸುತ್ತಮುತ್ತ ಹಾಗೂ ಕಲ್ಯಾಣಿಗಳ ಆವರಣದಲ್ಲಿ ಬ್ಯಾರಿಕೇಡ್ ಅಳವಡಿಸಬೇಕು. ಎಲ್ಲ ವಿಸರ್ಜನಾ ಕೇಂದ್ರಗಳಲ್ಲೂ ಪಾಳಿ ಅನುಸಾರ ನುರಿತ ಈಜುಗಾರರನ್ನು ಮತ್ತು ಅಗತ್ಯ ಸಿಬ್ಬಂದಿಯನ್ನು ನೇಮಿಸಲು ಕ್ರಮ ಕೈಗೊಳ್ಳಬೇಕು. ಜೊತೆಗೆ ಆಯಾ ಸ್ಥಳಗಳಲ್ಲಿ ಮುಂಜಾಗ್ರತಾ ಕ್ರಮ ವಹಿಸುವ ಸಲುವಾಗಿ ಸಿಸಿಟಿವಿ, ವಿದ್ಯುತ್ ದ್ವೀಪಗಳ ಸೌಲಭ್ಯಗಳನ್ನು ತಪ್ಪದೇ ಅಳವಡಿಸಲು ಆದೇಶಿಸಿದರು.

ಪೂಜಾ ಸಾಮಗ್ರಿಗಳಾದ ಹೂವು, ಬಾಳೆಯ ಕಂದು, ತಳಿರು ತೋರಣ, ಮತ್ತಿತರ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ನಿಗದಿತ ಕಂಟೈನರ್‌ಗಳ ಮೂಲಕ ಆಗಾಗ ತೆರವುಗೊಳಿಸಬೇಕು. ಮೂರ್ತಿಗಳ ವಿಸರ್ಜನೆಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ದೋಣಿಗಳ ವ್ಯವಸ್ಥೆ, ನೀರೆತ್ತುವ ಪಂಪ್‌ಗಳ ವ್ಯವಸ್ಥೆ, ಕ್ರೇನ್‌ಗಳ ವ್ಯವಸ್ಥೆಗಳನ್ನು ಕೂಡ ಸಿದ್ಧಪಡಿಸಿರಬೇಕು ಎಂದರು.

ವಿಸರ್ಜನಾ ಮೆರವಣಿಗೆಯ ವೇಳೆ ಪಟಾಕಿ, ಸಿಡಿ ಮದ್ದು ಸಿಡಿಸುವುದು ಹಾಗೂ ನಾಗರಿಕರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಬಿಬಿಎಂಪಿ ಎಲ್ಲ ವಿಶೇಷ/ವಲಯ ಆಯುಕ್ತರು, ಪೊಲೀಸ್ ಅಧಿಕಾರಿಗಳು, ಉಪ ಆಯುಕ್ತರು (ಆಡಳಿತ), ಅಗ್ನಿಶಾಮಕ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳು ಉಪಸ್ಥಿತರಿದ್ದರು.

ಪಿಒಪಿ ಮೂರ್ತಿ: ಮಾರಾಟಗಾರರಿಗೆ ದಂಡ

ರಾಸಾಯನಿಕ ಬಣ್ಣಗಳು, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ಗಣೇಶ ಮೂರ್ತಿ ತಯಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ವಸ್ತುಗಳನ್ನು ಬಳಸಿ ಮೂರ್ತಿ ತಯಾರಿಸುವ, ಮಾರಾಟ ಮಾಡುವವರಿಗೆ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತುಷಾರ್ ಗಿರಿನಾಥ್ ಹೇಳಿದರು.

ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್/ಬ್ಯಾನರ್ ಅಳವಡಿಸುವುದು ಹಾಗೂ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದರು.

ಕೆರೆಗಳು ಕಲುಷಿತಗೊಳ್ಳದಂತೆ ತಡೆಗಟ್ಟಲು ಗಣೇಶ ವಿಸರ್ಜನೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಸಾರ್ವಜನಿಕರಿಗೆ ನಿಗದಿಪಡಿಸಿದ ಸ್ಥಳಗಳಲ್ಲೇ ಗಣೇಶ ಮೂರ್ತಿಗಳನ್ನು ವಿಸರ್ಜಿಸಬೇಕು. ಬಣ್ಣ/ ಪಿಒಪಿ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದನ್ನು ನಿಲ್ಲಿಸಿ ಪರಿಸರ ಸ್ನೇಹಿ ಮೂರ್ತಿಗಳನ್ನಿಟ್ಟು ಪೂಜಿಸಬೇಕೆಂದು ಸಾರ್ವಜನಿಕರಲ್ಲಿ ಮುಖ್ಯ ಆಯುಕ್ತರು ಮನವಿ ಮಾಡಿದರು.

ಉಚಿತ ಬಸ್ ಪಾಸ್ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಸಿಬ್ಬಂದಿಯ ಪತಿ ಅಥವಾ ಪತ್ನಿಗೆ ಉಚಿತ ಬಸ್‌ಪಾಸ್ ನೀಡಬೇಕು ಎಂದು ಇಪಿಎಸ್-95, ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯಿಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು.

ವಿವಿಧ ಪಿಂಚಣಿ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಂಘಟನೆಯು ಹಲವು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದೆ. ನಿವೃತ್ತರ ಪತಿ ಅಥವಾ ಪತ್ನಿಗೆ ಬಸ್ ಪಾಸ್‌ಗಾಗಿ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಈ ಬೇಡಿಕೆಯೂ ಈಡೇರಿಲ್ಲ ಎಂದು ಸಂಘಟನೆಯ ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ ಸಚಿವರ ಗಮನಕ್ಕೆ ತಂದರು.

‘ಈ ಬೇಡಿಕೆ ಗಮನದಲ್ಲಿದ್ದು, ಪ್ರಸ್ತಾವನೆಯನ್ನು ಮಂಡಳಿ ಸಭೆಯಲ್ಲಿಟ್ಟು ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಸಚಿವರು ಭರವಸೆ ನೀಡಿದರು.

ಮಾಸಿಕ ಸಭೆ: ಇಪಿಎಸ್-95, ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಮಾಸಿಕ ಸಭೆಯು ಸೆ.3ರಂದು ಲಾಲ್‌ಬಾಗ್ ಮೆಟ್ಟಿಲು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ನಿವೃತ್ತರ ಕನಿಷ್ಠ ಪಿಂಚಣಿ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆಯ ರಾಜ್ಯ ಸಚಿವ ರಾಮೇಶ್ವರ ತೇಲಿ ಅವರು ಯಾವುದೇ ಅಧ್ಯಯನವಿಲ್ಲದೇ ಹೇಳಿಕೆ ನೀಡಿದ್ದಾರೆ. ನಿವೃತ್ತ ಪಿಂಚಣಿದಾರರ ಮುಖಂಡ ಅಶೋಕ್ ರಾವತ್ ಹಾಗೂ ಮುಖಂಡರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ. ಇದು ಖಂಡನಾರ್ಹ. ಪಿಂಚಣಿದಾರರ ಬೇಡಿಕೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ತಿಳಿಸಿದ್ದಾರೆ.

ಜೆಟ್ ಏರ್‌ವೇಸ್ ಸ್ಥಾಪಕ ಬಂಧನ

ಮುಂಬೈ (ಪಿಟಿಐ): ಕೆನರಾ ಬ್ಯಾಂಕ್‌ನ ₹ 538 ಕೋಟಿ ವಂಚನೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೆಟ್ ಏರ್‌ವೇಸ್ ಸ್ಥಾಪಕ ನರೇಶ್ ಗೋಯಲ್ ಅವರನ್ನು ಶುಕ್ರವಾರ ತಡರಾತ್ರಿ ಬಂಧಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

74 ವರ್ಷದ ಗೋಯಲ್ ಅವರನ್ನು ಇಲ್ಲಿನ ಪಿಎಂಎಲ್‌ಎ ವಿಶೇಷ ಕೋರ್ಟ್‌ನಲ್ಲಿ ಶನಿವಾರ ಹಾಜರುಪಡಿಸಿ ವಶಕ್ಕೆ ಒಪ್ಪಿಸಲು ಕೋರಲಾಗುವುದು ಎಂದು ತಿಳಿಸಿವೆ. ಗೋಯಲ್, ಅವರ ಪತ್ನಿ ಅನಿತಾ, ಹಾಗೂ ಕಂಪನಿ ಕೆಲ ಮಾಜಿ ಸಿಬ್ಬಂದಿಯ ವಿರುದ್ಧ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಸಿಬಿಐ ಮೊಕದ್ದಮೆಯನ್ನು ದಾಖಲಿಸಿತ್ತು. ಬ್ಯಾಂಕ್ ಈ ಬಗ್ಗೆ ದೂರು ದಾಖಲಿಸಿತ್ತು.

ಜೆಟ್ ಏರ್‌ವೇಸ್ (ಇಂಡಿಯಾ) ಲಿಮಿಟೆಡ್ ಸಂಸ್ಥೆಯು ಬ್ಯಾಂಕ್‌ನಿಂದ ಒಟ್ಟು 848.86 ಕೋಟಿ ಸಾಲ ಪಡೆದಿದ್ದು, ಈ ಪೈಕಿ ಇನ್ನೂ 538.62 ಕೋಟಿ ಬಾಕಿ ಉಳಿದಿದೆ ಎಂದು ತಿಳಿಸಿತ್ತು. ಇದನ್ನು ವಂಚನೆ ಖಾತೆಯಾಗಿ ಜುಲೈ 29, 2011ರಲ್ಲಿ ಸಿಬಿಐ ಘೋಷಿಸಿತ್ತು.



ಬದಲಾದ ಜೀವನಶೈಲಿಯಿಂದ ಪೋಷಕರಿಗೆ ತಮ್ಮ ಮಕ್ಕಳನ್ನು ಪರಿಣಾಮಕಾರಿಯಾಗಿ ಪಾಲನೆ, ಪೋಷಣೆ ಮಾಡಲು ಸಮಯದ ಕೊರತೆ ಉಂಟಾಗಿದೆ. ಹಲವು ರೀತಿಯ ಒತ್ತಡಗಳಿಂದಾಗಿ ಕೆಲವು ಪೋಷಕರಿಗೆ ಸಹನೆ, ಸಂಯಮವೂ ಕಡಿಮೆಯಾಗಿದೆ. ಇದರಿಂದ ಕೆಲಮಕ್ಕಳಲ್ಲಿ ನಡತೆ ದೋಷಗಳು ಹೆಚ್ಚುತ್ತಿವೆ. ಇಂಥ ದೋಷಗಳಲ್ಲಿ ಕಿರುಚುವಿಕೆ ಕೂಡ ಒಂದು. ಮುಂಜಾಗ್ರತಾ ಕ್ರಮಗಳಿಂದ ಇದನ್ನು ಸರಿಪಡಿಸಬಹುದು.

ಮಕ್ಕಳೇಕೆ ಕಿರುಚುತ್ತಾರೆ?

ಡಾ.ಎಂ.ಡಿ.ಸೂರ್ಯಕಾಂತ

ಕಿರಣ್‌ಗೆ ಎರಡೂ ಮುಕ್ಕಾಲು ವರ್ಷ. ಈಗಷ್ಟೇ ಎರಡೆರಡು ಅಕ್ಷರದ ಮಾತು ಬರ್ತಿದೆ. ಆದರೆ, ಆಗಾಗ್ಗೆ ಕಿರುಚುತ್ತಿರುತ್ತಾನೆ. ಅದ್ಯಾಕೆ ಹಾಗೆ ಕೂಗುತ್ತಾನೋ, ತಿಳಿಯದು ಎನ್ನುತ್ತಾರೆ ತಾಯಿ ಸುಮನಾ.

ಮೂರು ವರ್ಷದ ರಾಜುವಿಗೆ, ಯಾವುದಾದರೂ ವಸ್ತು ಬೇಕೆಂದರೆ, ಬೇಕೇ ಬೇಕು. ಇಲ್ಲದಿದ್ದರೆ ತೀರಾ ಹಠ ಮಾಡಿ, ಕೂಗಾಡಿ, ರಂಪಾಟ ಮಾಡುತ್ತಾನೆ. ಆ ವಸ್ತು ಸಿಕ್ಕಿದ ಮೇಲೆ ಚೀರುವುದನ್ನು ನಿಲ್ಲಿಸುವುದು.

ಈ ಮೇಲಿನ ಘಟನೆಗಳು ಕೇವಲ ಉದಾಹರಣೆಯಷ್ಟೇ. ಇವೆರಡೂ ಘಟನೆಗಳು ಭಿನ್ನ ಎನ್ನಿಸಿದರೂ, ಅವುಗಳಲ್ಲಿರುವ ಒಂದು ಸಾಮಾನ್ಯ ಅಂಶವೆಂದರೆ ಮಕ್ಕಳು ಕಿರುಚಾಡುವುದು, ಕೂಗಾಡುವುದು. ಇದು ಸಾಮಾನ್ಯವಾಗಿ ಎರಡ್ಮೂರು ವರ್ಷಗಳ ಮಕ್ಕಳಿರುವ ಪ್ರತಿ ಮನೆಯಲ್ಲೂ ಪೋಷಕರು ಎದುರಿಸುವ ಸಮಸ್ಯೆ.

ಮಕ್ಕಳು ಕಿರುಚುವುದು ಒಬ್ಬೊಬ್ಬ ಪೋಷಕರಿಗೆ ಒಂದೊಂದು ರೀತಿಯ ಅನುಭವ ನೀಡುತ್ತದೆ. ಕೆಲವರಿಗೆ ಕಿರಿಕಿರಿ ಎನ್ನಿಸಿದರೆ, ಇನ್ನು ಕೆಲವರಿಗೆ 'ಮಗುವಿಗೆ ಏನೋ ನ್ಯೂನತೆ ಇರಬಹುದು' ಎಂದು ಶಂಕೆ ಮೂಡಿಸುತ್ತದೆ, ಗಾಬರಿಗೊಳಿಸುತ್ತದೆ. ಆದರೆ, ಅನೇಕರಿಗೆ ಇದೊಂದು ಸಮಸ್ಯೆ ಎಂದೇ ಎನ್ನಿಸುವುದಿಲ್ಲ. ಇದು 'ಮಕ್ಕಳಾಟವಿರಬೇಕು' ಎಂದು ಸುಮ್ಮನಾಗುತ್ತಾರೆ.

'ಕಿರುಚುವಿಕೆ'ಗೆ ಕಾರಣಗಳು ಹಲವು

- ಸಾಮಾನ್ಯವಾಗಿ 1 ಮತ್ತು 2 ವಯಸ್ಸಿನ ನಡುವೆ ಮಕ್ಕಳು ಕಿರುಚುತ್ತಾರೆ, ಕೂಗುತ್ತಾರೆ. ಬೇರೆ ಯಾವುದೇ ರೀತಿಯ ಶಬ್ಧ ಹೊರಹೊಮ್ಮಿಸುತ್ತಾರೆ. ಅದು 'ನನ್ನನ್ನು ನೋಡು' ಎಂದು ಹೆತ್ತವರ ಗಮನವನ್ನು ಸೆಳೆಯುವ ಪ್ರಯತ್ನ.
- ಇನ್ನು, ಎಳೆ ಮಕ್ಕಳು ಶಬ್ದಗಳ ಕೊರತೆಯಿಂದಾಗಿ ಮಾತನಾಡಲು ಸಾಧ್ಯವಾಗದೇ, ಸುಮ್ಮನೆ ಕಿರುಚುತ್ತಾರೆ. ಇದಕ್ಕೆ ಕಾರಣ; ಹೆರಿಗೆ ಸಮಯದಲ್ಲಿ ತೊಂದರೆಯಾಗಿ ಮಗುವಿನ ಮಿದುಳಿಗೆ ರಕ್ತ ಸಂಚಾರ ವಿಳಂಬವಾದರೆ-ಬೆಳವಣಿಗೆಯೆಯಲ್ಲಿ ಕುಂಠಿತವಾಗುವುದಿರಿಂದ ಮಗುವಿಗೆ ಶಬ್ದಗಳ ಕೊರತೆಯಾಗುತ್ತದೆ.
- ಮನೆಯಲ್ಲಿನ ಮಕ್ಕಳು ಅಥವಾ ವಯಸ್ಕರು ಮಾತನಾಡುವಾಗ ಕಿರುಚಾಡುತ್ತಿದ್ದರೆ, ಇತರೆ ಮಕ್ಕಳು ಅದನ್ನು ಅನುಕರಿಸಬಹುದು.
- ತಮಗೆ ಇಷ್ಟವಾದುದು ದೊರಕದಿದ್ದರೆ ಅಥವಾ ಸಂತೋಷ, ತಮಾಷೆ, ಹತಾಶೆಗೊಂಡಾಗ ಕಿರುಚುತ್ತಾರೆ. ಇದು ತಮ್ಮ ಧ್ವನಿಯ ಶಕ್ತಿಯನ್ನು ಅನ್ವೇಷಿಸಲು ಮತ್ತು ಧ್ವನಿಯನ್ನು ಹೇಗೆ ಬಳಸಬೇಕೆಂಬ ಪ್ರಯತ್ನ.

ಇತರೆ ಕಾರಣಗಳು

ಮಕ್ಕಳ ಪೋಷಣೆ, ಆರೈಕೆ, ದಿನಚರಿ ಅಸಮಂಜಸವಾಗಿದ್ದರೆ, ಪೋಷಕರು ಮತ್ತು ಮಗುವಿನ ನಡುವೆ ಕಡಿಮೆ ಅಥವಾ ಸಂಭಾಷಣೆಯೇ ಇಲ್ಲದಿದ್ದರೆ ಮಗು ಕಿರುಚುವ ಮೂಲಕ ತನ್ನೊಳಗಿನ ಒತ್ತಡವನ್ನು ಹೊರ ಹಾಕುತ್ತದೆ. ಅಪ್ಪ-ಅಮ್ಮ ಒತ್ತಡದ ವೇಳಾಪಟ್ಟಿ ಜೊತೆ ಕೆಲಸಮಾಡುತ್ತಾ, ತಮ್ಮನ್ನು ಗಮನಿಸದಿದ್ದಾಗ, ಮಕ್ಕಳು ತಾಳ್ಮೆ/ಸಂಯಮ ಕಳೆದುಕೊಂಡು ಕಿರುಚಾಡುತ್ತಾರೆ. ಕೋವಿಡ್ ಅವಧಿಯಲ್ಲಿ 'ವರ್ಕ್ ಫ್ರಂ ಹೋಮ್' ಚಾಲ್ತಿಯಲ್ಲಿದ್ದಾಗ, ಹೀಗೆ ಮಕ್ಕಳು ಕಿರುಚುವುದು ಅಥವಾ ಮಾತನಾಡದೇ ಇರುವಂತಹ ಪ್ರಕರಣಗಳು, ಅಲ್ಲಲ್ಲೇ ಕೇಳಿಬಂದವು.

ಅದೇ ರೀತಿ, ಮನೆಯಲ್ಲಿದ್ದೂ, ಒಡಹುಟ್ಟಿದವರ ಜೊತೆಗೂಡಿ ಆಟವಾಡದಿದ್ದಾಗ, ಸಂತೋಷ ಹಂಚಿ ಕೊಳ್ಳದಿದ್ದಾಗ, ಪೋಷಕರು ಮಗುವಿನ ಅಭಿಪ್ರಾಯ ಆಲಿಸದಿದ್ದಾಗ, ಹಾಗೆಯೇ ಮನಸ್ಸು, ಉದ್ದೇಶ, ಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ ಕಿರುಚಾಡುವಿಕೆ ಸಾಧ್ಯ.


ಹಾಗಾದರೆ, ಪರಿಹಾರ ಏನು?

- ಮಗು ಯಾವ್ಯಾವ ಸಮಯದಲ್ಲಿ ಕಿರುಚುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿರಿ. ಉದಾಹರಣೆಗೆ, ಮಗು ಮಾರುಕಟ್ಟೆಗೆ ಹೋದಾಗಲೇ ಕೂಗುತ್ತದೆ ಎಂದರೆ, ಅದಕ್ಕೆ ಕಾರಣವೇನಿರಬಹುದೆಂದು ನೀವೇ ವಿಶ್ಲೇಷಿಸಲು ಪ್ರಯತ್ನಿಸಿ. ಆ ಸಮಯದಲ್ಲಿ ಮಗುವಿಗೆ ಬೇಕಾದದನ್ನು ತಕ್ಷಣ ಕೊಡಿಸಬೇಡಿ. ಏಕೆಂದರೆ, ಈ ಪ್ರಯತ್ನ ಸಮಸ್ಯೆ ಪರಿಹರಿಸುವ ಬದಲು, ಇರುವ ನಡವಳಿಕೆಯನ್ನೇ ಉಲ್ಬಣಿಸಲು ಕಾರಣವಾಗಬಹುದು.
- ವಿಶೇಷವಾಗಿ ಮಕ್ಕಳು ಪ್ರಯಾಣದ ವೇಳೆ ಕಿರುಚುತ್ತವೆ. ಇದು ಇತರರಿಗೆ ತೊಂದರೆಯಾಗುತ್ತದೆ ಎಂಬುದನ್ನು ನೆನಪಿಡಿ. ಕಿರುಚಲು ಆರಂಭಿಸಿದಾಗ ಮಗುವಿನ ಗಮನವನ್ನು ಬೇರೆಡೆ ತಿರುಗಿಸಲು ಪ್ರಯತ್ನಿಸಿ. ದಿಟ್ಟಿಸಿ ನೋಡಿರಿ. ಒಂದಷ್ಟು ಜೋಕ್ ಮಾಡಿ ನಗಿಸಿರಿ.
- ಕೆಲವು ಸಾಮಾನ್ಯವಾದ ಸ್ಥಳದಲ್ಲಿ ಕಿರುಚುತ್ತಿದ್ದರೆ(ಸೂಪರ್ ಮಾರ್ಕೆಟ್, ರೆಸ್ಟೊರೆಂಟ್) 'ಇನ್ನೊಂದು ಸ್ವಲ್ಪ ಹೊತ್ತು, ಮನೆಗೆ ಹೋಗೋಣ' ಎಂದು ಹೇಳಿ ಸಂತೈಸಿಸಲು ಪ್ರಯತ್ನಿಸಿ. ಕಿರುಚುವ ಸಮಯದಲ್ಲಿ ಅವರು ಚಟುವಟಿಕೆಯಲ್ಲಿರಲು ಇಷ್ಟದ ಹಾಡು ಕೇಳಿಸಿ. ಇಷ್ಟಪಡುವ ತಿಂಡಿ ತಿನಿಸಿ, ಆಟಿಕೆ ಕೊಡಿಸಿ. ನಿಮ್ಮ ಕೆಲಸಗಳನ್ನು(ಶಾಪಿಂಗ್ ಇತ್ಯಾದಿ) ಬೇಗ ಮುಗಿಸಲು ಪ್ರಯತ್ನಿಸಿ. ಆದರೆ, ಕಿರುಚುವುದನ್ನು ದೂರ ಮಾಡುವುದಕ್ಕಾಗಿ ಮೊಬೈಲ್ ಕೊಟ್ಟು ಕೂರಿಸಬೇಡಿ, ಟಿವಿ ಹಾಕಿ ನೋಡಲು ಹೇಳಬೇಡಿ.
- ಕಿರುಚುವ ಸಮಯದಲ್ಲಿ, ತಕ್ಷಣವೇ ಸ್ಥಳ ಬದಲಾಯಿಸಿ. ಸ್ಥಳ-ಪರಿಸರ ಬದಲಾದರೆ, ಮಕ್ಕಳ ವರ್ತನೆಯೂ ಬದಲಾಗುತ್ತದೆ. ನಿಮಗೂ ಮತ್ತು ಮಗುವಿಗೂ ಮನಸ್ಸಿಗೆ ಸ್ವಲ್ಪ ನೆಮ್ಮದಿ ದೊರೆಯುತ್ತದೆ.
- ಮಕ್ಕಳಿಗೆ ಯಾವುದೇ ನಿರ್ದೇಶನಗಳನ್ನು ಸ್ಪಷ್ಟವಾಗಿ, ಸಮಾಧಾನದಿಂದ ನೀಡಬೇಕು. ಹಾಗಂತ ಏರು ಧ್ವನಿಯಲ್ಲಿ ಸಲಹೆ ಕೊಡಬೇಡಿ.
- ಮಗುವಿನ ದಿನಚರಿಗಳನ್ನು ರೂಪಿಸಿ. ಬೆಳಿಗ್ಗೆ ಏಳುವ, ರಾತ್ರಿ ಮಲಗುವ ಸಮಯ ನಿಗದಿ ಪಡಿಸಿ. ಆಟ, ಅಭ್ಯಾಸ, ಊಟದ ಸಮಯ, ಶಾಲೆಗೆ ಹೋಗುವುದು, ಪಠ್ಯೇತರ ಚಟುವಟಿಕೆಗಳು, ಮನೆ ಅಭ್ಯಾಸ ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳಿ. ಸ್ವಲ್ಪ ದೊಡ್ಡ ಮಕ್ಕಳಾದರೆ, ಈ ದಿನಚರಿಗಳನ್ನು ಅವರೊಂದಿಗೆ ಚರ್ಚಿಸಿ ಮತ್ತು ಅವರ ಅಭಿಪ್ರಾಯ ಪಡೆಯಿರಿ. ದಿನಚರಿಯ ಪಟ್ಟಿಮಾಡಿ. ನಿತ್ಯ ಮಕ್ಕಳ-ಪಾಲನೆ ಪೋಷಣೆಯನ್ನು ವೇಳಾಪಟ್ಟಿಯಂತೆ ಅನುಸರಿಸಿ.
- ನಿಮ್ಮ ಮಗು ಕಿರುಚುತ್ತಿದ್ದರೆ, ನಿಮ್ಮ ಮನಸ್ಸಿನಲ್ಲಿ ಕೋಪ ತುಂಬಿಕೊಂಡಿದ್ದರೂ, ನೀವು ಕೂಗಾಡದೇ ಶಾಂತವಾಗಿರುವುದು ಮುಖ್ಯ. ನಿಮ್ಮ ಪ್ರತಿಕ್ರಿಯೆಗಳನ್ನು ವಿಶ್ಲೇಷಣೆ ಮಾಡಿಕೊಳ್ಳಿರಿ.
- ನಿಮ್ಮನ್ನು ಬಹಳವಾಗಿ ಕೆರಳಿಸಿದಾಗಲೂ ಶಾಂತವಾಗಿ ಮಾತನಾಡಲು ಪ್ರಾರಂಭಿಸಿ. ಸಮಾಧಾನದಿಂದ ಮಾತನಾಡುವ ಕಲೆಯನ್ನು ಉದಾಹರಿಸಿ ಮಗುವಿಗೆ ಹೇಳಿ ಕೊಡಿ.
- ನಿಮ್ಮ ಮಗುವಿನೊಂದಿಗೆ ಶಾಂತ ಮತ್ತು ಗುಣಾತ್ಮಕ ಸಮಯವನ್ನು ಕಳೆಯಿರಿ. ಅವರು ಏನು ಯೋಚಿಸುತ್ತಿದ್ದಾರೆಂದು ತಿಳಿಯಿರಿ. ಅವರನ್ನು ಚೆನ್ನಾಗಿ ತಿಳಿದುಕೊಳ್ಳುವುದು ನಮ್ಮ ಉದ್ದೇಶವಾಗಿರಲಿ.
- ಸಂತೋಷ, ದುಃಖ, ಕೋಪ, ಅಸಮಾಧಾನ, ನಿರಾಶೆ ಮುಂತಾದ ಭಾವನೆಗಳನ್ನು ಅನವಶ್ಯಕವಾಗಿ ವ್ಯಕ್ತಪಡಿಸಬೇಡಿ. ಮಕ್ಕಳು ಇವುಗಳನ್ನು ಅನುಸರಿಸುತ್ತಾರೆ.

(ಲೇಖಕರು ಮಕ್ಕಳ ತಜ್ಞರು, ಬೆಂಗಳೂರು)

ವೈದ್ಯರ ಸಲಹೆ ಯಾವಾಗ?

ಸಾಮಾನ್ಯವಾಗಿ ಮಕ್ಕಳ ಕಿರುಚಾಡುವಿಕೆ ಮೂರ್ನಾಲ್ಕು ವರ್ಷಗಳ ಹೊತ್ತಿಗೆ ಕಡಿಮೆಯಾಗುತ್ತದೆ. ಆದರೆ, ಇದು ಮುಂದುವರಿದರೆ, ವರ್ತನೆ ಅಸಹಜ ಎಂದು ಎನ್ನಿಸಿದರೆ ಮಕ್ಕಳ ಮನೋವೈದ್ಯರನ್ನು ಸಂಪರ್ಕಿಸಬಹುದು. ಹಾಗೆಯೇ, ನಿತ್ಯ ಕಿರುಚುವಿಕೆ ಜೊತೆಗೆ ಜ್ವರ, ವಾಂತಿಯಂತಹ ಸಮಸ್ಯೆ ಇದ್ದರೆ ಅಥವಾ ಮಗುವಿನ ಬೆಳವಣಿಗೆಯಲ್ಲಿ ವಿಳಂಬವಾಗಿದ್ದರೆ ಮಕ್ಕಳ ತಜ್ಞರ ಸಲಹೆ ಅವಶ್ಯ.





ಆಹಾ ಕಳಲೆ!

ಅನನ್ಯ ರಸರುಚಿಗಳ ಗುಚ್ಛ

ಅಸ್ಸಾಮಿನ ದೋದಿ ಪಾಠಕ್ ಬಿದಿರಿನಿಂದ ಮನುಷ್ಯರು ಬಳಸಬಹುದಾದ ಕೃತಕ ಹಲ್ಲನ್ನು ತಯಾರಿಸುತ್ತಾರಂತೆ! ಅದೂ ಹತ್ತು ವರ್ಷ ಬಾಳಿಕೆ ಬರುವಂಥದ್ದು. ದಿನಕ್ಕೆ ಮೂರು ಅಡಿ ಬೆಳೆಯುವ ಬಿದಿರೂ ಇದೆಯಂತೆ ಗೊತ್ತಾ?, ಬಲ್ಬಿನೊಳಗೆ ಉರಿಯುವ ಫಿಲಮೆಂಟ್ ತಯಾರಿಕೆಗೆ ಥಾಮಸ್ ಆಲ್ವಾ ಎಡಿಸನ್ ಜಪಾನಿನಿಂದ ಬಿದಿರು ತರಿಸಿ ಬಳಸಿದ್ದರಂತೆ. ಈ ಫಿಲಮೆಂಟ್ ನಲವತ್ತು ಗಂಟೆ ಬಾಳಿಕೆ ಬರುತ್ತಿತ್ತಂತೆ. ಹೀಗೆ ಸ್ವಾರಸ್ಯ ಎನಿಸುವ ಹಲವು ವಿಷಯಗಳು ಬಿದಿರಿನ ಜತೆ ಹೆಣೆದುಕೊಂಡಿವೆ.

ಬಿದಿರು ಬಹೂಪಯೋಗಿ. ಈವರೆಗೆ ಬಿದಿರಿನ 1500 ವಿವಿಧ ಉಪಯೋಗಗಳು ದಾಖಲೆಯಾಗಿವೆ! ಹಾಗಾಗಿ 'ಹುಟ್ಟಿನಿಂದ ಚಟ್ಟದವರೆಗೆ ಬಿದಿರು ಬೇಕು' ಎನ್ನುವ ಮಾತು ಸವೆದು ಹೋಗುವಷ್ಟು ಬಾರಿ ಬಳಕೆಯಾಗಿದೆ!.

ರೆಸಿಪಿಗಳ ಇ-ಬುಕ್

ಚೀನಾದಲ್ಲಿ ಬಿದಿರಿನ ಬಳಕೆ ವ್ಯಾಪಕವಾಗಿದೆ. ನಮ್ಮ ದೇಶದ ಈಶಾನ್ಯ ರಾಜ್ಯಗಳೂ ಹಿಂದೆ ಬಿದ್ದಿಲ್ಲ. ನಮ್ಮಲ್ಲಿ ಹಲಸಿನ ಮೇಳಗಳಂತೆ ಬಿದಿರು ಮೇಳವೊಂದು ಶಿರಸಿಯಲ್ಲಿ ನಡೆದಿದೆ. ಆದರೆ ಅರಣ್ಯ ಇಲಾಖೆಯ 'ಮರ' ಎಂಬ ಹಣೆಪಟ್ಟಿ ಕಳಚಿ 'ಹುಲ್ಲು' ಎಂದು ಪರಿಗಣಿತವಾದ ಬಿದಿರಿನ ವಾಣಿಜ್ಯಕ ಸಾಧ್ಯತೆಗಳನ್ನು ಗಮನಿಸಿದರೆ ಇನ್ನಷ್ಟು ಪ್ರಯತ್ನ ಬೇಕು ಎನಿಸುತ್ತದೆ. ಬಿದಿರಿನ ಬಗ್ಗೆ ನಿಧಾನವಾಗಿಯಾದರೂ ಒಲವು ಮೂಡುತ್ತಿದೆ.

ಕಳಲೆ/ಕಣಿಲೆ ಅಂತಲೂ ಕೆಲವೆಡೆ ಕರೆಯುವ ಎಳೆಬಿದಿರಿನ ಸಾಂಬಾರ್, ಪಲ್ಯಗಳ ರುಚಿ ಮಲೆನಾಡು/ಕರಾವಳಿಯವರಿಗೆ ಗೊತ್ತೇ ಇದೆ. ಮಳೆಗಾಲದಲ್ಲಿ ಇದರ ಸವಿಯನ್ನು ಸವಿದವರೇ ಬಲ್ಲರು. ಆದರೆ ನಮ್ಮ ಭಾರತೀಯ ಅಡುಗೆಯ ತತ್ವ ಮತ್ತು ಕ್ರಮಗಳ ಹಿನ್ನೆಲೆಯಲ್ಲಿ ಎಳೆಬಿದಿರಿನ ರಸರುಚಿಗಳ ವೈವಿಧ್ಯವನ್ನು ಇನ್ನಷ್ಟು ಹೆಚ್ಚಿಸಬಹುದು.



ಅಂತರ್ಜಾಲದಲ್ಲಿ ಎಳೆಬಿದಿರಿನ ಹಲವು ರೆಸಿಪಿಗಳು ಸಿಕ್ಕುತ್ತವೆಯಾದರೂ ಬಹುತೇಕ ರೆಸಿಪಿಗಳು ವಿದೇಶದ್ದು ಅಥವಾ ಈಶಾನ್ಯ ರಾಜ್ಯಗಳದ್ದು. ನಮ್ಮ ರಾಜ್ಯದವು ಇದ್ದರೂ ಅವುಗಳ ಸಂಖ್ಯೆ ಕಡಿಮೆ ಹಾಗೂ ಅತ್ಯಂತ ಪರಿಚಿತ ಅಡುಗೆಗಳು. ಈ ಹಿನ್ನೆಲೆಯಲ್ಲಿ ಪುತ್ತೂರಿನ ಗೃಹಿಣಿ ಸೌಖ್ಯ ಮೋಹನ್ ಮತ್ತು ಬೆಂಗಳೂರಿನ ಪವಿತ್ರಾ ನವೀನ್ ಅವರು ಎಳೆಬಿದಿರಿನ ಹಲವು ಹೊಸ ರಸರುಚಿಗಳನ್ನು ತಯಾರಿಸಿ, ಅದರ ರೆಸಿಪಿಗಳನ್ನೆಲ್ಲ ಒಂದು ಕಡೆ ಸೇರಿಸಿ, ಸಚಿತ್ರ 'ಇ-ಬುಕ್' ಸಿದ್ಧಪಡಿಸಿದ್ದಾರೆ.

ಏನೆಲ್ಲ ಇವೆ?

ಅಕ್ಕಿಹಿಟ್ಟಿನಲ್ಲಿ ಒಡಪೆ ಮಾಡಿರುವುದನ್ನು ಕೇಳಿರಬಹುದು. ಆದರೆ, ಅದಕ್ಕೆ ರುಚಿಮೊಗ್ಗು ಅರಳಿಸುವ ಕಳಲೆ ಸೇರಿಸಿ ಒಡಪೆ ಮಾಡಿದರೆ ಹೇಗಿರುತ್ತದೆ?, ಬಾಯಲ್ಲಿ ನೀರೂರಿಸುವ ಕಳಲೆ ಉಪ್ಪಿನಕಾಯಿ, ಸಂಜೆಯ ಏಕತಾನತೆ ತೊಡೆದುಹಾಕುವ ಕಳಲೆ ಕೋಡುಬಳೆ, ಕಳಲೆ ನಿಪ್ಪಟ್ಟು, ಕಳಲೆ ಮೋಮೊಸ್, ಮಜ್ಜಿಗೆ ಹುಳಿ ಹೀಗೆ ದಕ್ಷಿಣ ಭಾರತದ ಅದರಲ್ಲಿಯೂ ಕರಾವಳಿ ಹಾಗೂ ಮಲೆನಾಡು ಭಾಗದ ವಿಶೇಷ ತಿನಿಸುಗಳಿಗೆ ಕಳಲೆಯನ್ನು ಸೇರಿಸಿ ಫ್ಯೂಷನ್ ಖಾದ್ಯಗಳನ್ನು ತಯಾರಿಸಿರುವ ವಿವರ ಇದರಲ್ಲಿದೆ.

ಎಳೆಬಿದಿರಿನ ಬಳಕೆ ಹೇಗೆ?

ಎಳೆಬಿದಿರು ಅಂದಾಕ್ಷಣ ಬೇಕೆಂದಾಗ ಬಳಸಬಹುದು ಎಂದುಕೊಳ್ಳುವಂತಿಲ್ಲ. ಎಳೆಬಿದಿರು ಕಟಾವು ಮಾಡಿದ ತಕ್ಷಣ ಕಹಿಯ ಅಂಶ ಹೆಚ್ಚಿರುವುದರಿಂದ 2 ರಿಂದ 3 ದಿನ ಚೆನ್ನಾಗಿ ನೀರಿನಲ್ಲಿ ನೆನೆಸಿ ಅಡುಗೆಗೆ ಬಳಸಬೇಕು. ಒಂದೇ ದಿನ ಎರಡು ಮೂರು ಬಾರಿ ನೀರು ಬದಲಿಸಿ ಉಪಯೋಗಿಸಲೂ ಸಾಧ್ಯವಿದೆ. ಎಳೆಬಿದಿರಿನ ಒಂದೊಂದೇ ಸಿಪ್ಪೆ ತೆಗೆದು ಮೃದು ಭಾಗವನ್ನು ಕತ್ತರಿಸಿ ನೀರಿನಲ್ಲಿ ನೆನೆಸಬೇಕು. ಇತ್ತೀಚಿನ ದಿನಗಳಲ್ಲಿ 'ರೆಡಿ ಟು ಕುಕ್' ಕಳಲೆ ಲಭ್ಯವಿರುವ ಕಾರಣ ಅಡುಗೆ ಇನ್ನೂ ಸುಲಭ ಎಂಬುದನ್ನು ಈ ಹೊತ್ತಿಗೆಯಲ್ಲಿ ಸವಿವರವಾಗಿ ಹೇಳಿದ್ದಾರೆ.


ಪುಸ್ತಕ ಓದಿ ಅಡುಗೆಗಳನ್ನು ಪ್ರಯತ್ನಿಸುವ ಕಾಲ ಇದಲ್ಲ! ಯೂಟ್ಯೂಬ್ ನೋಡಿ ಮಾಡುವವರೇ ಜಾಸ್ತಿ. ಫೇಸ್ಬುಕ್/ವಾಟ್ಸ್ ಆ್ಯಪ್‌ನಲ್ಲಿ ಬಂದ ರೆಸಿಪಿಗಳು ಅಡುಗೆ ಮನೆಯಲ್ಲಿ ಸಿದ್ಧವಾಗುವ ಸಮಯ ಈಗ. ಇದನ್ನು ಗಮನದಲ್ಲಿಟ್ಟುಕೊಂಡು ಈ ಹೊಸರುಚಿಗಳು ಒಂದೆಡೆ ಸಿಗುವಂತೆ ಇ-ಬುಕ್ ಮೂಲಕ ಪ್ರಸ್ತುತಪಡಿಸಿದ್ದಾರೆ.

ಇದನ್ನು ಸಾಕಾರಗೊಳಿಸಿದವರು ಎನ್ ಜಿವಿ ನ್ಯಾಚುರಲ್ಸ್ ಕಂಪೆನಿಯ ಮಾಲೀಕರಾದ ನವೀನ್ ಜಿ.ವಿ. ಸೊಗಸಾದ ವಿನ್ಯಾಸದ ಜೊತೆಗೆ ಕಿವಿಗಿಂಪಾದ ಹಿನ್ನೆಲೆ ಸಂಗೀತದ ಮೂಲಕ ಇದನ್ನು ಬೇಕಾದ ಸಮಯದಲ್ಲಿ ನೋಡಬಹುದು. ನಿಮ್ಮ ಮೊಬೈಲಿನಲ್ಲಿ ಕಾಪಿಡಬಹುದು.

ಎಳೆಬಿದಿರಿನ ಬಳಕೆ ನಮ್ಮ ಅಡುಗೆಮನೆಗಳಲ್ಲಿ ಹೆಚ್ಚಲಿ ಎಂಬ ಸದಾಶಯದೊಂದಿಗೆ 40 ರೆಸಿಪಿಗಳಿರುವ ಈ ಇ-ಹೊತ್ತಿಗೆ ನಿಮಗೆ ಖಂಡಿತಾ ಇಷ್ಟವಾಗುತ್ತದೆ. ಇದನ್ನು ನೋಡಲು ಲಿಂಕ್ : https://ngvnatural.com/bambooebook/kannada

ಮುಂದಿನ ಸಂಚಿಕೆಯಲ್ಲಿ: ವಿಶಿಷ್ಟ ಕಳಲೆ ಖಾದ್ಯ.

ಕಳಲೆಯ ವಿವಿಧ ಖಾದ್ಯಗಳ ರೆಸಿಪಿಗಳಿರುವ 'ಆಹಾ ಕಳಲೆ!' ಇ- ಪುಸ್ತಕಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಕಳಲೆ ಖಾದ್ಯ ರೆಸಿಪಿಗಳ ಇ-ಪುಸ್ತಕ



ಮಕ್ಕಳೊಡನಿರಲಿ ಸುಮಧುರ ಬಾಂಧವ್ಯ

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

15 ಮತ್ತು 10 ವರ್ಷದ ಇಬ್ಬರು ಮಕ್ಕಳ ತಾಯಿ. ಟಿವಿ, ನ್ಯೂಸ್ ಪೇಪರ್‌ಗಳಲ್ಲಿ ಬರೀ ಮನುಷ್ಯನ ವಿಕೃತಿಗಳೇ ತುಂಬಿರುತ್ತವೆ. ಮಕ್ಕಳಿಂದ ಇಂಥ ವಿಷಯಗಳನ್ನು ಎಷ್ಟೇ ದೂರದಲ್ಲಿಟ್ಟರೂ ಅವರೂ ಮುಂದೆ ಈ ಸಮಾಜವನ್ನು ಎದುರಿಸಲೇಬೇಕು. ಇಂತಹ ಸಮಾಜಕ್ಕೆ ಅವರನ್ನು ಹೇಗೆ ಬಿಟ್ಟುಕೊಡುವುದೆಂದು ಆತಂಕವಾಗುತ್ತಿದೆ. ಹಿಂದೊಮ್ಮೆ ನೀವು ಮಕ್ಕಳ ಪೋಷಣೆಯಲ್ಲಿ ತಾಯಿಯ ಪಾತ್ರ ಹಿರಿದು ಅಂದಿದ್ದೀರಿ. ಆದ್ರೆ ಈಗಿನ ಕಾಲದ ಮಕ್ಕಳಿಗೆ ಸ್ನೇಹಿತರು, ಮೊಬೈಲ್, ಸಮಾಜದ ಆಕರ್ಷಣೆಯೇ ಜಾಸ್ತಿಯಿದೆ. ಇಂತಹ ವಿಚಾರಗಳಿಂದ ಚಂಚಲಿತರಾಗದಂತೆ ಅಥವಾ ಪ್ರಭಾವಕ್ಕೊಳಗಾಗದಂತೆ ಅವರನ್ನು ಹೇಗೆ ಕಾಪಾಡುವುದು? ಒಳ್ಳೆಯ ಪ್ರಜೆಯಾಗಿ ಬಾಳಿಬದುಕಲು ನಾವೇನು ಮಾಡಬಹುದು?

ಹೆಸರು ಊರು ತಿಳಿಸಿಲ್ಲ.

ನಿಮ್ಮ ಪತ್ರದಲ್ಲಿ ಮಕ್ಕಳ ಕುರಿತಾಗಿ ಪ್ರೀತಿ ಕಾಳಜಿ ಕಾಣಿಸುತ್ತಿದೆ. ಜತೆಗೆ ಆತಂಕವೂ ವ್ಯಕ್ತವಾಗಿದೆ. ಮಕ್ಕಳ ಪೋಷಣೆಯಲ್ಲಿ ತಾಯಂದಿರ ಪಾತ್ರ ಹಿರಿದು ಎನ್ನುವುದು ತಪ್ಪು ಕಲ್ಪನೆ. ತಮ್ಮ ದೇಹದ ಭಾಗವಾಗಿ ಬೆಳೆಸಿರುವ ಮಕ್ಕಳ ಕುರಿತು ತಾಯಂದಿರಿಗೆ ಹೆಚ್ಚಿನ ಕಕ್ಕುಲಾತಿ ಇರುವುದು ನಿಜ. ಇದು ಮಕ್ಕಳ ಮೇಲಿನ ಅಧಿಕಾರವಲ್ಲ.8ನೇ ಜುಲೈ 2023ರಂದು ಇದೇ ಅಂಕಣದಲ್ಲಿ ಪ್ರಕಟವಾದ 'ಮಕ್ಕಳು ಕೌಟುಂಬಿಕ ವಾತಾವರಣದ ಕನ್ನಡಿ' ಎನ್ನುವ ಬರಹದಲ್ಲಿ ಕುಟುಂಬದ ಭಾವನಾತ್ಮಕ ವಾತಾವರಣ ಮಕ್ಕಳನ್ನು ಹೇಗೆ ರೂಪಿಸುತ್ತದೆ ಎನ್ನುವುದನ್ನು ವಿವರವಾಗಿ ಬರೆಯಲಾಗಿದೆ.

'ಮಕ್ಕಳನ್ನು ಸಮಾಜಕ್ಕೆ ಹೇಗೆ ಬಿಟ್ಟುಕೊಡುವುದು' ಎನ್ನುವ ಶಬ್ದಗಳು ಆತಂಕ ಮತ್ತು ಮಕ್ಕಳ ಮೇಲೆ ಹೊಂದಿರುವ ಅಧಿಕಾರದ ಭಾವವನ್ನು ಸೂಚಿಸುತ್ತದೆ. ಮಕ್ಕಳು ಎಲ್ಲಿ ಬಾಳಬೇಕಾಗಿದೆಯೇ ಅದೇ ಸಮಾಜದಲ್ಲಿಯೇ ಜೀವನಪಾಠಗಳನ್ನು ಕಲಿಯಬೇಕಾಗುತ್ತದೆ. ಮನೆಯಲ್ಲಿ ಅವರನ್ನು ತಯಾರಿಸಿ ಸಮಾಜಕ್ಕೆ ಬಿಡುವುದು ಎನ್ನುವುದು ತಪ್ಪುಕಲ್ಪನೆ. ಸಮಾಜದಲ್ಲಿಯೇ ಹೊಸಹೊಸ ಜೀವನಪಾಠಗಳನ್ನು ಕಲಿಯಲು ಉತ್ತೇಜಿಸಬೇಕು. ಇದಕ್ಕೆ ಸಹಾಯವಾಗುವ ಕೆಲವು ಸರಳ ಅಂಶಗಳನ್ನು ಇಲ್ಲಿ ಹೇಳಬಹುದು.

1. ಪೋಷಕರು ತಮ್ಮ ಆತಂಕ ಒತ್ತಡಗಳನ್ನು ನಿಭಾಯಿಸುವುದನ್ನು ಕಲಿಯಬೇಕು. ಇಲ್ಲದಿದ್ದರೆ ಅವೆಲ್ಲವೂ ಮಕ್ಕಳಿಗೆ ವರ್ಗಾವಣೆಯಾಗುತ್ತವೆ. ಎಲ್ಲಾ ಪೋಷಕರಿಗೂ ಮಕ್ಕಳ ಮೇಲೆ ಪ್ರೀತಿ ಕಾಳಜಿ ಇದ್ದೇ ಇರುತ್ತದೆ. ಆದರೆ ಕಾಳಜಿಯನ್ನು ಆತಂಕವಾಗಿ ಬದಲಾಯಿಸಿ ಮಕ್ಕಳ ಮೇಲೆ ಹೇರಿದರೆ ಇಬ್ಬರ ಸಂಬಂಧದಲ್ಲಿ ಬಿರುಕುಗಳು ಮೂಡುತ್ತವೆ.
2. ನಾವೆಲ್ಲರೂ ಹೆಚ್ಚಾಗಿ ಕಲಿಯುವುದು ನಮ್ಮದೇ ಜೀವನದ ಅನುಭವಗಳಿಂದಲೇ ಹೊರತು ಬುದ್ಧಿವಾದ ಉಪದೇಶಗಳಿಂದಲ್ಲ. ಹಾಗಾಗಿ ಸುರಕ್ಷಿತ ಎನ್ನಿಸುವ ಸಂದರ್ಭಗಳಲ್ಲಿ ಮಕ್ಕಳಿಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕು. ನಿರ್ಧಾರಗಳು ತಪ್ಪಾದರೆ ತಪ್ಪಿನ ಅರಿವನ್ನು ಮೂಡಿಸಿ ಹೊಸದಾರಿಗಳನ್ನು ಕಲಿಸುವುದು ಸುಲಭ.
3. ಮಕ್ಕಳನ್ನು ಕುಟುಂಬದ ಪಾಲುದಾರರನ್ನಾಗಿ ಮಾಡಿಕೊಳ್ಳಬೇಕು. ಕುಟುಂಬದ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಅವರ ಸಲಹೆ ಅಭಿಪ್ರಾಯಗಳನ್ನು ಪಡೆಯಿರಿ.
4. ಬೆಳವಣಿಗೆಯ ಹಂತದಲ್ಲಿರುವ ಮಕ್ಕಳ ಮಿದುಳು ಮತ್ತೆಮತ್ತೆ ತಪ್ಪು ನಿರ್ಧಾರಗಳನ್ನು ಮಾಡುವುದು ಸಹಜ. ಅದಕ್ಕಾಗಿ ಟೀಕೆ, ಉಪದೇಶಗಳ ಅಗತ್ಯವಿಲ್ಲ. ಯಾವುದೇ ಸಂದರ್ಭದಲ್ಲಿಯೂ ನಮ್ಮ ಪ್ರೀತಿ ಬೆಂಬಲವನ್ನು ಹಿಂಪಡೆಯಬಾರದು. ಹೊಸದಾರಿಗಳನ್ನು ಹುಡುಕಲು ಅವರನ್ನು ಪ್ರೇರೇಪಿಸಬೇಕು. ಬುದ್ಧಿವಾದ ಮಾರ್ಗದರ್ಶನಕ್ಕಿಂತ ಹೊಸಹೊಸ ಪ್ರಶ್ನೆಗಳನ್ನು ಕೇಳಿ ಅವರ ಮಿದುಳನ್ನು ಕ್ರಿಯಾಶೀಲಗೊಳಿಸಬಹುದು.
5. ನಮ್ಮ ಮಿದುಳಿನಲ್ಲಿ ಎಲ್ಲಾ ಭಾವನೆಗಳಿಗೆ ಬೇರೆಬೇರೆ ಸಂಪರ್ಕಜಾಲಗಳಿವೆ. ಭಾವನೆಗಳನ್ನು ಅನುಭವಿಸುವುದರ ಮೂಲಕವೇ ಆ ಸಂಪರ್ಕ ಜಾಲಗಳು ಸಶಕ್ತವಾಗಿ ಬೆಳೆದು ಮುಂದೆ ಇಂತಹ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸಲು ಸಹಾಯ ಮಾಡುತ್ತವೆ. ಸಿಟ್ಟು, ದುಃಖ, ಹತಾಶೆ, ಅಸಹಾಯಕತೆ ಹೀಗೆ ಎಲ್ಲಾ ಭಾವನೆಗಳನ್ನು ಅನುಭವಿಸಲು ಮಕ್ಕಳಿಗೆ ಅವಕಾಶಕೊಡಬೇಕು. ಆದರೆ ಸಿಟ್ಟು ಕೆಟ್ಟ ಮಾತು ಅಥವಾ ವರ್ತನೆಯಾಗದಂತೆ ನಿಯಮಗಳನ್ನು ಮಾಡಬಹುದು. ಸಿಟ್ಟುಬಂದಾಗ 'ನಿನಗೆ ಸಿಟ್ಟು ಬಂದಿದೆ. ನಮ್ಮಿಬ್ಬರ ನಡುವೆ ಏನು ನಡೆಯಿತು ಎಂದು ಮಾತನಾಡೋಣ. ಆದರೆ ಕೂಗಾಡುವುದು, ಕೆಟ್ಟಮಾತುಗಳನ್ನಾಡುವುದು, ಮಾತನ್ನು ನಿಲ್ಲಿಸುವುದು ನನಗೆ ಒಪ್ಪಿಗೆಯಿಲ್ಲ' ಎಂದು ಹೇಳಬಹುದು. ದುಃಖ ಸೋಲು ಹತಾಶೆಗಳಿಗೆ ತಕ್ಷಣ ಸಮಾಧಾನದ ಅಗತ್ಯವಿಲ್ಲ. ದುಃಖದಲ್ಲಿರುವಾಗ 'ನೀನು ಕಷ್ಟದ ಪರಿಸ್ಥಿತಿಯಲ್ಲಿದ್ದೀಯಾ. ಹಾಗಾಗಿ ಬೇಸರ ನೋವು ಸಹಜ. ನಾನು ಬೆಂಬಲಕ್ಕೆ ಇದ್ದೇನೆ. ಪ್ರಯತ್ನವನ್ನು ಮುಂದುವರೆಸು. ಇಬ್ಬರೂ ಸೇರಿ ಬದಲಾವಣೆಯ ದಾರಿ ಹುಡುಕೋಣ" ಎಂದು ಹೇಳಬಹುದು. ಹೀಗೆ ಯಾವುದೇ ಸಂದರ್ಭದಲ್ಲಿಯೂ ಮಕ್ಕಳಿಂದ ಮಾನಸಿಕವಾಗಿ ದೂರಹೋಗಬಾರದು. ಎಲ್ಲಾ ಭಾವನೆಗಳನ್ನು ಗೌರವಿಸೋಣ, ಆದರೆ ಕೆಟ್ಟ ಮಾತು ವರ್ತನೆಗಳನ್ನಲ್ಲ.
6. ಮಕ್ಕಳ ತಪ್ಪು ನಿರ್ಧಾರಗಳು ಅಥವಾ ಕೆಟ್ಟ ವರ್ತನೆಗಳಿಗೆ ನಮ್ಮ ಆತಂಕ ಸಿಟ್ಟು ದೂಷಣೆ ಬುದ್ಧಿವಾದಗಳು ಮಾತ್ರ ಉತ್ತರವಾದಾಗ ಅವರು ನಮ್ಮೊಡನೆ ವಿಷಯಗಳನ್ನು ಹಂಚಿಕೊಳ್ಳುವುದನ್ನು ನಿಲ್ಲಿಸುತ್ತಾರೆ. ಹೀಗೆ ಅವರು ಮಾನಸಿಕವಾಗಿ ದೂರವಾದಾಗ ಪೋಷಕರು ಸಂಪೂರ್ಣ ಅಸಹಾಯಕರಾಗುತ್ತಾರೆ. ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮುಕ್ತವಾಗಿ ಚರ್ಚಿಸುವ ವಾತಾವರಣವಿದ್ದರೆ ಮಾತ್ರ ಮಕ್ಕಳು ಜವಾಬ್ದಾರಿಯುತವಾಗಿ ಬೆಳೆಯುತ್ತಾರೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಜುಲೈ 8ರಂದು ಪ್ರಕಟವಾದ 'ಮಕ್ಕಳು ಕೌಟುಂಬಿಕ ವಾತಾವರಣದ ಕನ್ನಡಿ' ಲೇಖನಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ನಿಶ್ಚಿತ
ಕಡಿಮೆ
ಬೆಲೆಯಲ್ಲಿ

DOUBLE
DHAMAKA
CELEBRATIONS

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

52nd ANNIVERSARY CELEBRATIONS

GIFTS WORTH 11 CRORES

1 CRORE HAPPY CUSTOMERS

ಉಚಿತ*
₹20000
ಮೌಲ್ಯದ
FIRE-BOLTT
SMART CALLING WATCH

SLIM SERIES
- 8GB RAM
- 512GB SSD
- 15.6
- WIN11 MSO 21

JUST ₹115 PER DAY*
ಉಚಿತ: ₹4,999 ಮೌಲ್ಯದ GIFTS

GAMING
- 8GB RAM
- 512GB SSD
- 4 GB GFX NVIDIA GTX/
- 15.6" FHD
- WIN 11

JUST ₹155 PER DAY*
ಉಚಿತ: ₹9,999 ಮೌಲ್ಯದ GIFTS

EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ

5G mela
GET YOUR FAVOURITE 5G PHONE
JUST 42 PER DAY*
UPTO 80% OFF
ON PURCHASE OF ACCESSORIES
vivo SAMSUNG ONEPLUS oppo mi

13/14
GET APPLE PHONE @ JUST ₹91 PER DAY* ONWARDS
ಉಚಿತ: ₹1,990 ಮೌಲ್ಯದ APPLE 20W ADAPTOR

EXCLUSIVE ONLY @ GIRIAS
LG
NANOCELL TV NANO77 43 4K SMART TV
EMI: ₹2999
NANOCELL TV NANO77 55 4K SMART TV
EMI: ₹3999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG 55 OLED 4K SMART TV 55S90C
SPECIAL ಇ.ಎಮ್.ಐ ₹2,990
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

CASHBACK BONANZA
UPTO 20%*
AXIS BANK | ICICI Bank Credit Cards | SBI card | Bank of Baroda Credit Card | Standard Chartered | HDFC BANK

Haier
630 ಲೀ INVERTER ಸೈಡ್ ಬೈ ಸೈಡ್
SPECIAL ಇ.ಎಮ್.ಐ ₹5,538
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

BOSCH
334 LTR FROST FREE
SPECIAL ಇ.ಎಮ್.ಐ ₹3,041
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

POWERFULL SOUND BAR
₹7,000 ಮೇಲ್ಪಟ್ಟು
ಇ.ಎಮ್.ಐ ₹1,070
LG SAMSUNG SONY PHILIPS JBL ZEBRONICS

AMAZING PARTY SPEAKERS
₹10,990 ಮೇಲ್ಪಟ್ಟು
ಇ.ಎಮ್.ಐ ₹916
LG SAMSUNG SONY PHILIPS JBL ZEBRONICS

DAIKIN
1.5 TON 3 STAR INVERTER
SPECIAL ಇ.ಎಮ್.ಐ ₹3,620
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

FINANCE BONANZA
1 ಇ.ಎಮ್.ಐ ಉಚಿತ*

Whirlpool
8 ಕೆಜಿ ಫ್ರಂಟ್ ಲೋಡಿಂಗ್
SPECIAL ಇ.ಎಮ್.ಐ ₹3,076
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Electrolux
7.5 ಕೆಜಿ ಫ್ರಂಟ್ ಲೋಡಿಂಗ್
SPECIAL ಇ.ಎಮ್.ಐ ₹3,166
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

KAFF
CHIMNEY MAINZ DHC 60
SPECIAL OFFER PRICE ₹13,990
ಉಚಿತ: ₹3,249 ಮೌಲ್ಯದ BUTTERFLY PRESSURE COOKER COMBO PACK IB (2,3 & 5 LTR)

EUREKA FORBES
WATER PURIFIERS SUPERIO RO+UV+MTDS+SS
SPECIAL OFFER PRICE ₹18,990
ಉಚಿತ: ₹3,999 ಮೌಲ್ಯದ NIRLEP NON STICK COOKWARE 4 Pc SET

FINANCE BONANZA
INSTANT LOAN APPROVAL
Upto ₹4,00,000*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*

LG
14 PLACE SETTINGS DISHWASHER DFB532FP
SPECIAL ಇ.ಎಮ್.ಐ ₹4,292
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

IFB
30 ಲೀ ಕನ್‌ವೆಕ್ಷನ್ ಮೈಕ್ರೋವೇವ್
SPECIAL ಇ.ಎಮ್.ಐ ₹1,168

LG SAMSUNG SONY Panasonic Haier NV PRIDE OF INDIA IFB Godrej LLOYD Whirlpool BOSCH PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF

GIRIAS
THE CONSUMER DURABLE PEOPLE
Since 1971

ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633

STORE LOCATOR

*Terms & conditions apply.Price Difference invoice (Sony, Samsung,LG) from any authorised Dealer and not applicable on online Purchase. Finance at the sole discretion of the Finance company.Upto 20% Cashback & 1 EMI off on selected brands and models. EMI offer on above products based on 12,18,24 & fixed emi schemes.Exchange offer valid on MRP and Product as to be in good working condition.*Free smart watch offer valid on 20000 & above Purchase on selected models & brands.

138 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA www.roundtableindia.org

ಸಾಕ್ಷ್ಯ ತಿರುಚಿದ್ದ ಪೊಲೀಸರು, ರಾಜಕಾರಣಿಗಳಿಗೆ ನಡುಕ

ಪ್ರಜಾವಾಣಿ ವಾರ್ತೆ



ಶ್ರೀಕೃಷ್ಣ

ಬೆಂಗಳೂರು: ಬಿಟ್ ಕಾಯಿನ್ (ಬಿಟಿಸಿ) ಅಕ್ರಮದ ಬಗ್ಗೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಅಧಿಕಾರಿಗಳು, ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣನ ವಿಚಾರಣೆ ನಡೆಸಿ ಹೇಳಿಕೆ ಪಡೆದುಕೊಂಡಿದ್ದಾರೆ.

'ನನ್ನನ್ನು ಬೆದರಿಸಿದ್ದ ಕೆಲ ಪೊಲೀಸ್ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳು, ನೂರಾರು ಕೋಟಿ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ' ಎಂಬುದಾಗಿ ಶ್ರೀಕಿ ಹೇಳಿಕೆ ನೀಡಿದ್ದಾನೆಂದು ಮೂಲಗಳು ತಿಳಿಸಿವೆ.

ಇದರ ಬೆನ್ನಲ್ಲೇ, ಬಿಟ್ ಕಾಯಿನ್ ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಅಧಿಕಾರಿಗಳು ಹಾಗೂ ಅವರ ಜೊತೆ ಸಂಪರ್ಕದಲ್ಲಿದ್ದ ಕೆಲ ರಾಜಕಾರಣಿಗಳಲ್ಲಿ ನಡುಕ ಶುರುವಾಗಿದೆ.

> **ತನಿಖೆ ಪ್ರಗತಿಯಲ್ಲಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲರನ್ನೂ ಒಬ್ಬೊಬ್ಬರಾಗಿ ಕರೆಸಿ ವಿಚಾರಣೆ ಮಾಡುತ್ತಿದ್ದೇವೆ. ಸದ್ಯಕ್ಕೆ ಹೆಚ್ಚು ಮಾಹಿತಿ ನೀಡಲಾಗದು**
> **ಮನೀಶ್ ಖರ್ಬೀಕರ್,** ಎಸ್ಐಟಿ ಮುಖ್ಯಸ್ಥ ಹಾಗೂ ಸಿಐಡಿ ಎಡಿಜಿಪಿ

ಡಾರ್ಕ್‌ವೆಬ್ ಮೂಲಕ ವಿದೇಶದಿಂದ 'ಹೈಡ್ರೊ ಗಾಂಜಾ' ತರಿಸಿದ್ದ ಆರೋಪದಡಿ ಶ್ರೀಕಿ ಹಾಗೂ ಇತರರ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ ಶ್ರೀಕಿ ಹಾಗೂ ಇತರರನ್ನು ಬಂಧಿಸಿದ್ದ ಸಿಸಿಬಿ ಅಧಿಕಾರಿಗಳು, 2 ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್ ಹಾಗೂ ಆ್ಯಪಲ್ ಮ್ಯಾಕ್‌ಬುಕ್ ಜಪ್ತಿ ಮಾಡಿದ್ದರು.

ಎಸ್ಐಟಿ ತನಿಖೆಯಲ್ಲಿ ಅನುಮಾನ ?

ಬಿಜೆಪಿ ಅಧಿಕಾರದದಲ್ಲಿದ್ದ ಅವಧಿಯಲ್ಲಿ ಹೆಚ್ಚು ಸುದ್ದಿಯಾಗಿದ್ದ ಬಿಟ್ ಕಾಯಿನ್ ಅಕ್ರಮ ಪ್ರಕರಣ ತನಿಖೆಗೆಂದು ಕಾಂಗ್ರೆಸ್ ಸರ್ಕಾರ ಎಸ್ಐಟಿ ರಚಿಸಿದೆ. ಆದರೆ, ಎಸ್ಐಟಿ ತನಿಖೆಯ ಮೇಲೆಯೇ ಕೆಲ ಅನುಮಾನಗಳು ಹುಟ್ಟಿಕೊಂಡಿವೆ.

ಶ್ರೀಕಿ ಹಾಗೂ ಇತರರಿಂದ ಜಪ್ತಿ ಮಾಡಿದ್ದ ಸಾಕ್ಷ್ಯಗಳನ್ನು ಸಿಸಿಬಿ ಅಧಿಕಾರಿಗಳು ತಿರುಚಿದ್ದರೆಂಬುದು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಿಂದ ಗೊತ್ತಾಗಿದೆ. ಸಾಕ್ಷ್ಯ ತಿರುಚಿದ್ದ ಸಿಸಿಬಿ ಅಧಿಕಾರಿಗಳು, ಇತರೆ ಪೊಲೀಸ್ ಅಧಿಕಾರಿಗಳು ಹಾಗೂ ಇತರರು ಯಾರು ಎಂಬುದು ಎಸ್ಐಟಿ ಅಧಿಕಾರಿಗಳಿಗೆ ಗೊತ್ತಿದೆ. ಆದರೆ, ಕಾಟನ್‌ಪೇಟೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಯಾರೊಬ್ಬರ ಹೆಸರು ಸಹ ನಮೂದಿಸಿಲ್ಲ. ಕೇವಲ 'ತನಿಖಾಧಿಕಾರಿ ಹಾಗೂ ಇತರೆ ಪೊಲೀಸ್ ಅಧಿಕಾರಿಗಳು' ಎಂದಷ್ಟೇ ಉಲ್ಲೇಖಿಸಿರುವುದು ಅನುಮಾನಕ್ಕೆ ಕಾರಣವಾಗಿದೆ.

'ತಪ್ಪಿತಸ್ಥರು ಎಂಬುದು ಗೊತ್ತಾಗುತ್ತಿದ್ದಂತೆ ಎಲ್ಲರ ಹೆಸರು ಉಲ್ಲೇಖಿಸಬೇಕಿತ್ತು. ಏಕೆ ಉಲ್ಲೇಖಿಸಿಲ್ಲ. ಯಾರದ್ದಾದರೂ ಒತ್ತಡ ಇದೆಯಾ' ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ಪ್ರಕರಣದಲ್ಲಿ ಲಭ್ಯವಾಗಿದ್ದ ಸಾಕ್ಷ್ಯಗಳನ್ನು ತಿರುಚಿದ್ದ ಆರೋಪದಡಿ ಸಿಸಿಬಿ ತನಿಖಾಧಿಕಾರಿಗಳು ಹಾಗೂ ಇತರೆ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಆಗಸ್ಟ್ 9ರಂದು ಎಫ್ಐಆರ್ ದಾಖಲಾಗಿದೆ.

ಇದೇ ಪ್ರಕರಣದ ತನಿಖೆಯನ್ನು ಎಸ್ಐಟಿ ಕೈಗೆತ್ತಿಕೊಂಡಿದ್ದು, ಪ್ರಮುಖ ಆರೋಪಿಗಳು ಹಾಗೂ ಸಿಸಿಬಿ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸುತ್ತಿದೆ.

ನೋಟಿಸ್ ನೀಡಿ ವಿಚಾರಣೆ: ಕೆಂಪೇಗೌಡ ನಗರ ಹಾಗೂ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಶ್ರೀಕಿಗೆ ಎಸ್ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದರು. ಅದನ್ನು ಸ್ವೀಕರಿಸಿದ್ದ ಶ್ರೀಕಿ, ಎರಡು ದಿನ ವಿಚಾರಣೆಗೆ ಹಾಜರಾಗಿದ್ದಾನೆ.

'ಬಿಟ್ ಕಾಯಿನ್ ಹೆಚ್ಚು ಸುದ್ದಿಯಾಗಲು ಶ್ರೀಕಿ ಪ್ರಮುಖ ಕಾರಣ. ಬಿಟ್ ಕಾಯಿನ್ ಏನು? ಹಾಗೂ ಅದರಲ್ಲಿ ಅಕ್ರಮ ಹೇಗಾಯಿತು ? ಎಂಬುದರ ಬಗ್ಗೆ ಶ್ರೀಕಿಯಿಂದ ಮಾಹಿತಿ ಪಡೆಯಬೇಕಿತ್ತು. ಹೀಗಾಗಿ, ಈತನನ್ನು ಎಸ್ಐಟಿ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸರ್ವರ್‌ಗಳನ್ನು ಶ್ರೀಕಿ ಹ್ಯಾಕ್ ಮಾಡಿದ್ದ. ಅದರಿಂದ ಬಿಟ್ ಕಾಯಿನ್ ಸಂಪಾದಿಸಿ, ಹಲವು ಏಜೆನ್ಸಿಗಳ ಸರ್ವರ್‌ಗಳಲ್ಲಿ ಇರಿಸಿದ್ದ. ಶ್ರೀಕಿಯನ್ನು ಬಂಧಿಸಿದ್ದ ಸಿಸಿಬಿ ಅಧಿಕಾರಿಗಳು, ಬಿಟ್ ಕಾಯಿನ್ ಮೌಲ್ಯದ ಬಗ್ಗೆ ತಿಳಿದುಕೊಂಡಿದ್ದರು. ಬಳಿಕ, ಶ್ರೀಕಿಯನ್ನು ಬೆದರಿಸಿ ಬಿಟ್ ಕಾಯಿನ್‌ಗಳನ್ನು ವರ್ಗಾವಣೆ ಮಾಡಿಕೊಂಡಿರುವ ಅನುಮಾನವಿದೆ. ಇದರ ಬಗ್ಗೆಯೇ ಎಸ್ಐಟಿ ಅಧಿಕಾರಿಗಳು, ಶ್ರೀಕಿಯಿಂದ ಮಾಹಿತಿ ಪಡೆದುಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ತನಿಖಾಧಿಕಾರಿ ವಿಚಾರಣೆ: ಬಿಟ್ ಕಾಯಿನ್ ಅಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳು ಭಾಗಿಯಾಗಿರುವ ಅನುಮಾನ ದಟ್ಟವಾಗಿದೆ. ಶ್ರೀಕಿ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಇನ್‌ಸ್ಪೆಕ್ಟರ್ ಹಾಗೂ ತಂಡದವರನ್ನೂ ಸಿಸಿಬಿ ವಿಚಾರಣೆ ನಡೆಸುತ್ತಿರುವುದಾಗಿ ಗೊತ್ತಾಗಿದೆ.

ಎಲ್ಲಿದ್ದ ಶ್ರೀಕಿ ?

'ಬೆಂಗಳೂರು ಜಯನಗರ ನಿವಾಸಿ ಶ್ರೀಕಿ, ನೆದರ್ಲೆಂಡ್ಸ್‌ನಲ್ಲಿ ಬಿ.ಎಸ್ಸಿ ವ್ಯಾಸಂಗ ಮಾಡಿದ್ದಾನೆ. ಬಿ.ಎಸ್ಸಿ ಕಲಿಯುವ ಸಂದರ್ಭದಲ್ಲಿ ಹ್ಯಾಕರ್‌ಗಳ ಪರಿಚಯವಾಗಿತ್ತು. ನಂತರ, ಹ್ಯಾಕರ್ ಆಗಿ ಪರಿಣಿತಿ ಪಡೆದುಕೊಂಡಿದ್ದ. ರಾಜ್ಯ ಸರ್ಕಾರದ ಇ–ಸಂಗ್ರಹಣಾ ಜಾಲತಾಣ ಹ್ಯಾಕ್ ಮಾಡಿದ್ದ ಪ್ರಕರಣದಲ್ಲೂ ಈತನ ಪಾತ್ರವಿತ್ತು' ಎಂದು ಮೂಲಗಳು ಹೇಳಿವೆ.

'ಜಾಮೀನು ಬಳಿಕ ತಲೆಮರೆಸಿಕೊಂಡಿದ್ದ ಈತ, ಕೆಲ ದಿನ ದೆಹಲಿಯ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದ. ಡ್ರಗ್ಸ್ ವ್ಯಸನಿಯಾಗಿದ್ದರಿಂದ ಚಿಕಿತ್ಸೆ ಕೊಡಿಸುತ್ತಿರುವುದಾಗಿ ಪೋಷಕರು ಹೇಳಿದ್ದರು. ಇದಾದ ನಂತರ, ಈತನ ಸುಳಿವು ಇರಲಿಲ್ಲ. ಎಲ್ಲಿದ್ದಾನೆಂಬುದು ಯಾರಿಗೂ ಗೊತ್ತಿರಲಿಲ್ಲ. ಎಸ್ಐಟಿ ಅಧಿಕಾರಿಗಳು ಈತನನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಿದ್ದಾರೆ. ಈತನ ಹೇಳಿಕೆಯು ಪ್ರಕರಣಕ್ಕೆ ಹೊಸ ತಿರುವು ನೀಡುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಹೊಂದಾಣಿಕೆ ರಾಜಕೀಯದ ಶಂಕೆ

'ಬಿಟ್ ಕಾಯಿನ್ ಪ್ರಕರಣದಲ್ಲಿ ಹಲವು ಪಕ್ಷಗಳ ಮುಖಂಡರು ಭಾಗಿಯಾಗಿದ್ದಾರೆ. ರಾಜಕೀಯ ಹೊಂದಾಣಿಕೆ ಮಾಡಿಕೊಂಡು ಪ್ರಕರಣವನ್ನು ಮುಚ್ಚಿಹಾಕುವ ಯತ್ನ ನಡೆದಿರಬಹುದು' ಎಂದು ಹಲವರು ಶಂಕೆ ವ್ಯಕ್ತಪಡಿಸಿದ್ದಾರೆ.

ಸಚಿವರಿಗೆ ₹ 30 ಲಕ್ಷ ಮೌಲ್ಯದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ 33 ಸಚಿವರಿಗೆ ತಲಾ ₹30 ಲಕ್ಷ ಮೌಲ್ಯದ ನೂತನ ಟೊಯೊಟಾ ಇನ್ನೋವಾ ಹೈಕ್ರಾಸ್‌-ಹೈಬ್ರಿಡ್ ಕಾರುಗಳನ್ನು ನೇರವಾಗಿ ಖರೀದಿಸಲು ಅನುಮತಿ ನೀಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಎಲ್ಲ ಸಚಿವರಿಗೂ ಟೊಯೊಟಾ ಇನ್ನೋವಾ ಕ್ರಿಸ್ಟಾ ಕಾರುಗಳನ್ನು ಒದಗಿಸಲಾಗಿದೆ. ಅವುಗಳನ್ನು ಬದಲಿಸಿ ಇತ್ತೀಚೆಗಷ್ಟೇ ಮಾರುಕಟ್ಟೆಗೆ ಬಂದಿರುವ ಇನ್ನೋವಾ ಹೈಕ್ರಾಸ್‌– ಹೈಬ್ರಿಡ್ ಕಾರುಗಳನ್ನು ನೀಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನಿರ್ಧರಿಸಿದೆ.

33 ಕಾರುಗಳನ್ನು ತಲಾ ₹ 30 ಲಕ್ಷ ದರದಲ್ಲಿ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್‌ನಿಂದ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಸೆಕ್ಷನ್ 4–ಜಿ ಅಡಿಯಲ್ಲಿ ವಿನಾಯಿತಿ ನೀಡಿ ಆರ್ಥಿಕ ಇಲಾಖೆ ಮಂಗಳವಾರ ಆದೇಶ ಹೊರಡಸಿದೆ.

ಸಚಿವರಿಗೆ ಹೊಸ ಕಾರುಗಳ ಖರೀದಿಗಾಗಿ ಒಟ್ಟು ₹ 9.90 ಕೋಟಿ ವೆಚ್ಚ ಮಾಡಲಾಗುತ್ತಿದೆ.

ರಾಯರ ಮಧ್ಯಾರಾಧನೆಗೆ ಭಕ್ತ ಸಾಗರ

ಪ್ರಜಾವಾಣಿ ವಾರ್ತೆ

ಮಂತ್ರಾಲಯ (ರಾಯಚೂರು): ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಎರಡನೇ ದಿನವಾದ ಶುಕ್ರವಾರ ಮಧ್ಯಾರಾಧನೆ ನಡೆಯಿತು.

ಮಠದಲ್ಲಿ ಬೆಳಿಗ್ಗೆ ಸುಪ್ರಭಾತ, ಪಂಡಿತರಿಂದ ಪಾರಾಯಾಣ ನಡೆಯಿತು. ಪೀಠಾಧಿಪತಿ ಸುಬುಧೇಂದ್ರ ತೀರ್ಥರು ರಾಯರ ಮೂಲಬೃಂದಾವನಕ್ಕೆ ಮಹಾಪಂಚಾಮೃತ ಅಭಿಷೇಕ ನೆರವೇರಿಸಿದರು. ತಿರುಪತಿ ತಿರುಮಲದ ದೇವರ ಶೇಷ ವಸ್ತ್ರ ರಾಯರಿಗೆ ಸಮರ್ಪಣೆ ಮಾಡಲಾಯಿತು. ಬಳಿಕ, ಶ್ರೀಗಳು ಮೂಲರಾಮದೇವರ ಸಂಸ್ಥಾನ ಪೂಜೆ ಕೈಗೊಂಡರು. ನಂತರ ಮಠದ ಆವರಣದೊಳಗಿನ ಎಲ್ಲ ಯತಿಗಳ ವೃಂದಾವನಕ್ಕೆ ಪೂಜೆ ಸಲ್ಲಿಸಲಾಯಿತು.

ಮಠದ ಆವರಣದಲ್ಲಿ ಸ್ವರ್ಣ ರಥದಲ್ಲಿ ರಾಘವೇಂದ್ರ ತೀರ್ಥರ ಚಿನ್ನದ ಉತ್ಸವಮೂರ್ತಿ ಇಟ್ಟು ಮೆರವಣಿಗೆ ಮಾಡಲಾಯಿತು. ಮಂಗಲವಾದ್ಯ, ಮಂತ್ರಘೋಷದೊಂದಿಗೆ ನಡೆದ ಮೆರವಣಿಗೆಯಲ್ಲಿ ಭಕ್ತರು ಸಾಂಪ್ರದಾಯಿಕ ವಸ್ತ್ರ ಧರಿಸಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.





ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಸ್ವರ್ಣ ರಥದಲ್ಲಿ ರಾಘವೇಂದ್ರ ತೀರ್ಥರ ಚಿನ್ನದ ಉತ್ಸಮೂರ್ತಿ ಇಟ್ಟು ಮೆರವಣಿಗೆ (ಎಡಚಿತ್ರ) ಪೀಠಾಧಿಪತಿ ಸುಬುಧೇಂದ್ರ ತೀರ್ಥರು ರಾಯರ ಮೂಲಬೃಂದಾವನಕ್ಕೆ ಮಹಾಪಂಚಾಮೃತ ಅಭಿಷೇಕ ನೆರವೇರಿಸಿದರು

ಮೊದಲ ದಿನ ಭಕ್ತರ ಸಂಖ್ಯೆ ಕಡಿಮೆ ಇತ್ತು. ಮಧ್ಯಾರಾಧನೆ ಪ್ರಯುಕ್ತ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರದಿಂದ ಭಾರಿ ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಕಣ್ತುಂಬಿಕೊಂಡರು.

ಮಂತ್ರಾಲಯದಲ್ಲಿ ಸಭಾಮಂಟಪ, ಕಲ್ಯಾಣ ಮಂಟಪ, ವಸತಿ ಗೃಹಗಳು ಭಕ್ತರಿಂದ ತುಂಬಿಕೊಂಡಿವೆ. ಮಠದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಆಗದೆ ಕೆಲವರು ರಾಯಚೂರಿನಲ್ಲಿ ವಾಸ್ತವ್ಯ ಮಾಡಿದ್ದಾರೆ. ಭಕ್ತರು ಬೆಳಿಗ್ಗೆ ತುಂಗಭದ್ರಾ ನದಿಯಲ್ಲಿ ಪುಣ್ಯಸ್ನಾನ ಮಾಡಿ ಸರತಿ ಸಾಲಿನಲ್ಲಿ ನಿಂತು ರಾಯರ ಬೃಂದಾವನದ ದರ್ಶನ ಪಡೆದರು.

ಜನದಟ್ಟಣೆ ನಿಯಂತ್ರಿಸಲು ಸ್ವಯಂ ಸೇವಕರನ್ನು ನಿಯೋಜಿಸಲಾಗಿದೆ. ವೃದ್ಧರು ಹಾಗೂ ಅಂಗವಿಕಲರಿಗೆ ಬೃಂದಾವನದ ದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ.

ಉತ್ತರ ಆರಾಧನೆ ಮಹೋತ್ಸವ ಇಂದು: ಸೆ.2ರಂದು ರಾಯರ ಉತ್ತರ ಆರಾಧನಾ ಪ್ರಾತಃ ಮಹಾರಥೋತ್ಸವ ಜರುಗಲಿದೆ. ಸೆಪ್ಟೆಂಬರ್ 3ರಂದು ಸುಜ್ಞಾನೇಂದ್ರ ತೀರ್ಥರ ಆರಾಧನಾ ಮಹೋತ್ಸವ, ಅಶ್ವ ವನೋತ್ಸವ ಹಾಗೂ 4ರಂದು ಸಮಾರೋಪ ಕಾರ್ಯಕ್ರಮ ನಡೆಯಲಿದೆ.

ಮಹೋತ್ಸವ ಅಂಗವಾಗಿ ಸೆ. 2ರಂದು ರಕ್ಷಾ ಕಾರ್ತಿಕ್ ಅವರಿಂದ ಭರತ ನಾಟ್ಯ, ನೀಲಂ ಸುದರ್ಶನ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಪ್ರಭಾತ್ ಕಲಾ ಆರ್ಟ್ಸ್‌ನಿಂದ ನೃತ್ಯ ರೂಪಕ, ಸೆಪ್ಟೆಂಬರ್ 3ರಂದು ಅಶ್ವ ವಾಹನ ಉತ್ಸವ, ನಾಟ್ಯ ಸರಸ್ವತಿ ಅವರಿಂದ ಕುಚುಪುಡಿ ನೃತ್ಯ, ವಿದ್ವಾನ್ ಜಗದೀಶ್ ಆಚಾರ್ಯರಿಂದ ದಾಸವಾಣಿ ಹಾಗೂ ಶಾರದಾ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ.

ಸರ್ಕಾರಕ್ಕೆ ಇರುವ ಶಾಸನಾತ್ಮಕ ಅಧಿಕಾರ ಏನು: ಹೈಕೋರ್ಟ್

ನಾಡಗೀತೆ ಧಾಟಿ

ಬೆಂಗಳೂರು: ಕಿಕ್ಕೇರಿ ಕೃಷ್ಣಮೂರ್ತಿ ತಮ್ಮ ಜಮೀನಿನಲ್ಲಿರುವ ಮರದ ಎತ್ತರದ ಟೊಂಗೆಯ ತುದಿಯಲ್ಲಿ ಕುಳಿತು 'ಜಯಭಾರತ ಜನನಿಯ ತನುಜಾತೆ...' ನಾಡಗೀತೆಯನ್ನು ಜೌನ್‌ಪುರಿ ರಾಗದಲ್ಲಿ ಹಾಡುತ್ತೇನೆ ಎಂದು ಹೇಳಿದರೆ ಏನು ಮಾಡುವುದು? ಆಗ ಅದು ನಿಮ್ಮ ಆದೇಶಕ್ಕೆ ವಿರುದ್ಧವಾಗುತ್ತದೆಯೇ?

'ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿಯೇ ನಾಡಗೀತೆಯನ್ನು 2 ನಿಮಿಷ 30 ಸೆಕೆಂಡ್‌ಗಳಲ್ಲಿ ಹಾಡಬೇಕು' ಎಂಬುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್ 25ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಶುಕ್ರವಾರ ವಿಚಾರಣೆ ನಡೆಸಿದ ವೇಳೆ ಕಿಕ್ಕೇರಿ ಪರ ವಕೀಲರನ್ನು ಪ್ರಶ್ನಿಸಿದ ಪರಿ ಇದು.

ಕಿಕ್ಕೇರಿ ಕೃಷ್ಣಮೂರ್ತಿ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ಜನಸಾಮಾನ್ಯರು ಇಂಥದೇ ರಾಗದಲ್ಲಿ ಹಾಡಬೇಕು ಎಂಬ ಷರತ್ತು ಸರಿಯಲ್ಲ. ರಾಜ್ಯ ಸರ್ಕಾರ ನಮ್ಮ ಸಂಗೀತದ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಹಾಗಾಗಿ, ಸರ್ಕಾರ ಇದರ ಔಚಿತ್ಯವನ್ನು ಮನವರಿಕೆ ಮಾಡಿಕೊಡಬೇಕು' ಎಂದು ಕೋರಿದರು.

ಇದಕ್ಕೆ ಉತ್ತರಿಸಿದ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹ್ಮದ್, 'ಸರ್ಕಾರ ಈ ಆದೇಶವನ್ನು ಸಂವಿಧಾನದ 162ನೇ ವಿಧಿಯಡಿ ತನಗಿರುವ ಪರಮಾಧಿಕಾರವನ್ನು ಬಳಸಿ ಇಂತಹುದೇ ರಾಗದಲ್ಲಿ ಹಾಡುವಂತೆ ನಿರ್ಬಂಧ ವಿಧಿಸಿದೆ. ಇದನ್ನು ಸರ್ಕಾರದ ಅಧಿಕೃತ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲೇ ಹಾಡುವಂತೆ ಆದೇಶಿಸಲಾಗಿದೆ' ಎಂದು ಸಮರ್ಥಿಸಿಕೊಂಡರು.

ಇದನ್ನು ಒಪ್ಪದ ನ್ಯಾಯಪೀಠ, 'ಈ ಪ್ರಕರಣದಲ್ಲಿ ಅರ್ಜಿದಾರರು ಎತ್ತಿರುವ ಪ್ರಶ್ನೆಯ ಅನುಸಾರ ಅವರ ತಮ್ಮ ಮನಸ್ಸಿಗೆ ಬಂದ ರಾಗದಲ್ಲಿ ಹಾಡಲು ನೀವೇಕೆ ನಿರ್ಬಂಧಿಸಿದ್ದೀರಿ ಎಂಬುದೇ ಆಗಿದೆ. ಅಂತೆಯೇ, ಸರ್ಕಾರ ಇಂತಹ ಆದೇಶ ಹೊರಡಿಸುವಾಗ ಅದಕ್ಕಿರುವ ಶಾಸನಾತ್ಮಕ ಅಧಿಕಾರಗಳೇನು ಮತ್ತು ಯಾರು, ಯಾವಾಗ ಎಂತಹ ಸಂದರ್ಭಗಳಲ್ಲಿ ನಿಮ್ಮ ಈ ನಿರ್ಬಂಧ ಪಾಲಿಸಬೇಕು ಎಂಬುದನ್ನು ನ್ಯಾಯಪೀಠಕ್ಕೆ ಖಚಿತವಾಗಿ ವಿವರಿಸಿ' ಎಂದು ನಿರ್ದೇಶಿಸಿತು.

ಹಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಮತ್ತು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ಬಂಡೀಪುರ ಕಾಡಂಚಿನ ಗ್ರಾಮಗಳಲ್ಲಿ ಧಾರಾಕಾರ ಮಳೆ ಸುರಿಯಿತು. ತಗ್ಗು ಪ್ರದೇಶದ ಅಲ್ಲಲ್ಲಿ ನೀರು ನಿಂತಿದೆ. ಸಣ್ಣಪುಟ್ಟ ಕೆರೆಗಳಿಗೆ ನೀರು ಹರಿದಿದೆ.

ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಉತ್ತಮ ಮಳೆಯಾಗಿದೆ. ತಿಂಗಳ ಹಿಂದೆ ಬಿತ್ತನೆ ಮಾಡಿದ್ದ ರಾಗಿ ಸಸಿ ಮುದುಡಿದ್ದು, ಮಳೆಯು ರೈತರಲ್ಲಿ ಸಂತಸ ಮೂಡಿಸಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ನಸುಕಿನಲ್ಲಿ ಉತ್ತಮ ಮಳೆಯಾಗಿದ್ದು, ಹಿರಿಯೂರಿನಲ್ಲಿ 11 ಸೆಂ.ಮೀ ಮಳೆ ಸುರಿದಿದೆ.

ಗುರುವಾರ ರಾತ್ರಿ ಆರಂಭವಾದ ಮಳೆ ಶುಕ್ರವಾರ ನಸುಕಿನಲ್ಲಿ ಬಿರುಸು ಪಡೆಯಿತು. ಹಿರಿಯೂರು ತಾಲ್ಲೂಕಿನ ಬಬ್ಬೂರು, ಚಳ್ಳಕೆರೆ, ಚಿತ್ರದುರ್ಗದಲ್ಲಿ ರಭಸದ ಮಳೆಯಾಗಿದೆ. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು, ಕೊಂಡಜ್ಜಿಯಲ್ಲಿ ಜೋರು ಮಳೆ ಬಿದ್ದಿದೆ.

ಕೋಲಾರ ಜಿಲ್ಲೆಯ ವಿವಿಧೆಡೆ ಸಿಡಿಲು ಗುಡುಗಿನಿಂದ ಬಿರುಸಿನ ಮಳೆಯಾಯಿತು. ನಗರ ಮತ್ತು ಗ್ರಾಮಾಂತರ ಭಾಗಗಳಲ್ಲಿ ಸಂಜೆ 5 ಗಂಟೆಯವರೆಗೂ ಉತ್ತಮ ಮಳೆ ಸುರಿಯಿತು. ಜಿಲ್ಲೆಯಲ್ಲಿ ಬಿತ್ತನೆ ಅವಧಿ ಬಹುತೇಕ ಮುಗಿದಿದ್ದು, ಈಚೆಗೆ ಬಿತ್ತನೆ ಮಾಡಿದವರಿಗೆ ಈಗ ಸುರಿದ ಮಳೆ ವರದಾನವಾಗಲಿದೆ.

ಮುಳಬಾಗಿಲು ತಾಲ್ಲೂಕಿನ ಅಗರ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕಿನ ಹುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜೋರು ಮಳೆಯಾಗಿದೆ.



ಗುರುವಾರ ತಡರಾತ್ರಿ ಸುರಿದ ಮಳೆಯಿಂದ ಚಳ್ಳಕೆರೆ ತಾಲ್ಲೂಕಿನ ಕಮ್ಮತ್ ಮರಿಕುಂಟೆ ಗ್ರಾಮದ ಈರಣ್ಣ ಅವರ ಅಡಿಕೆ ತೋಟ ಜಲಾವೃತಗೊಂಡಿದೆ

ಧಾರಾಕಾರ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಸೆ.7ರ ತನಕ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಹಾಗೂ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ರಾಮನಗರ, ತುಮಕೂರು ಜಿಲ್ಲೆಗಳಿಗೆ ಶನಿವಾರ ಹಾಗೂ ಭಾನುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಬೆಂಗಳೂರು ನಗರದಲ್ಲೂ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆ ಸುರಿಯಲಿದೆ ಎಂದು ಐಎಂಡಿ ಸೂಚನೆ ನೀಡಿದೆ.

ದಸರೆಗೆ ಮುನ್ನುಡಿ ಬರೆದ 'ಗಜಪಯಣ'

ವೀರನಹೊಸಹಳ್ಳಿಯಲ್ಲಿ ಸಾಂಪ್ರದಾಯಿಕ ಪೂಜೆ • ಮೈಸೂರು ಅರಣ್ಯ ಭವನ ತಲುಪಿದ ಆನೆಗಳು

ಪ್ರಜಾವಾಣಿ ವಾರ್ತೆ

ಮೈಸೂರು: ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಹೆಬ್ಬಾಗಿಲು ವೀರನಹೊಸಹಳ್ಳಿಯಲ್ಲಿ ಶುಕ್ರವಾರ ನಾಡಹಬ್ಬ ದಸರೆಯ ಸಂಭ್ರಮಕ್ಕೆ 'ಗಜ ಪಯಣ'ವು ಮುನ್ನುಡಿ ಬರೆಯಿತು.

ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿ ಹೊರುತ್ತಿರುವ ಅಭಿಮನ್ಯು ಸೇರಿ 9 ಆನೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ಪುಷ್ಪಾರ್ಚನೆ ಮಾಡಿ ಗಜ ಪಯಣಕ್ಕೆ ಚಾಲನೆ ನೀಡಿದರು.

'ವರಲಕ್ಷ್ಮಿ', 'ವಿಜಯಾ' ಜೊತೆ ಗಾಂಭೀರ್ಯದ ಹೆಜ್ಜೆಗಳನ್ನಿರಿಸಿ ಬಂದ ಅಂಬಾರಿ ಆನೆ 'ಅಭಿಮನ್ಯು' ನಾಡಹಬ್ಬ ದಸರೆಯ ಸಡಗರಕ್ಕೆ ಕಳೆ ತುಂಬಿದ. ಅವನೊಂದಿಗೆ ಮತ್ತಿಗೋಡು ಆನೆ ಶಿಬಿರದ ಭೀಮ, ಮಹೇಂದ್ರ, ಬಳ್ಳೇ ಶಿಬಿರದ 'ಅರ್ಜುನ', ಕೊಡಗು ಜಿಲ್ಲೆಯ ದುಬಾರೆ ಶಿಬಿರದ 'ಧನಂಜಯ', 'ಗೋಪಿ', 'ಕಂಜನ್' ಹೆಜ್ಜೆಹಾಕಿದರು. ಈ ಮೊದಲ ತಂಡದಲ್ಲಿ 7 ಗಂಡು ಹಾಗೂ 2 ಹೆಣ್ಣಾನೆಗಳಿವೆ.

ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ನಡೆಯಿತು. ಆನೆಗಳಿಗೆ ಪಂಚಫಲ, ಕಡುಬು, ಚಕ್ಕುಲಿ, ನಿಪ್ಪಟ್ಟು, ಹೋಳಿಗೆ, ಬೆಲ್ಲ, ಕಬ್ಬು, ಕಲ್ಲು ಸಕ್ಕರೆ, ಮೋದಕ ನೈವೇದ್ಯ ನೀಡಿ 'ಶೋಡಷೋಪಚಾರ' ಪೂಜೆ ಮಾಡಲಾಯಿತು. ಗಣಪತಿ ಅರ್ಚನೆ ಜೊತೆ ವನದೇವತೆ, ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಲಾಯಿತು.

ಶಾಸಕ ಜಿ.ಡಿ.ಹರೀಶ್‌ಗೌಡ ಈಡುಗಾಯಿ ಒಡೆದು, ಆರತಿ ಬೆಳಗಿದರು. ಆನೆಗಳ ಮಾವುತರು, ಕಾವಡಿಗಳಿಗೆ ಸಚಿವ ಈಶ್ವರ ಖಂಡ್ರೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಫಲ–ತಾಂಬೂಲ ನೀಡಿ ಆಹ್ವಾನಿಸಿದರು. ಪೂಜೆ ನಂತರ ಸ್ವಲ್ಪ ದೂರದವರೆಗೆ ಆನೆಗಳನ್ನು ನಡೆಸಿಕೊಂಡು ಬರಲಾಯಿತು. ನಂತರ ಲಾರಿಗಳಲ್ಲಿ ಮೈಸೂರಿನ ಅರಣ್ಯ ಭವನಕ್ಕೆ ಸಾಗಿಸಲಾಯಿತು.

ಈ ಆನೆಗಳು ಸೆ.5ರಂದು ಮಧ್ಯಾಹ್ನ ಅರಮನೆ ಪ್ರವೇಶಿಸಲಿವೆ. ಅ.15ರಿಂದ ನವರಾತ್ರಿ ಆರಂಭವಾಗಲಿದೆ. ಅ.24ರ ವಿಜಯದಶಮಿಯಂದು ಜಂಬೂ ಸವಾರಿ ನಡೆಯಲಿದೆ.



'ಅಭಿಮನ್ಯು' ನೇತೃತ್ವದ ಗಜಪಡೆಗೆ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ವೀರನಹೊಸಹಳ್ಳಿಯಲ್ಲಿ ಶುಕ್ರವಾರ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'₹ 30 ಕೋಟಿ ಅನುದಾನ'

'ನಾಡಹಬ್ಬ ದಸರೆಗೆ ₹ 30 ಕೋಟಿ ಅನುದಾನ ಕೇಳಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡುವ ಭರವಸೆ ನೀಡಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

'ಅದ್ದೂರಿ ದಸರಾ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಾರ್ಯಕಾರಿ ಸಮಿತಿಗಳ ರಚನೆಗೆ ಸಭೆಯನ್ನು ನಡೆಸಲಾಗಿದೆ. ಸಂವಿಧಾನವು ಧಾರ್ಮಿಕ ಅಭಿವ್ಯಕ್ತಿ, ಆಚರಣೆಯನ್ನು ಮುಕ್ತವಾಗಿ ಮಾಡುವ ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ನೀಡಿದೆ. ಜನರ ನಂಬಿಕೆ ಅನುಸಾರವೇ ನಾಡಹಬ್ಬ ಆಚರಿಸಲಾಗುತ್ತಿದೆ' ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	100.10	2,147	7,140
ಹಾರಂಗಿ	2,859	2,855.93	522	1,700
ಕಬಿನಿ	2284.00	2,273.80	1,852	2,000
ಹೇಮಾವತಿ	2,922	2,906.90	861	5,780
ಲಿಂಗನಮಕ್ಕಿ	1,819	1,788.10	1,226	9,217
ಸೂಪಾ (ಮೀ)	564	545.68	1,931	5,396
ಮಾಣಿ	595	579.72	148	686
ತುಂಗಭದ್ರಾ	1,633	1,624.92	780	9,363
ಮಲಪ್ರಭಾ	2079.50	2,066.50	00	2,194
ಘಟಪ್ರಭಾ	2175	2,162.23	2,531	1,134
ಭದ್ರಾ	186	163.11	606	3,222
ಆಲಮಟ್ಟಿ (ಮೀ)	519.60	519.54	5,767	1,705
ನಾರಾಯಣಪುರ (ಮೀ)	492.25	489.48	69	9,766

* ನೆಲಮಟ್ಟದಿಂದ

ಸಂಕ್ಷಿಪ್ತ ಸುದ್ದಿ

ವರ್ಗ: ಸಿ.ಎಂ ಕಡಿವಾಣ

ಬೆಂಗಳೂರು: ಮುಖ್ಯಮಂತ್ರಿ ಅನುಮೋದನೆ ಪಡೆಯದೇ ನೌಕರರ ವರ್ಗಾವಣೆ ಮಾಡಿದರೆ ಅದಕ್ಕೆ ಆಯಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಇಲಾಖಾ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣಾ ಅವಧಿ ಜುಲೈ 3ಕ್ಕೆ ಮುಗಿದಿದೆ. ಆದರೂ, ಕೆಲ ಇಲಾಖೆಗಳು ನಿಗದಿತ ಶೇ 6ಕ್ಕಿಂತ ಹೆಚ್ಚು ವರ್ಗಾವಣೆ ಮಾಡಿದ್ದು, ವರ್ಗಾವಣೋತ್ತರ ಅನುಮೋದನೆಗೆ ಕಡತ ಮಂಡಿಸಲಾಗಿದೆ. ಇದು ನಿಯಮ ಬಾಹಿರ. ಅನಿವಾರ್ಯ ಸಂದರ್ಭದಲ್ಲಿ ಮುಖ್ಯಮಂತ್ರಿ ಅನುಮತಿ ಪಡೆಯಬೇಕು ಎಂದು ಸೂಚಿಸಲಾಗಿದೆ.

'ನಾವೂ ಮಾದಿಗರೇ ಇರಬೇಕು'

ಚಿತ್ರದುರ್ಗ: 'ಮಾದಿಗ ಸಮುದಾಯದ ಮರುಳಸಿದ್ಧರೇ ನಮ್ಮ ಗುರುಗಳು. ನಾವು ಮರುಳಸಿದ್ಧರ ಒಕ್ಕಲಿನವರು. ಮೂಲತಃ ನಾವೂ ಮಾದಿಗರೇ ಇರಬೇಕು' ಎಂದು ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಅಭಿಪ್ರಾಯಪಟ್ಟರು.



ಜಿ.ಎಂ.ಸಿದ್ದೇಶ್ವರ

ಹೊಳಲ್ಕೆರೆ ತಾಲ್ಲೂಕಿನ ಹಿರೆಕಂದವಾಡಿಯಲ್ಲಿ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರ ಪೂರ್ವಾಶ್ರಮದ ತಾಯಿ ಗಂಗಮ್ಮ ಅವರ ಶಿವಗಣಾರಾಧನೆ ಅಂಗವಾಗಿ ಶುಕ್ರವಾರ ಏರ್ಪಡಿಸಿದ್ದ ಸರ್ವ ಶರಣರ ಸಮ್ಮೇಳನದಲ್ಲಿ ಸಿದ್ದೇಶ್ವರ ಮಾತನಾಡಿದರು.

'ಬಸವಣ್ಣನ ಕಾಲದಲ್ಲಿ ಲಿಂಗಧಾರಣೆ ಮಾಡಿದ ಬಳಿಕ ನಮ್ಮ ಜಾತಿ ಬದಲಾಗಿರಬಹುದು. ನಮ್ಮನ್ನು ಈಗಲೂ ಕೆಲ ಸಮುದಾಯಗಳು ಮುಕ್ತ ಮನಸಿನಿಂದ ಸ್ವೀಕರಿಸುವುದಿಲ್ಲ. ಈ ಬಗ್ಗೆ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವ ರೊಂದಿಗೆ ಹಲವು ಬಾರಿ ಚರ್ಚೆ ಮಾಡಿದ್ದೇನೆ. ನಾವು ಕೂಡ ಶೋಷಿತ ಸಮುದಾಯದವರೇ' ಎಂದು ಹೇಳಿದರು.

ವಿದ್ಯಾರ್ಥಿ ಶಾಲಾ ಬ್ಯಾಗ್‌ನಲ್ಲಿ ಹಾವು!

ರಿಪ್ಪನ್‌ಪೇಟೆ (ಶಿವಮೊಗ್ಗ): ಸಮೀಪದ ಬಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎರಡನೇ ತರಗತಿ ವಿದ್ಯಾರ್ಥಿ ಭುವನ್ ಬ್ಯಾಗ್‌ನಲ್ಲಿ ಹಾವು ಪತ್ತೆಯಾಗಿದೆ.

ಶುಕ್ರವಾರ ಬೆಳಿಗ್ಗೆ ತರಗತಿ ಪ್ರಾರಂಭವಾದಾಗ ನಲಿಕಲಿ ತರಗತಿಯ ಶಿಕ್ಷಕರು ಪಾಠ ಓದಲು ಬ್ಯಾಗ್‌ನಿಂದ ಪುಸ್ತಕ ತೆಗೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿ ಹಾಜರಿ ಕರೆಯುತ್ತಿದ್ದರು. ವಿದ್ಯಾರ್ಥಿ ಭುವನ್ ಪುಸ್ತಕ ತೆಗೆಯಲು ಮುಂದಾದಾಗ ಬ್ಯಾಗ್‌ನಲ್ಲಿ ಹಾವು ಮಲಗಿರುವುದನ್ನು ಕಂಡಿದ್ದಾನೆ. ಪಕ್ಕದಲ್ಲಿ ಕುಳಿತಿದ್ದ ಸಹಪಾಠಿ ಮಣಿಕಂಠನಿಗೆ ಹಾವನ್ನು ತೋರಿಸಿದ್ದಾನೆ. ಅದನ್ನು ಕಂಡ ತಕ್ಷಣವೇ ಮಣಿಕಂಠ ಬ್ಯಾಗ್‌ನ ಜಿಪ್ ಎಳೆದು, ಶಿಕ್ಷಕರಿಗೆ ವಿಷಯ ತಿಳಿಸಿದ್ದಾನೆ.

ಶಿಕ್ಷಕರು, ಬ್ಯಾಗ್ ಅನ್ನು ಶಾಲಾ ಕೊಠಡಿಯಿಂದ ಹೊರತಂದು ತೆರೆದು ನೋಡಿದಾಗ ಹಾವು ಇರುವುದು ಖಚಿತವಾಗಿದೆ. ನಂತರ ಪಾಲಕರನ್ನು ಕರೆಸಿ ಬ್ಯಾಗ್‌ನಲ್ಲಿದ್ದ ನಾಗರಹಾವನ್ನು ಸಮೀಪದ ಕಾಡಿಗೆ ಬಿಟ್ಟು ಬಂದಿದ್ದಾರೆ.



ಬ್ಯಾಗ್‌ನಲ್ಲಿದ್ದ ನಾಗರಹಾವು

ಶಾರ್ಪ್ ಶೂಟರ್ ಸಾವು ಮೂವರು ಅಧಿಕಾರಿಗಳ ವಿರುದ್ಧ ಪ್ರಕರಣ

ಆಲೂರು (ಹಾಸನ): ಆನೆ ದಾಳಿಗೆ ಸಿಲುಕಿ ಮೃತಪಟ್ಟ ಶಾರ್ಪ್‌ಶೂಟರ್, ಅರಣ್ಯ ಇಲಾಖೆಯ ಹೊರಗುತ್ತಿಗೆ ನೌಕರ ವೆಂಕಟೇಶ್ ಅವರ ಪುತ್ರ ಮಿಥುನ್ ಕುಮಾರ್ ನೀಡಿದ ದೂರಿನ ಮೇರೆಗೆ, ಡಿಎಫ್‌ಒ, ಎಸಿಎಫ್ ಹಾಗೂ ಆರ್‌ಎಫ್‌ಒ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆನೆಗೆ ಅರಿವಳಿಕೆ ಚುಚ್ಚುಮದ್ದು ಶೂಟ್ ಮಾಡಲು ಗುರುವಾರ ಮಧ್ಯಾಹ್ನ ನನ್ನ ತಂದೆ ವೆಂಕಟೇಶ್ ಅವರನ್ನು ಕರೆಸಿದ್ದರು. ಆಗ ಅರಣ್ಯ ಇಲಾಖೆ ಅಧಿಕಾರಿಗಳು ಸುರಕ್ಷತೆ ಹಾಗೂ ಮುಂಜಾಗ್ರತೆ ವಹಿಸದಿದ್ದುದರಿಂದಲೇ ದುರ್ಘಟನೆ ನಡೆದಿದೆ. ನಿರ್ಲಕ್ಷ್ಯ ವಹಿಸಿದ ಅರಣ್ಯ ಇಲಾಖೆಯ ಡಿಎಫ್‌ಒ, ಎಸಿಎಫ್, ಆರ್‌ಎಫ್‌ಒ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ತಿಳಿಸಿದ್ದರು.

'ತನಿಖೆ ನಡೆಸಲಾಗುತ್ತಿದೆ' ಎಂದು ಎಸ್ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

ಅಂತ್ಯಕ್ರಿಯೆ: ಆಲೂರು ತಾಲ್ಲೂಕಿನ ಹೊನ್ನವಳ್ಳಿಯಲ್ಲಿ ವೆಂಕಟೇಶ್ ಅವರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸೌಜನ್ಯಾ ಊರಿಗೆ ಬಸ್

ಬೆಳ್ತಂಗಡಿ (ದಕ್ಷಿಣ ಕನ್ನಡ): ಹತ್ಯೆಗೊಳಗಾಗಿರುವ ಸೌಜನ್ಯಾ ಅವರ ಊರು ಪಾಂಗಳ–ಧರ್ಮಸ್ಥಳ ಮಧ್ಯೆ ಕೆಎಸ್ಆರ್‌ಟಿಸಿ ಬಸ್ ಸಂಚಾರ ಆರಂಭಿಸಲಾಗಿದೆ.

ಪಾಂಗಳ ಪರಿಸರದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಿತ್ಯ ಬೆಳಿಗ್ಗೆ ಮತ್ತು ಸಂಜೆ ಬಸ್ ಸಂಚಾರ ನಡೆಸಲಿದೆ.

ಸೌಜನ್ಯಾ ತಾಯಿ ಕುಸುಮಾವತಿ ಅವರು ಬಸ್ ಸಂಚಾರಕ್ಕೆ ಹಸಿರು ನಿಶಾನೆ ತೋರಿದರು. ಕೆಎಸ್ಆರ್‌ಟಿಸಿ ಅಧಿಕಾರಿಗಳು, ಬಾಬು ಗೌಡ, ಪಾಂಗಳ ಗ್ರಾಮಸ್ಥರು ಇದ್ದರು.

'ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗನಗೌಡ ಅವರು ಆ.21ರಂದು ಸೌಜನ್ಯಾ ಮನೆಗೆ ಭೇಟಿ ನೀಡಿದ್ದ ವೇಳೆ ಸೌಜನ್ಯಾ ಮನೆಯವರು ಈ ಪರಿಸರದ ಮಕ್ಕಳಿಗೆ ಅನುಕೂಲವಾಗಲು ಬಸ್ ವ್ಯವಸ್ಥೆ ಮಾಡುವಂತೆ ಕೇಳಿಕೊಂಡಿದ್ದರು. ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಬಾಯಿ ಬಡಿದುಕೊಂಡ ರೈತ ಮುಖಂಡರು, ಸರ್ಕಾರಕ್ಕೆ ಬಾರುಕೋಲು ಏಟು

ಇಳಿದ ನೀರಿನ ಮಟ್ಟ: ಹೆಚ್ಚಿದ ಹೋರಾಟ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ನಿರಂತರವಾಗಿ ನೀರು ಹರಿದು ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಕುಸಿಯುತ್ತಿದೆ. ರಾಜ್ಯ ಸರ್ಕಾರದ ವಿರುದ್ಧ ಜಿಲ್ಲೆಯಾದ್ಯಂತ ಆಕ್ರೋಶ ಹೆಚ್ಚುತ್ತಿದೆ.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಗರದ ಸರ್.ಎಂ.ವಿ ಪ್ರತಿಮೆ ಎದುರು ನಡೆಸುತ್ತಿರುವ ಹೋರಾಟಕ್ಕೆ ವಿವಿಧ ಸಂಘಟನೆ, ರಾಜಕೀಯ ಪಕ್ಷಗಳ ಮುಖಂಡರು ಭಾಗಿಯಾಗಿ ಬೆಂಬಲ ನೀಡುತ್ತಿದ್ದಾರೆ. ಶುಕ್ರವಾರ ಜೆಡಿಎಸ್‌ನ ಹಲವು ಮುಖಂಡರು ಭಾಗಿಯಾಗಿದ್ದರು.

‘ರಾಜ್ಯ ಸರ್ಕಾರ ರೈತರಿಗೆ ಅನ್ಯಾಯ ಮಾಡುತ್ತಿದೆ’ ಎಂದು ಆರೋಪಿಸಿ ಪ್ರತಿಭಟನಾಕಾರರು ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡ ಸಿ.ಎಸ್. ಪುಟ್ಟರಾಜು ಮಾತನಾಡಿ, ‘ಹಿಂದಿನಿಂದಲೂ ಕಾವೇರಿ ಹೋರಾಟ ಪಕ್ಷಾತೀತವಾಗಿ ನಡೆದಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ರೈತರಿಗೆ ಮೋಸವಾಗುತ್ತಿದ್ದು ಖಂಡಿಸುವುದು ನಮ್ಮೆಲ್ಲರ ಕರ್ತವ್ಯ. ಸೆ.2ರಂದು ಜೆಡಿಎಸ್ ವತಿಯಿಂದ ಬೃಹತ್ ಹೋರಾಟ ಹಮ್ಮಿಕೊಂಡಿದ್ದೇವೆ’ ಎಂದರು.

ಬಾರುಕೋಲು ಚಳವಳಿ: ಶ್ರೀರಂಗಪಟ್ಟಣದ ಕುವೆಂಪು ವೃತ್ತದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ‘ಬಾರುಕೋಲು ಚಳವಳಿ’ ನಡೆಸಿದರು. ‘ಮಲಗಿರುವ ರಾಜ್ಯ ಸರ್ಕಾರಕ್ಕೆ ಬಾರುಕೋಲಿನ ಏಟು ಕೊಟ್ಟು ಎಬ್ಬಿಸಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರೈತರು ಬೇಕಿದ್ದರೆ ಕೋರ್ಟ್‌ಗೆ ಹೋಗಲಿ ಎಂದು ಹೇಳಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈಗ ದೆಹಲಿಯಲ್ಲಿ ವಕೀಲರ ತಂಡವನ್ನು ಭೇಟಿ ಮಾಡಿದ್ದಾರೆ. ನೀರು ಹೋದ ಮೇಲೆ ಎಚ್ಚೆತ್ತುಕೊಂಡಿರುವುದು ನಾಚಿಕೆಗೇಡಿನ ಸಂಗತಿ. ಅವರಿಗೆ ಆತ್ಮಸಾಕ್ಷಿ ಇದ್ದರೆ ಕೂಡಲೇ ರಾಜೀನಾಮೆ ಕೊಡಬೇಕು’ ಎಂದು ಸಮಿತಿಯ ಅಧ್ಯಕ್ಷ ಕೆ.ಎಸ್.ನಂಜುಂಡೇಗೌಡ ಒತ್ತಾಯಿಸಿದರು.

ನಗರದ ಜೆ.ಸಿ ವೃತ್ತದಲ್ಲಿ ರೈತಸಂಘದ ಸದಸ್ಯರು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕೆಆರ್‌ಎಸ್ ಗೇಟ್‌ನಲ್ಲೇ ಮಲಗಿದ್ದ ದರ್ಶನ್: ರೈತಸಂಘದ ಸದಸ್ಯರು ಕೆಆರ್‌ಎಸ್ ಜಲಾಶಯದ ನಾರ್ತ್‌ಬ್ಯಾಂಕ್ ಬಳಿ ನಡೆಸುತ್ತಿರುವ ಅಹೋರಾತ್ರಿ ಧರಣಿ 4ನೇ ದಿನಕ್ಕೆ ತಲುಪಿದೆ. ಹೋರಾಟದ ನೇತೃತ್ವ ವಹಿಸಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ಗುರುವಾರ ರಾತ್ರಿ ಬೃಂದಾವನ ಪ್ರವೇಶ ದ್ವಾರದಲ್ಲೇ ಮಲಗಿದ್ದರು. ಅವರೊಂದಿಗೆ ರೈತಸಂಘದ ನಾಯಕರೂ ನಿದ್ದೆ ಮಾಡಿದರು.



ಕೆಆರ್‌ಎಸ್ ಅಣೆಕಟ್ಟೆ ಬಳಿ ರೈತಸಂಘ ಅಹೋರಾತ್ರಿ ಧರಣಿ ನಡೆಸುತ್ತಿದ್ದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಪ್ರತಿಭಟನಾ ಸ್ಥಳದಲ್ಲೇ ಮಲಗಿ ನಿದ್ರಿಸಿದರು

ಶೀರ್ಷಾಸನ ಹಾಕಿ ಪ್ರತಿಭಟನೆ

ಚಾಮರಾಜನಗರ: ನಗರದಲ್ಲಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಶುಕ್ರವಾರವೂ ಪ್ರತಿಭಟನೆ ನಡೆಸಿದರು. ಜಿಲ್ಲಾಡಳಿತ ಭವನದ ಗೇಟಿನ ಮುಂಭಾಗ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ ಅವರು ಶೀರ್ಷಾಸನ ಹಾಕಿ ಪ್ರತಿಭಟಿಸಿದರು. ಜೊತೆಯಲ್ಲಿದ್ದವರು, ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿದರು.

ರೈತರನ್ನು ಇಕ್ಕಟ್ಟಿಗೆ ಸಿಲುಕಿಸಿದ ಸರ್ಕಾರ: ಬೊಮ್ಮಾಯಿ

ಬೆಂಗಳೂರು:‘ತಮಿಳುನಾಡು ರಾಜ್ಯ ಕಾವೇರಿ ನೀರನ್ನು ಎಷ್ಟು ಬಳಸಿಕೊಂಡಿದೆ ಎಂದು ವಾದ ಮಾಡದೇ ರಾಜ್ಯ ಸರ್ಕಾರ ನಮ್ಮ ರೈತರನ್ನು ಇಕ್ಕಟ್ಟಿಗೆ ಸಿಲುಕಿಸಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ನಗರದ ಅಪೊಲೊ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

‘ಸೆಪ್ಟೆಂಬರ್ 6 ರಂದು ಕಾವೇರಿ ನದಿ ನೀರಿನ ಹಂಚಿಕೆ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ಕಾವೇರಿ ವಿಚಾರದಲ್ಲಿ ಸಿಡಬ್ಲ್ಯುಎಂಎ ಆದೇಶದಂತೆ ನೀರು ಬಿಡುತ್ತಿದ್ದಾರೆ. ನಮ್ಮವರು ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗದಿರುವ ಬಗ್ಗೆ ಸಮಗ್ರವಾಗಿ ಏಕೆ ವಾದ ಮಾಡುತ್ತಿಲ್ಲವೊ ಗೊತ್ತಿಲ್ಲ. ಕಾವೇರಿ ಜಲಾನಯನ ಪ್ರದೇಶದಲ್ಲಿ ಎಷ್ಟು ಮಳೆ ಬಿದ್ದಿದೆ ಎನ್ನುವುದನ್ನು ಮನವರಿಕೆ ಮಾಡಿಕೊಂಡು ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಹೇಳಿದರು.

9 ವಿ.ವಿ: ಆನ್‌ಲೈನ್ ಕೋರ್ಸ್‌ಗೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಒಂಬತ್ತು ವಿಶ್ವವಿದ್ಯಾಲಯಗಳಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅನುಮತಿ ನೀಡಿದೆ.

ಈ ಎಲ್ಲ ವಿಶ್ವವಿದ್ಯಾಲಯಗಳು ಈ ಶೈಕ್ಷಣಿಕ ವರ್ಷದಿಂದಲೇ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಲಿವೆ. ವಿದ್ಯಾರ್ಥಿಗಳ ಪ್ರವೇಶಾತಿಗೆ ಕೊನೆಯ ದಿನಾಂಕ ಸೆಪ್ಟೆಂಬರ್ 30. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ (ವಿಟಿಯು) ಇದೇ ಮೊದಲ ಬಾರಿಗೆ ಆನ್‌ಲೈನ್‌ನಲ್ಲಿ ಪದವಿ ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ಕೊಡಲಾಗಿದೆ.

ಯಾವ ವಿವಿಯಲ್ಲಿ ಎಷ್ಟು ಕೋರ್ಸ್: ಕುವೆಂಪು ವಿಶ್ವವಿದ್ಯಾಲಯದಲ್ಲಿ 11, ಜೈನ್ ವಿಶ್ವವಿದ್ಯಾಲಯ 9, ಜೆಎಸ್‌ಎಸ್ ಅಕಾಡೆಮಿ ಆಫ್ ಎಜುಕೇಷನ್ ಆ್ಯಂಡ್ ರಿಸರ್ಚ್ 4, ಮಾಹೆ (ಮಣಿಪಾಲ್ ಎಜುಕೇಷನ್ ಆಫ್ ಹೈಯರ್ ಎಜುಕೇಷನ್) 4, ಬೆಂಗಳೂರು ವಿಶ್ವವಿದ್ಯಾಲಯ 10, ಮೈಸೂರು ವಿಶ್ವವಿದ್ಯಾಲಯ 12, ಯೆನೆಪೋಯ ವಿಶ್ವವಿದ್ಯಾಲಯ 4, ವಿಟಿಯು 12, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ 10.

‘ಸಂತೋಷ್ ರಾಷ್ಟ್ರೀಯ ನಾಯಕರಂತೆ ಮಾತಾಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಲ್. ಸಂತೋಷ್ ರಾಷ್ಟ್ರೀಯ ನಾಯಕರು ಎಂದು ಭಾವಿಸಿದ್ದೇವೆ. ಅವರು ಕೆ.ಎಸ್. ಈಶ್ವರಪ್ಪ, ಸಿ.ಟಿ. ರವಿ ಅವರಂತೆ ಮಾತಾಡಿದರೆ ನಾವು ಏನು ಮಾಡುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಳಿದರು.

‘ಕಾಂಗ್ರೆಸ್‌ನ 40–45 ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆ’ ಎಂಬ ಸಂತೋಷ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಅವರು ನಮ್ಮ 136 ಶಾಸಕರ ಜತೆಗೂ ಸಂಪರ್ಕ ಇರಿಸಿಕೊಳ್ಳಲಿ. ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಸಂತೋಷ್ ದೇಶ ಆಳುತ್ತಿರುವ ಪಕ್ಷದ ನಾಯಕರು. ಅವರ ಮಾತಿಗೆ ತೂಕವಿರುತ್ತದೆ. ಈ ರೀತಿ ಘನತೆಗೆ ಧಕ್ಕೆಯಾಗುವಂತೆ ಮಾತನಾಡಬಾರದು’ ಎಂದರು.

‘ಕಾಂಗ್ರೆಸ್ ಶಾಸಕರು ಅವರ ಸಂಪರ್ಕದಲ್ಲಿರುವ ಮಾಹಿತಿ ನನಗಿಲ್ಲ. ಹಿಂದೆ ಒಮ್ಮೆ ನಮ್ಮ ಸರ್ಕಾರದ ವಿರುದ್ಧ ಷಡ್ಯಂತ್ರ ರೂಪಿಸಲು ಸಭೆ ನಡೆದಿತ್ತು. ಈಗ ತಣ್ಣಗಾಗಿದೆ. ಹೆಚ್ಚಿನ ಮಾಹಿತಿ ಬೇಕಿದ್ದರೆ ಶಾಸಕರನ್ನೇ ಕೇಳಿ’ ಎಂದು ಹೇಳಿದರು.

‘ಒಂದು ದೇಶ–ಒಂದು ಚುನಾವಣೆ’ ಕುರಿತು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಈ ವಿಷಯದ ಬಗ್ಗೆ ದೀರ್ಘ ಕಾಲದಿಂದ ಚರ್ಚೆ ನಡೆಯುತ್ತಿದೆ. ಹಲವು ರಾಜ್ಯಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಚುನಾವಣೆ ನಡೆಯುತ್ತಿದೆ. ಈ ಕುರಿತು ನಮ್ಮ ರಾಷ್ಟ್ರೀಯ ನಾಯಕರು ಪ್ರತಿಕ್ರಿಯಿಸುತ್ತಾರೆ’ ಎಂದರು.

ಎಚ್ಚರಿಕೆ ಗಂಟೆ: ಪ್ರಜ್ವಲ್ ರೇವಣ್ಣ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವ ಬಗ್ಗೆ ಕೇಳಿದಾಗ, ‘ಎಲ್ಲ ಶಾಸಕರು, ಸಂಸದರಿಗೆ ಇದು ಎಚ್ಚರಿಕೆ ಗಂಟೆ. ಜನಪ್ರತಿನಿಧಿಗಳು ಜಾಗರೂಕರಾಗಿ ಇರಬೇಕು. ತೀರ್ಪು ಏನಿದೆ ತಿಳಿದ ಬಳಿಕ ಪ್ರತಿಕ್ರಿಯಿಸುತ್ತೇನೆ’ ಎಂದು ಉತ್ತರಿಸಿದರು.

ಅರ್ಚಕರ ಭತ್ಯೆ: ₹77.85 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ದೇವಾಲಯಗಳ ಅರ್ಚಕರಿಗೆ ನೀಡುವ 2023–24 ನೇ ಸಾಲಿನ ತಸ್ತೀಕ್ (ಗೌರವ) ಭತ್ಯೆಯನ್ನು ಧಾರ್ಮಿಕ ದತ್ತಿ ಇಲಾಖೆ ಬಿಡುಗಡೆ ಮಾಡಿದೆ.

ಬಿಡುಗಡೆ ಮಾಡಲಾಗಿರುವ ₹ 77.85 ಕೋಟಿ ಮೊದಲ ಕಂತಿನ ಹಣವನ್ನು ತಾಲ್ಲೂಕುವಾರು ಹಂಚಿಕೆ ಮಾಡಲಾಗಿದ್ದು, ತಹಶೀಲ್ದಾರ್‌ಗಳು ಯಾವುದೇ ಷರತ್ತುಗಳನ್ನು ಹಾಕದೆ ಆಯಾ ಧಾರ್ಮಿಕ ಸಂಸ್ಥೆಗಳ ಮೂಲಕ ಅರ್ಚಕರ ಖಾತೆಗಳಿಗೆ ನೇರವಾಗಿ ಜಮೆ ಮಾಡಬೇಕು ಎಂದು ಸೂಚಿಸಲಾಗಿದೆ.

ಕೋರ್ಟ್ ವಿಚಾರಣೆ 6ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಪ್ರತಿನಿತ್ಯ 24 ಸಾವಿರ ಕ್ಯೂಸೆಕ್ ಕಾವೇರಿ ನೀರು ಬಿಡಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸೆಪ್ಟೆಂಬರ್ 6ಕ್ಕೆ ಸುಪ್ರೀಂ ಕೋರ್ಟ್ ಮುಂದೂಡಿದೆ.

ಕಳೆದ ಶುಕ್ರವಾರ ಪ್ರಕರಣದ ವಿಚಾರಣೆ ನಡೆಸಿದ್ದ ಬಿ.ಆರ್.ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ, ಕರ್ನಾಟಕ ಈ ವರ್ಷ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವ ಪ್ರಮಾಣದ ಬಗ್ಗೆ ವರದಿ ಸಲ್ಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸೂಚಿಸಿತ್ತು. ಬಳಿಕ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿತ್ತು.

ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯ ಸಾಂವಿಧಾನಿಕ ಪೀಠ ನಡೆಸುತ್ತಿದ್ದು, ಈ ಪೀಠದಲ್ಲಿ ಗವಾಯಿ ಇದ್ದಾರೆ. ಹಾಗಾಗಿ, ಕಾವೇರಿ ಪ್ರಕರಣದ ವಿಚಾರಣೆ ಶುಕ್ರವಾರದ ಪಟ್ಟಿಯಲ್ಲಿ ಇರಲಿಲ್ಲ.

ಮಧ್ಯಾಹ್ನದ ಬಳಿಕ ಅರ್ಜಿ ವಿಚಾರಣೆ ಕುರಿತು ಪ್ರಸ್ತಾಪಿಸಿದ ತಮಿಳುನಾಡು ಪರ ವಕೀಲ ಮುಕುಲ್ ರೊಹಟಗಿ, ‘ಕಾವೇರಿ ಪ್ರಾಧಿಕಾರದಿಂದಲೂ ರಾಜ್ಯಕ್ಕೆ ಅನ್ಯಾಯವಾಗಿದೆ. ಪ್ರಕರಣದ ವಿಚಾರಣೆಯನ್ನು ಸೋಮವಾರ ನಡೆಸಬೇಕು’ ಎಂದು ಮನವಿ ಮಾಡಿದರು.

ಕರ್ನಾಟಕದ ಪರ ವಕೀಲ ಶ್ಯಾಮ್ ದಿವಾನ್, ‘ಆಗಸ್ಟ್ 29ರಿಂದ ಸೆಪ್ಟೆಂಬರ್ 11ರ ವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕರ್ನಾಟಕಕ್ಕೆ ನಿರ್ದೇಶನ ನೀಡಿದೆ. ಆ ಪ್ರಕಾರ ರಾಜ್ಯವು ನೀರು ಹರಿಸುತ್ತಿದೆ. ಹಾಗಾಗಿ, ವಿಚಾರಣೆಯನ್ನು ಸೆಪ್ಟೆಂಬರ್ 11ರಂದು ನಡೆಸಬೇಕು’ ಎಂದರು.

ಆಗ ನ್ಯಾಯಪೀಠ, ‘ಸೋಮವಾರ ಅಥವಾ ಸೆಪ್ಟೆಂಬರ್ 11ರಂದು ಪ್ರಕರಣದ ವಿಚಾರಣೆ ನಡೆಸಲು ಆಗದು. ಸೆಪ್ಟೆಂಬರ್ 6ರಂದು ಪ್ರಕರಣದ ವಿಚಾರಣೆಯನ್ನು ವಿಸ್ತೃತವಾಗಿ ನಡೆಸಲಾಗುತ್ತದೆ’ ಎಂದು ಹೇಳಿತು.

ವಿದ್ಯುತ್ ಸ್ಪರ್ಶ: ತಂದೆ, ಮಗ ಸಾವು

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಉಡಿಕೇರಿ ಗ್ರಾಮದಲ್ಲಿ ಶುಕ್ರವಾರ ಮನೆ ಮುಂದಿನ ಅಂಗಳದಲ್ಲಿನ ಹುಲ್ಲಿನ ಕಳೆ ತೆಗೆಯುವ ವೇಳೆ ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತಗುಲಿ ಕೃಷಿಕ ಪ್ರಭು ಹುಂಬಿ (68) ಮತ್ತು ಅವರ ಪುತ್ರ ಮಂಜುನಾಥ (29) ಮೃತಪಟ್ಟಿದ್ದಾರೆ.



ಪ್ರಭು ಹುಂಬಿ



ಮಂಜುನಾಥ

‘ಮನೆಯ ಮುಂದಿನ ವಿದ್ಯುತ್ ಕಂಬದ ಆಸರೆಗೆ ತಂತಿ ಕಟ್ಟಲಾಗಿತ್ತು. ಈ ತಂತಿ ಮೇನ್‌ಲೈನ್‌ಗೆ ತಾಗಿದ್ದರಿಂದ ಅದರಲ್ಲೂ ವಿದ್ಯುತ್ ಹರಿಯುತ್ತಿತ್ತು. ತಂತಿ ಸುತ್ತ ಬೆಳೆದಿದ್ದ ಹುಲ್ಲು ತೆಗೆಯುವಾಗ ಪ್ರಭು ಹುಂಬಿ ಅವರಿಗೆ ವಿದ್ಯುತ್ ತಗುಲಿತು. ಅವರನ್ನು ರಕ್ಷಿಸಲು ಮುಂದಾದ ಮಂಜುನಾಥ ಅವರಿಗೂ ವಿದ್ಯುತ್ ಸ್ಪರ್ಶವಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜುನಾಥ ಅವರಿಗೆ ಒಬ್ಬ ಪುತ್ರಿ ಇದ್ದು, ಪತ್ನಿ ಗರ್ಭಿಣಿ. ಪ್ರಭು ಅವರಿಗೆ ಪತ್ನಿ ಮತ್ತು ಇನ್ನೊಬ್ಬ ಪುತ್ರ ಇದ್ದಾರೆ.

ಹೆಸ್ಕಾಂ ವಿರುದ್ಧ ಆಕ್ರೋಶ: ‘ಮನೆ ಮುಂದಿನ ವಿದ್ಯುತ್ ಕಂಬ- ತಂತಿ ತೆರವುಗೊಳಿಸುವಂತೆ ಹೆಸ್ಕಾಂ ಅಧಿಕಾರಿಗಳಿಗೆ ಸಾಕಷ್ಟು ಸಲ ತಿಳಿಸಿದ್ದರೂ ಗಮನ ಹರಿಸಿರಲಿಲ್ಲ. ಇದರಿಂದ ಜೀವ ಹಾನಿ ಸಂಭವಿಸಿದೆ’ ಎಂದು ಆರೋಪಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮಗು ಕೊಂದ ಮಲತಾಯಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ಜಿಲ್ಲೆಯ ವಡಗೇರಾ ತಾಲ್ಲೂಕಿನ ಬಬಲಾದ ಗ್ರಾಮದಲ್ಲಿ ಆಸ್ತಿಗಾಗಿ ಮಲತಾಯಿಯು ಹಾಲಿಗೆ ವಿಷ ಬೆರೆಸಿ ಕುಡಿಸುವ ಮೂಲಕ ಐದು ತಿಂಗಳ ಮಗುವನ್ನೇ ಕೊಲೆ ಮಾಡಿದ್ದಾಳೆ.

ಗ್ರಾಮದ ರೈತ ಸಿದ್ದಪ್ಪ ಚಿಟ್ಟಿಗೇರಿ ಅವರ ಪುತ್ರಿ ಸಂಗೀತಾ ಸಾವನ್ನಪ್ಪಿದ ಮಗು. ಸಿದ್ದಪ್ಪ ಅವರ ಎರಡನೇ ಪತ್ನಿ ದೇವಮ್ಮ ಚಿಟ್ಟಿಗೇರಿ ಮಗುವನ್ನು ಸಾಯಿಸಿದ ಮಹಿಳೆ.

‘ಆಗಸ್ಟ್ 30ರಂದು ಸಂಗೀತಾಳ ತಾಯಿ ಶ್ರೀದೇವಿ ಅವರು ಹಾಲು ಕುಡಿಸುತ್ತಿದ್ದ ವೇಳೆ ಬಂದ ದೇವಮ್ಮ, ಒತ್ತಾಯ ಪೂರ್ವಕವಾಗಿ ನಾನು ಹಾಲುಣಿಸುತ್ತೇನೆ ಎಂದು ಕೋಣೆಗೆ ಕರೆದುಕೊಂಡು ಹೋಗಿದ್ದಾರೆ. ಬಾಗಿಲು ಮುಚ್ಚಿ ಹಾಲಿನ ಬಾಟಲ್‌ನಲ್ಲಿ ವಿಷ ಬೆರೆಸಿ ಕೂಸಿಗೆ ಕುಡಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ. ವಿಷಬೆರೆತ ಹಾಲು ಕುಡಿದ ಮೂರು ಗಂಟೆ ನಂತರ ಬಾಯಲ್ಲಿ ನೊರೆ ಬಂದಿದೆ. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಂಗೀತಾ ಸಾವನ್ನಪ್ಪಿದ್ದಾಳೆ.

‘2,000 ಎಕರೆಯಲ್ಲಿ ಕೆಎಚ್‌ಐಆರ್‌ಸಿ’



ಬೆಂಗಳೂರು: ನಗರದ ಹೊರ ವಲಯದಲ್ಲಿ 2,000 ಎಕರೆ ವಿಸ್ತೀರ್ಣದಲ್ಲಿ ಜ್ಞಾನ– ಆರೋಗ್ಯ– ಆವಿಷ್ಕಾರ ಮತ್ತು ಸಂಶೋಧನಾ ನಗರ’ (ಕೆಎಚ್‌ಐಆರ್‌ಸಿ) ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೊದಲ ಹಂತದಲ್ಲಿ 1,000 ಎಕರೆ ವಿಸ್ತೀರ್ಣದಲ್ಲಿ ಯೋಜನೆ ಅನುಷ್ಠಾನಕ್ಕೆ ಬರಲಿದೆ. ಅಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳು, ಆಸ್ಪತ್ರೆಗಳು, ಆವಿಷ್ಕಾರ ಮತ್ತು ಸಂಶೋಧನಾ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ. ಎರಡನೇ ಹಂತದಲ್ಲಿ 1,000 ಎಕರೆಯಲ್ಲಿ ಯೋಜನೆಯನ್ನು ವಿಸ್ತರಿಸಲಾಗುವುದು’ ಎಂದರು.

ಬೆಂಳೂರು ಉಪನಗರ ರೈಲು ಯೋಜನೆಯನ್ನೂ ವಿಸ್ತರಿಸುವ ಪ್ರಸ್ತಾವವನ್ನು ಕೇಂದ್ರ ರೈಲ್ವೆ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಮೊದಲ ಹಂತದಲ್ಲಿ 149 ಕಿ.ಮೀ. ಉದ್ದದಲ್ಲಿ ಯೋಜನೆ ಆರಂಭವಾಗಲಿದೆ. ಎರಡನೇ ಹಂತದಲ್ಲಿ 452 ಕಿ.ಮೀ. ಮಾರ್ಗದಲ್ಲಿ ವಿಸ್ತರಿಸುವಂತೆ ಕೋರಲಾಗಿದೆ. ಮೈಸೂರು, ರಾಮನಗರ, ಮಾಗಡಿ, ತುಮಕೂರು, ಚಿಕ್ಕಬಳ್ಳಾಪುರ, ಗೌರಿಬಿದನೂರುವರೆಗೆ ಉಪನಗರ ರೈಲು ಸಂಚಾರ ಆರಂಭಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ. ಎಂಎಸ್‌ಐಎಲ್ ಚಿಟ್ ಫಂಡ್ ವಿಸ್ತರಣೆಗೆ ನಿರ್ಧರಿಸಿದ್ದು, ಕೇರಳ ಸರ್ಕಾರದ ಚಿಟ್ ಫಂಡ್ ಯೋಜನೆಯ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರನ್ನು ಎಂಎಸ್‌ಐಎಲ್‌ಗೆ ನೇಮಿಸಿಕೊಳ್ಳಲಾಗಿದೆ ಎಂದರು.

ಸರ್ಕಾರಿ ವಿಮಾನಯಾನ ಕಂಪನಿ

ಒಂದನೇ ಪುಟದಿಂದ...

ಶಿವಮೊಗ್ಗ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಪ್ರಾಧಿಕಾರವೇ ಮಾಡಲಿದೆ. ಮುಂದೆ ರಾಜ್ಯದಲ್ಲಿ ಆರಂಭವಾಗುವ ಎಲ್ಲ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಪ್ರಾಧಿಕಾರಕ್ಕೆ ವಹಿಸಲಾಗುವುದು ಎಂದು ಹೇಳಿದರು.

₹ 60 ಸಾವಿರ ಕೋಟಿ ಹೂಡಿಕೆ: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ₹ 60,000 ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಾಗಿವೆ. ಅವುಗಳ ಅನುಷ್ಠಾನದಿಂದ 30,000ಕ್ಕೂ ಹೆಚ್ಚು ಉದ್ಯೋಗಗಳ ಸೃಷ್ಟಿಯಾಗಲಿದೆ ಎಂದು ತಿಳಿಸಿದರು.

20ಕ್ಕೂ ಹೆಚ್ಚು ಹೂಡಿಕೆದಾರರ ಜತೆ ಮಾತುಕತೆ ನಡೆಯುತ್ತಿದೆ. ಇದರಿಂದ ₹ 1 ಲಕ್ಷ ಕೋಟಿ ಹೂಡಿಕೆ ಹರಿದುಬರುವ ಸಾಧ್ಯತೆ ಇದೆ. ಜಾಗತಿಕ ಹೂಡಿಕೆದಾರರ ಸಮ್ಮೇಳನಕ್ಕೂ ತಯಾರಿ ನಡೆದಿದೆ. ಹೂಡಿಕೆದಾರರ ಬಳಿ ಸರ್ಕಾರದ ನಿಯೋಗ ತೆರಳಿ ಆಹ್ವಾನ ನೀಡುವ ಯೋಚನೆಯೂ ಇದೆ ಎಂದರು.

ರಾಜ್ಯದಲ್ಲಿರುವ 207 ಕೈಗಾರಿಕಾ ವಸಾಹತುಗಳಿಗೆ ₹ 300 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಒದಗಿಸಲಾಗುವುದು. ಅವುಗಳ ನಿರ್ವಹಣೆಗೆ ಸ್ಥಳೀಯ ಕೈಗಾರಿಕಾ ಸಂಘಗಳ ಸಹಭಾಗಿತ್ವದಲ್ಲಿ ಪ್ರತ್ಯೇಕ ಪ್ರಾಧಿಕಾರಗಳನ್ನು ರಚಿಸಲಾಗುವುದು ಎಂದು ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ತದಡಿಯಲ್ಲಿ 1,819 ಎಕರೆ ವಿಸ್ತೀರ್ಣದಲ್ಲಿ ಪರಿಸರ ಪ್ರವಾಸೋದ್ಯಮ ಪಾರ್ಕ್, ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 407 ಎಕರೆ ವಿಸ್ತೀರ್ಣದಲ್ಲಿ ‘ಬ್ಯುಸಿನೆಸ್ ಪಾರ್ಕ್’ ಸೇರಿದಂತೆ ಹಲವು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಚೆಂಗಲಮ್ಮ ಪರಮೇಶ್ವರಿಗೆ ಪ್ರಾರ್ಥಿಸಿದ ಸೋಮನಾಥ

ತಿರುಪತಿ (ಪಿಟಿಐ): ಸೂರ್ಯನ ಬಾಹ್ಯ ವಾತಾವರಣದ ಅಧ್ಯಯನಕ್ಕಾಗಿ ‘ಆದಿತ್ಯ–ಎಲ್ 1’ ಬಾಹ್ಯಾಕಾಶ ನೌಕೆಯ ಉಡಾವಣೆಗೆ ಮುನ್ನ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ಶುಕ್ರವಾರ ತಿರುಪತಿ ಬಳಿಯ ಸೂಲೂರು ಪೇಟೆಯ ಚೆಂಗಲಮ್ಮ ಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು.

ಅವರು ಬೆಳಿಗ್ಗೆ 7.30 ಕ್ಕೆ ದೇವಾಲಯಕ್ಕೆ ಭೇಟಿ ನೀಡಿದರು. ರಾಕೆಟ್ ಉಡಾವಣೆಗೂ ಮುನ್ನ ಇಸ್ರೊ ಅಧಿಕಾರಿಗಳು ಈ ದೇವಾಲಯಕ್ಕೆ ಭೇಟಿ ನೀಡುವುದು ಸಂಪ್ರದಾಯ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್ ರೆಡ್ಡಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸೋಮನಾಥ್, ‘ಆದಿತ್ಯ–ಎಲ್ 1 ಶನಿವಾರ ಬೆಳಿಗ್ಗೆ 11.50ಕ್ಕೆ ಶ್ರೀಹರಿಕೋಟಾದಿಂದ ಉಡ್ಡಯನವಾಗಲಿದೆ’ ಎಂದು ಅವರು ಹೇಳಿದರು.

ನಭಕ್ಕೆ ಇಂದು ಜಿಗಿಯುವ ‘ಆದಿತ್ಯ’

ಒಂದನೇ ಪುಟದಿಂದ...

ಚಂದ್ರಯಾನ–3 ಯಶಸ್ವಿಯಾಗಿ ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಇಳಿಸಿ, ರೋವರ್ ಕಾರ್ಯ ನಿರ್ವಹಿಸುತ್ತಿರುವ ಬೆನ್ನಲ್ಲೇ ಇಡೀ ದೇಶ ಆದಿತ್ಯ ಉಡಾವಣೆ ಬಗ್ಗೆ ಕಾತರದಿಂದ ಕುಳಿತಿದೆ.

ಶನಿವಾರವೇ ಆದಿತ್ಯ ಎಲ್–1 ಅನ್ನು ಕೆಳಸ್ತರದ ಭೂಕಕ್ಷೆಯೊಂದಕ್ಕೆ ಸೇರಿಸಲಾಗುವುದು. ಕ್ರಮೇಣ ಭೂಕಕ್ಷೆಯ ಎತ್ತರವನ್ನು ಹೆಚ್ಚಿಸಲಾಗುತ್ತದೆ. ಬಳಿಕ ನಿಗದಿತ ದಿನವೊಂದರಲ್ಲಿ ಆದಿತ್ಯ ಲಗ್ರಾಂಜಿಯನ್ ಬಿಂದುವಿನತ್ತ ಯಾನ ಬೆಳೆಸಲಿದೆ. 125 ದಿನಗಳಲ್ಲಿ ಎಲ್–1 ಬಿಂದುವಿಗೆ ಸೇರಿಸಲಾಗುತ್ತದೆ. ಇದು ಸ್ಥಿರತೆ ಹೊಂದಿದ ವಿಶೇಷ ಕ್ಷಕೆಯಾಗಿದೆ. ಈ ವೀಕ್ಷಣಾಲಯಕ್ಕೆ ಗ್ರಹಣವೂ ಬಾಧಿಸುವುದಿಲ್ಲ. ನಿರಂತರವಾಗಿ ಮತ್ತು ದೀರ್ಘವಾಗಿ ಅಡ್ಡಿ ಇಲ್ಲದೇ ಸೂರ್ಯನನ್ನು ಗಮನಿಸಲು ಸಹಾಯಕವಾಗುತ್ತದೆ.

ಒಟ್ಟು ಏಳು ಉಪಕರಣಗಳಿದ್ದು, ನಾಲ್ಕು ಉಪಕರಣಗಳು ಸೂರ್ಯನನ್ನು ವೀಕ್ಷಣೆ ಮಾಡಿದರೆ ಉಳಿದ ಮೂರು ಉಪಕರಣಗಳು ಕಣಗಳು, ಪ್ಲಾಸ್ಮಾ, ಕಾಂತಕ್ಷೇತ್ರಗಳ ಅಧ್ಯಯನ ಮಾಡುತ್ತವೆ. ಇದು ಕೇವಲ ಇಸ್ರೊ ಯೋಜನೆಯಲ್ಲ, ಖಭೌತ ವಿಜ್ಞಾನಕ್ಕೆ ಸಂಬಂಧಿಸಿದ ದೇಶದ ಏಳು ಪ್ರಮುಖ ಸಂಸ್ಥೆಗಳು ಕೈಜೋಡಿಸಿರುವುದರಿಂದ ಇದು ರಾಷ್ಟ್ರೀಯ ಅಭಿಯಾನವಾಗಿದೆ ಎಂದು ಇಸ್ರೊ ವಿಜ್ಞಾನಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಗೋಲ ಬಿಂಬ ಸೆರೆ ಹಿಡಿಯುವ ಕ್ಯಾಮೆರಾ: ಸೂರ್ಯನ ಗೋಲದ ಬಿಂಬವನ್ನು ಅತಿ ಹೆಚ್ಚು ಸ್ಫುಟವಾಗಿ ಸೆರೆ ಹಿಡಿಯುವ ಮತ್ತು ಕೃತಕವಾಗಿ ಗ್ರಹಣವನ್ನು ಸೃಷ್ಟಿಸಿ ಅಧ್ಯಯನ ಮಾಡುವ ಉಪಕರಣಗಳು ವಿಶಿಷ್ಟವಾದವು ಎಂದು ಅವರು ಹೇಳಿದರು.

‘ಸೂರ್ಯನನ್ನು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳುವುದು ನಮ್ಮ ಮುಖ್ಯ ಉದ್ದೇಶ. ಅಲ್ಲದೇ, ಸೂರ್ಯನ ಹೊರ ಆವರಣ ಮತ್ತು ಒಳಗೆ ಚಿಮ್ಮುವ ಪ್ರಚಂಡ ಕಣ ಪ್ರವಾಹ, ಸೌರ ಜ್ವಾಲೆ, ವಿಕಿರಣಗಳು ಭೂಮಿಯತ್ತ ನುಗ್ಗುವಾಗ ಮುನ್ಸೂಚನೆ ನೀಡಿ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದಾಗಿದೆ. ಇಲ್ಲವಾದಲ್ಲಿ, ಭೂಮಿಯನ್ನು ಸುತ್ತುತ್ತಿರುವ ಉಪಗ್ರಹಗಳು, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹಾನಿ ಉಂಟು ಮಾಡಬಲ್ಲವು. 1989 ರಲ್ಲಿ ಕೆನಡಾದಲ್ಲಿ ಸೌರ ಕಣ ಪ್ರವಾಹದಿಂದ ದೊಡ್ಡ ಅವಘಡ ಸಂಭವಿಸಿತ್ತು’ ಎಂದು ಅವರು ತಿಳಿಸಿದರು.

ನಾಸಾ, ಯೂರೋಪಿಯನ್ ಸ್ಪೇಸ್ ಏಜೆನ್ಸಿ ಮತ್ತು ಜಾಕ್ಸಾ ಮಾತ್ರ ದೊಡ್ಡ ಪ್ರಮಾಣದ ನೌಕೆಗಳನ್ನು ಸೂರ್ಯನ ಅಧ್ಯಯನಕ್ಕೆ ಕಳುಹಿಸಿದ್ದು, ಇಸ್ರೊ ನಾಲ್ಕನೆಯದು ಎಂದು ಅವರು ಹೇಳಿದರು.

'ಸಾಧ್ಯವಾದಷ್ಟು ಒಟ್ಟಿಗೆ' ಕಣಕ್ಕಿಳಿಯಲು ನಿರ್ಣಯ • 'ಜುಡೇಗಾ ಭಾರತ್, ಜೀತೇಗಾ ಇಂಡಿಯಾ'ದಡಿ ಪ್ರಚಾರ

ಒಗ್ಗಟ್ಟಿನಲ್ಲಿ ಬಲ, 'ಇಂಡಿಯಾ'ದ ಛಲ

ಮುಂಬೈ (ಪಿಟಿಐ): 2024ರ ಲೋಕಸಭೆ ಚುನಾವಣೆಯಲ್ಲಿ ಸಾಧ್ಯವಾದಷ್ಟು ಒಗ್ಗಟ್ಟಿನಿಂದಲೇ ಸ್ಪರ್ಧಿಸುವ ನಿರ್ಣಯವನ್ನು ವಿರೋಧಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಶುಕ್ರವಾರ ಕೈಗೊಂಡಿದೆ.

'ಕೊಟ್ಟು ತೆಗೆದುಕೊಳ್ಳುವ' ಮುಕ್ತ ಚಿಂತನೆಯೊಂದಿಗೆ ಆದಷ್ಟು ಶೀಘ್ರವಾಗಿ ರಾಜ್ಯವಾರು ಸೀಟು ಹಂಚಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದೂ ಮೈತ್ರಿಕೂಟ ಪ್ರತಿಪಾದಿಸಿದೆ.

ಲೋಕಸಭೆಗೆ ಅವಧಿಪೂರ್ವ ಚುನಾವಣೆ ನಡೆಯಬಹುದು ಎಂಬ ದಟ್ಟ ವದಂತಿ ಹಾಗೂ 'ಒಂದು ರಾಷ್ಟ್ರ, ಒಂದು ಚುನಾವಣೆ' ಸಾಧ್ಯತೆ ಪರಿಶೀಲನೆಗೆ ಕೇಂದ್ರವು ಸಮಿತಿಯನ್ನು ರಚಿಸಿರುವ ಹೊತ್ತಿನಲ್ಲಿಯೇ 'ಇಂಡಿಯಾ' ಈ ಕುರಿತ ಮಹತ್ವದ ನಿರ್ಧಾರವನ್ನು ತಳೆದಿದೆ.

ಸೆಪ್ಟೆಂಬರ್ 30ರ ಒಳಗೆ ರಾಜ್ಯವಾರು ಸೀಟು ಹಂಚಿಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸುವುದು ಸೇರಿದಂತೆ ಪ್ರಮುಖ ತೀರ್ಮಾನ ಕೈಗೊಳ್ಳುವ ಅಧಿಕಾರವುಳ್ಳ 14 ಸದಸ್ಯರ ಸಮನ್ವಯ ಸಮಿತಿಯನ್ನು ಮೈತ್ರಿಕೂಟವು ಇಲ್ಲಿ ನಡೆದ ಸಭೆಯಲ್ಲಿ ರಚಿಸಿತು. ಬಿಜೆಪಿ ನೇತೃತ್ವದ ಎನ್‌ಡಿಎ ವಿರುದ್ಧ 'ಸಾಧ್ಯವಾದಷ್ಟು ಒಗ್ಗಟ್ಟಿನಿಂದ' ಸ್ಪರ್ಧಿಸಲು ನಿರ್ಣಯಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂಡಿಯಾ ಮೈತ್ರಿಕೂಟದ ಅಂಗ ಪಕ್ಷಗಳು ಆದಷ್ಟು ಶೀಘ್ರದಲ್ಲಿಯೇ ದೇಶದ ವಿವಿಧೆಡೆ ಸಾರ್ವಜನಿಕ ಹಿತಾಸಕ್ತಿ ಮತ್ತು ಮಹತ್ವದ ಅಂಶಗಳಿಗೆ ಸಂಬಂಧಿಸಿ ರ‍್ಯಾಲಿಗಳನ್ನು ಸಂಘಟಿಸಲು ಹಾಗೂ ಆಯಾ ರಾಜ್ಯಗಳ ಸ್ಥಳೀಯ ಭಾಷೆಗಳಲ್ಲಿ ಪ್ರಾದೇಶಿಕ ಪಕ್ಷಗಳು 'ಜುಡೇಗಾ ಭಾರತ್, ಜೀತೇಗಾ ಇಂಡಿಯಾ' ಘೋಷವಾಕ್ಯದೊಂದಿಗೆ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿವೆ.

ಈ ಮಧ್ಯೆ, 'ಒಂದು ರಾಷ್ಟ್ರ, ಒಂದು ಚುನಾವಣೆ' ಸಾಧ್ಯತೆ ಪರಿಶೀಲಿಸಲು ಸಮಿತಿ ರಚಿಸುವ ನಿಲುವು ಉಲ್ಲೇಖಿಸಿ 'ಎಕ್ಸ್' ತಾಣದಲ್ಲಿ ಪೋಸ್ಟ್ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಆಡಳಿತಪಕ್ಷವು ಏನೇ ಕಸರತ್ತು ಮಾಡಿದರೂ, ಜನರನ್ನು ಇನ್ನು ಮುಂದೆ ವಂಚಿಸಲಾಗದು. ನಿರಂಕುಶ ಪ್ರಭುತ್ವದ ನಿರ್ಗಮನ ಈಗಾಗಲೇ ಆರಂಭವಾಗಿದೆ' ಎಂದು ಪ್ರತಿಪಾದಿಸಿದ್ದಾರೆ.



ಮುಂಬೈನಲ್ಲಿ ಶುಕ್ರವಾರ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಪಾಲ್ಗೊಂಡಿದ್ದ ಅಂಗಪಕ್ಷಗಳ ಮುಖಂಡರು ಫೋಟೊಗೆ ಒಟ್ಟಿಗೆ ಪೋಸ್ ನೀಡಿದರು. ಮೊದಲ ಸಾಲಿನಲ್ಲಿ ಸಿಪಿಎಂನ ಸೀತಾರಾಂ ಯೆಚೂರಿ, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಸಿಪಿಐನ ಡಿ.ರಾಜಾ, ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ, ಶಿವಸೇನಾ ನಾಯಕ ಉದ್ಧವ್ ಠಾಕ್ರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್, ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಅವರು ಇದ್ದಾರೆ –ಪಿಟಿಐ ಚಿತ್ರ

ಸರ್ಕಾರಕ್ಕೆ ನಡುಕ: ಇಲ್ಲಿ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಮಾತನಾಡಿದ ಖರ್ಗೆ, ಇಂಡಿಯಾ ಮೈತ್ರಿಕೂಟದ ಬಲ ಕೇಂದ್ರ ಸರ್ಕಾರಕ್ಕೆ ನಡುಕ ಉಂಟು ಮಾಡಿದೆ. ವಿರೋಧಪಕ್ಷಗಳ ವಿರುದ್ಧ ತನಿಖಾ ಸಂಸ್ಥೆಗಳ 'ದುರ್ಬಳಕೆಯು' ಹೆಚ್ಚಾಗಲಿರುವ ಕಾರಣ ವಿರೋಧಪಕ್ಷಗಳು ಕೂಡಾ 'ಹಗೆತನದ ರಾಜಕಾರಣ'ಕ್ಕೆ ಸಜ್ಜಾಗಬೇಕಾಗಿದೆ ಎಂದು ಹೇಳಿದರು.

ಕೇಂದ್ರದ ವಿರುದ್ಧ ನೇರ ವಾಗ್ದಾಳಿ ನಡೆಸಿದ ಖರ್ಗೆ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಳೆದ ಒಂಬತ್ತು ವರ್ಷಗಳಲ್ಲಿ ಹರಡಿರುವ 'ಕೋಮು ವಿಷ'ವು ಈಗ ಅಮಾಯಕ ರೈಲು ಪ್ರಯಾಣಿಕರು, ಶಾಲಾ ಮಕ್ಕಳ ವಿರುದ್ಧದ ದ್ವೇಷದ ಅಪರಾಧಗಳಾಗಿ ರೂಪತಳೆದಿವೆ ಎಂದರು. ರೈಲ್ವೆ ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ರೈಲು ಪ್ರಯಾಣಿಕರ ಮೇಲೆ ಗುಂಡು ಹಾರಿಸಿದ ಪ್ರಕರಣ ಹಾಗೂ ಮುಜಾಫರನಗರದ ಶಾಲೆಯಲ್ಲಿ ಮುಸ್ಲಿಂ ಬಾಲಕನ ಕೆನ್ನೆಗೆ ಹೊಡೆಯಲು ಸಹಪಾಠಿಗಳಿಗೆ ಸೂಚಿಸಿದ ಶಿಕ್ಷಕಿ ನಡೆ ಉಲ್ಲೇಖಿಸಿ ಈ ಮಾತು ಹೇಳಿದರು.

ಇದಕ್ಕೂ ಮುನ್ನ ಪ್ರಾಥಮಿಕ ಪ್ರಸ್ತಾವನೆಯಲ್ಲಿ ಖರ್ಗೆ ಅವರು, ಹಿಂದೆ ಪಟ್ನಾ ಮತ್ತು ಬೆಂಗಳೂರಿನಲ್ಲಿ ನಡೆದ ಮೈತ್ರಿಕೂಟದ ಸಭೆಗಳು ಯಶಸ್ವಿಯಾಗಿವೆ. ಪ್ರಧಾನಿ ತಮ್ಮ ನಂತರದ ಭಾಷಣಗಳಲ್ಲಿ 'ಇಂಡಿಯಾ'ವನ್ನು ಗುರಿಯಾಗಿಸಿ ಟೀಕಿಸಿರುವುದು, ನಮ್ಮ ಹೆಮ್ಮೆಯ ದೇಶದ ಹೆಸರನ್ನು ಉಗ್ರರ ಸಂಘಟನೆಗಳ ಹೆಸರಿನ ಜೊತೆಗೆ ಸಮೀಕರಿಸಿರುವುದು ಇದಕ್ಕೆ ಉದಾಹರಣೆಯಾಗಿದೆ ಎಂದರು.

ಮುಂದಿನ ತಿಂಗಳುಗಳಲ್ಲಿ ಇಂತಹ ಇನ್ನಷ್ಟು 'ದಾಳಿ'ಗಳನ್ನು ಎದುರಿಸಲು ನಾವು ಸಜ್ಜಾಗಿರಬೇಕು. ತನಿಖಾ ಸಂಸ್ಥೆಗಳಿಂದ ಹೆಚ್ಚಿನ ದಾಳಿ, ಮುಖಂಡರ ಬಂಧನ ಕೂಡಾ ಸರ್ಕಾರದ ದ್ವೇಷ ರಾಜಕಾರಣದ ಫಲವಾಗಿ ನಡೆಯಲಿದೆ. ನಾವು ಹೆಚ್ಚು ಬಲಗೊಂಡಷ್ಟೂ, ಸರ್ಕಾರ ನಮ್ಮ ನಾಯಕರ ವಿರುದ್ಧದ ದಾಳಿಗಳನ್ನು ಹೆಚ್ಚಿಸಲಿದೆ ಎಂದು ಖರ್ಗೆ ಎಚ್ಚರಿಸಿದರು.

ಮೈತ್ರಿಕೂಟದ ಸಭೆ ಆರಂಭಕ್ಕೂ ಮೊದಲು ಮುಖಂಡರು ಒಟ್ಟಿಗೆ ಫೋಟೊ ತೆಗೆಸಿಕೊಂಡರು. ಅಲ್ಲದೆ, ಚಂದ್ರಯಾನ–3 ಯಶಸ್ಸಿಗಾಗಿ 'ಇಸ್ರೊ'ಗೆ ಅಭಿನಂದಿಸುವ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಹಾಜರಾದ ಪ್ರಮುಖ ನಾಯಕರು

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್. ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಒಮರ್ ಅಬ್ದುಲ್ಲಾ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಸಿಪಿಐ (ಎಂ.ಎಲ್) ಮುಖಂಡ ದೀಪಂಕರ್ ಭಟ್ಟಾಚಾರ್ಯ, ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ ಯಾದವ್, ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, ಆರ್‌ಎಲ್‌ಡಿಯ ಜಯಂತ್ ಚೌಧರಿ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಇತರೆ ಪ್ರಮುಖ ನಾಯಕರು.

ಒಗ್ಗಟ್ಟಿದ್ದರೆ ಬಿಜೆಪಿಯನ್ನು ಮಣಿಸಬಹುದು: ರಾಹುಲ್

ಮುಂಬೈ : 'ಇಂಡಿಯಾ' ಮೈತ್ರಿಪಕ್ಷಗಳು ದೇಶದ ಶೇ 60ರಷ್ಟು ಜನಸಂಖ್ಯೆ ಪ್ರತಿನಿಧಿಸಲಿದ್ದು, ಒಗ್ಗಟ್ಟಿನ ಹೋರಾಟವಿದ್ದರೆ ಲೋಕಸಭೆ ಚುನಾವಣೆಯಲ್ಲಿ ಸುಲಭವಾಗಿ ಬಿಜೆಪಿ ಮಣಿಸಬಹುದು ಎಂದು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಪ್ರತಿಪಾದಿಸಿದರು.

> ಕಾಂಗ್ರೆಸ್ ಮುಕ್ತ ಭಾರತ ಮಾಡುವುದು ಬ್ರಿಟಿಷರಿಗೆ ಆಗಲಿಲ್ಲ, ಇನ್ನು ಮೋದಿ ಹೇಗೆ ಮಾಡುತ್ತಾರೆ? ಅದಾನಿ ಜೊತೆಗಿನ ಗೆಳೆತನದಿಂದ ಕಾಂಗ್ರೆಸ್ ಮುಕ್ತ ಭಾರತ ಸಾಧ್ಯ ಎಂದು ಮೋದಿ ಭಾವಿಸಿರಬಹುದು
> **ರಾಹುಲ್‌ಗಾಂಧಿ,** ಸಂಸದ

ಇಲ್ಲಿ ಶುಕ್ರವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು, ಅದಾನಿ ಸಮೂಹದ ವಿರುದ್ಧ ಆರೋಪಗಳ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ಹರಿಹಾಯ್ದರು. ಚೀನಾ ಲಡಾಖ್‌ನಲ್ಲಿ ಭಾರತದ ಭೂಮಿ ಕಬಳಿಸಿದೆ. ಇದು, ಅಲ್ಲಿ ಎಲ್ಲರಿಗೂ ತಿಳಿದಿದೆ ಎಂದು ಪುನರುಚ್ಚರಿಸಿದರು.

ಬಡಜನರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ಸ್ಪಷ್ಟ ಅಭಿವೃದ್ಧಿ ಪಥವನ್ನು ಮೈತ್ರಿಕೂಟ ನಿರ್ಮಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈತ್ರಿಪಕ್ಷಗಳಲ್ಲಿ ಭಿನ್ನಾಭಿಪ್ರಾಯವಿರುವುದು ಸಹಜ ಎಂದು ಒಪ್ಪಿಕೊಂಡ ಅವರು, ಆ ಭಿನ್ನಾಭಿಪ್ರಾಯಗಳನ್ನು ಹೇಗೆ ಬದಿಗಿರಿಸಲಾಗಿದೆ ಎಂಬುದು ನನಗೆ ಸಮಾಧಾನ ನೀಡಿದೆ ಎಂದು ಹೇಳಿದರು.

ಹೊಂದಾಣಿಕೆಗೆ 14 ಸದಸ್ಯರ 'ಸಮನ್ವಯ ಸಮಿತಿ' ರಚನೆ

ಮುಂಬೈ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ನಡುವೆ ಹೊಂದಾಣಿಕೆ ಕಾಯ್ದುಕೊಳ್ಳುವ ಉದ್ದೇಶದಿಂದ 14 ಸದಸ್ಯರ ಸಮನ್ವಯ ಸಮಿತಿಯನ್ನು ಶುಕ್ರವಾರ ಇಲ್ಲಿ ರಚಿಸಲಾಯಿತು. ಸೀಟು ಹಂಚಿಕೆ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಮೈತ್ರಿಕೂಟದ ಉನ್ನತಾಧಿಕಾರ ಸಮಿತಿಯಾಗಿ ಈ ಸಮಿತಿಯು ಕಾರ್ಯನಿರ್ವಹಿಸಲಿದೆ. ಮೈತ್ರಿಕೂಟದಲ್ಲಿ ಒಟ್ಟು 28 ಪಕ್ಷಗಳಿವೆ.

ಸಮಿತಿಯ ಸದಸ್ಯರು: ಕಾಂಗ್ರೆಸ್ ಪಕ್ಷದ ಕೆ.ಸಿ.ವೇಣುಗೋಪಾಲ್, ಎನ್‌ಸಿಪಿ ನಾಯಕ ಶರದ್ ಪವಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಆರ್‌ಜೆಡಿಯ ತೇಜಸ್ವಿಯಾದವ್, ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಶಿವಸೇನೆಯ ಸಂಜಯ್ ರಾವುತ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಎಎಪಿಯ ರಾಘವ್ ಛಡ್ಡಾ, ಸಮಾಜವಾದಿ ಪಕ್ಷದ ಜಾವೇರಿ ಅಲಿ ಖಾನ್, ಜೆಡಿಯುನ ಲಾಲನ್ ಸಿಂಗ್, ಸಿಪಿಐನ ಡಿ.ರಾಜಾ, ನ್ಯಾಷನಲ್ ಕಾನ್ಫರೆನ್ಸ್‌ನ ಒಮರ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ ಅವರು ಸಮನ್ವಯ ಸಮಿತಿಯಲ್ಲಿ ಇದ್ದಾರೆ.

ಅಲ್ಲದೆ, 19 ಸದಸ್ಯರ ಪ್ರಚಾರ ಸಮಿತಿ ಹಾಗೂ ಮಾಧ್ಯಮ (19), ಸಾಮಾಜಿಕ ಜಾಲತಾಣ (12) ಮತ್ತು ಸಂಶೋಧನೆ (11) ಕುರಿತಂತೆ ಪ್ರತ್ಯೇಕ ಕಾರ್ಯಪಡೆಯನ್ನು ರಚಿಸಲಾಯಿತು.

ಜಂಟಿ ಪ್ರಚಾರದ ಭಾಗವಾಗಿ ಮೈತ್ರಿಪಕ್ಷಗಳು ದೇಶದ ವಿವಿಧೆಡೆ ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ ಕುರಿತು ಜಾಗೃತಿ ಹಾಗೂ ಪ್ರಜಾಪ್ರಭುತ್ವ ರಕ್ಷಣೆ ಕಾರ್ಯಸೂಚಿಯೊಂದಿಗೆ ರ‍್ಯಾಲಿ ಆಯೋಜಿಸಲಿದೆ. ಪ್ರಾಥಮಿಕವಾಗಿ ಪಟ್ನಾ, ನಾಗಪುರ, ದೆಹಲಿ, ಚೆನ್ನೈ, ಗುವಾಹಟಿಯಲ್ಲಿ ರ‍್ಯಾಲಿ ನಡೆಸಲು ತೀರ್ಮಾನಿಸಲಾಗಿದೆ. ಆದರೆ, ಸ್ಥಳ ಕುರಿತ ಅಂತಿಮ ನಿರ್ಧಾರವನ್ನು ಸಮಿತಿಗಳ ವಿವೇಚನೆಗೆ ಬಿಡಲಾಗಿದೆ. ಅಲ್ಲದೆ, ಪ್ರಚಾರಾಂದೋಲನದಲ್ಲಿ ಒಳಗೊಳ್ಳಬೇಕಾದ ಅಂಶಗಳನ್ನು ಒಳಗೊಂಡಂತೆ 'ಮುನ್ನೋಟ ಕೈಪಿಡಿ' ತರಲು ಮುಖಂಡರು ಚಿಂತನೆ ನಡೆಸಿದ್ದಾರೆ.

ಅ. 2ರಂದು ಮಹಾತ್ಮಗಾಂಧಿ ಸ್ಮಾರಕವಿರುವ ರಾಜಘಾಟ್‌ನಲ್ಲಿ ಕೈಪಿಡಿ ಬಿಡುಗಡೆಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಹೈಕೋರ್ಟ್ ಮಹತ್ವದ ತೀರ್ಪು • ಎಚ್‌.ಡಿ. ರೇವಣ್ಣ, ಸೂರಜ್ ಅವರಿಗೂ ನೋಟಿಸ್‌ಗೆ ಆದೇಶ

ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿ ಒದಗಿಸಿದ್ದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಸದಸ್ಯ ಪ್ರಜ್ವಲ್ ರೇವಣ್ಣ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

'ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಎ.ಮಂಜು ಹಾಗೂ ಹೈಕೋರ್ಟ್ ವಕೀಲ ಜಿ.ದೇವರಾಜೇ ಗೌಡ ಅವರು ಸಲ್ಲಿಸಿದ್ದ ಪ್ರತ್ಯೇಕ ಚುನಾವಣಾ ತರಕಾರು ಅರ್ಜಿಗಳ ಸುದೀರ್ಘ ವಿಚಾರಣೆ ನಡೆಸಿ, ಕಾಯ್ದಿರಿಸಲಾಗಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿತು.

ಇದೇ ವೇಳೆ, 'ನನ್ನನ್ನು ವಿಜೇತ ಅಭ್ಯರ್ಥಿಯಾಗಿ ಘೋಷಿಸಬೇಕು' ಎಂದು ಕೋರಿದ್ದ ಅರ್ಜಿದಾರ ಎ.ಮಂಜು ಅವರ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತು.

'ಎ.ಮಂಜು ಸಹಾ ಚುನಾವಣೆಯಲ್ಲಿ ಅಕ್ರಮ ನಡೆಸಿದ್ದು, ತಮ್ಮ ಆದಾಯ ಹಾಗೂ ತಮ್ಮ ಮೇಲಿರುವ ಕ್ರಿಮಿನಲ್ ಮೊಕದ್ದಮೆಗಳ ಕುರಿತಾಗಿ ಪ್ರಮಾಣ ಪತ್ರದಲ್ಲಿ ಮರೆಮಾಚಿದ್ದಾರೆ. ಹೀಗಾಗಿ, ಅವರನ್ನು ಪ್ರಜ್ವಲ್ ರೇವಣ್ಣ ಬದಲಿಗೆ ಊರ್ಜಿತ ಎಂದು ಪರಿಗಣಿಸಲು ಜನಪ್ರತಿನಿಧಿ ಕಾಯ್ದೆ ಕಲಂ 98 (ಸಿ) ಅನುಸಾರ ಸಾಧ್ಯವಿಲ್ಲ. ದುರದೃಷ್ಟ ಎಂದರೆ ಎ.ಮಂಜು ಈ ಅರ್ಜಿ ಸಲ್ಲಿಸಿದಾಗ ಬಿಜೆಪಿಯಿಂದ ಸ್ಪರ್ಧಿಸಿದ್ದರು. ಆದರೆ, 2023ರ ವಿಧಾನಸಭೆ ಚುನಾವಣೆಯಲ್ಲಿ ಅರಕಲಗೂಡು ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದಾರೆ. ಅಧಿಕಾರದ ದಾಹ ಇರುವ ಇಂತಹ ವ್ಯಕ್ತಿಯನ್ನು ವಿಜೇತ ಅಭ್ಯರ್ಥಿ ಎಂಬುದಾಗಿ ಘೋಷಣೆ ಮಾಡಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

'ಸಂಸತ್ ಸದಸ್ಯ ಸ್ಥಾನದಿಂದ ಪ್ರಜ್ವಲ್ ರೇವಣ್ಣ ಅವರನ್ನು ಅನರ್ಹಗೊಳಿಸುವ ನಿಟ್ಟಿನಲ್ಲಿ ಮುಂದಿನ ಕ್ರಮ ಜರುಗಿಸಲು ತೀರ್ಪಿನ ಪ್ರತಿಯನ್ನು ಚುನಾವಣಾ ಆಯೋಗ ಮತ್ತು ಲೋಕಸಭಾ ಸ್ಪೀಕರ್ ಅವರಿಗೆ ಕಳುಹಿಸಿಕೊಡಬೇಕು. ಈ ದಿಸೆಯಲ್ಲಿ ಚುನಾವಣಾ ಅರ್ಜಿಗಳ ಪ್ರಕ್ರಿಯೆಯ ಅಧಿನಿಯಮ 19ರ ಅನ್ವಯ ಕ್ರಮಕ್ಕೆ ಮುಂದಾಗಬೇಕು' ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

ಎಚ್.ಡಿ.ರೇವಣ್ಣಗೆ ನೋಟಿಸ್: 'ಪ್ರಜ್ವಲ್ ರೇವಣ್ಣ ಅವರ ತಂದೆ ಎಚ್.ಡಿ. ರೇವಣ್ಣ ಅಂದು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಕಾವೇರಿ ನೀರಾವರಿ ನಿಗಮಕ್ಕೆ ಹಂಚಿಕೆಯಾಗಿದ್ದ ಅನುದಾನವನ್ನು ಬೇರೆಡೆ ವರ್ಗಾಯಿಸಿ ಅಕ್ರಮ ಎಸಗಿದ್ದಾರೆ. ಚುನಾವಣೆಯಲ್ಲಿ ಪ್ರಜ್ವಲ್ ರೇವಣ್ಣ ಅವರಿಗೆ ಲಾಭ ಮಾಡಿಕೊಡಲು ಎಚ್.ಡಿ ರೇವಣ್ಣ ಮತ್ತು ಅವರ ಸಹೋದರರೂ ಆದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಕೂಡಾ ಅಕ್ರಮ ಎಸಗಿದ್ದಾರೆ. ಹೀಗಾಗಿ, ಇವರ ವಿರುದ್ಧವೂ ಏಕೆ ಕ್ರಮ ಜರುಗಿಸಬಾರದು ಎಂಬುದರ ವಿವರಣೆ ಪಡೆಯಲು ಅವರು ಕೋರ್ಟ್‌ಗೆ ಹಾಜರಾಗಬೇಕಿದೆ' ಎಂದಿರುವ ನ್ಯಾಯಪೀಠ, ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳ ಕಾಯ್ದೆ–1951ರ ಕಲಂ 99 (1) (2)ರ ಅಡಿ ಎಚ್.ಡಿ. ರೇವಣ್ಣ ಮತ್ತು ಸೂರಜ್ ರೇವಣ್ಣ ಅವರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಮುಖ್ಯಾಂಶಗಳು

- ಪ್ರಜ್ವಲ್ ರೇವಣ್ಣ ಅವರು ಮೆಸರ್ಸ್ ಅಧಿಕಾರ್ ವೆಂಚರ್ಸ್ ಎಲ್‌ಎಲ್‌ಪಿ ಹಾಗೂ ದ್ರೋಣ ವರ್ಕ್ ಫೋರ್ಸ್ ಎಲ್‌ಎಲ್‌ಪಿ ಸಂಸ್ಥೆಗಳಲ್ಲಿನ ಪಾಲುದಾರಿಕೆ ಮತ್ತು ಮಾಲಿಕತ್ವದ ವಿವರಗಳನ್ನು ಬಹಿರಂಗಪಡಿಸಿಲ್ಲ.
- ಚುನಾವಣೆಗೆ ಸ್ಪರ್ಧಿಸುವಾಗ ಅಂದಿನ ದಿನಕ್ಕೆ ಅನುಗುಣವಾಗಿ ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ಮಾಹಿತಿ ಸಲ್ಲಿಸಬೇಕು. ಆದರೆ, ಪ್ರಜ್ವಲ್ ರೇವಣ್ಣ 2008ರಿಂದ 2018ರ ಅವಧಿಯಲ್ಲಿ ದೊಡ್ಡ ಮೊತ್ತದ ಆದಾಯ ಮತ್ತು ಆಸ್ತಿ ಸಂಪಾದಿಸಿದ್ದರೂ, 2018-19ನೇ ಸಾಲಿನ ಆದಾಯ ತೆರಿಗೆ ಮಾಹಿತಿ ಮಾತ್ರ ಒದಗಿಸಿದ್ದಾರೆ.
- ಸ್ಥಿರ ಮತ್ತು ಚರಾಸ್ತಿಗಳ ಕುರಿತು ಅಸಮರ್ಪಕ ಮಾಹಿತಿ ನೀಡಿದ್ದು, ಅನೇಕ ಅಂಶಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾದ ಪ್ರಮಾಣ ಪತ್ರದಲ್ಲಿ ಮರೆ ಮಾಚಲಾಗಿದೆ.
- ತಂದೆ ಎಚ್‌.ಡಿ. ರೇವಣ್ಣ ಅವರಿಂದ ದೊಡ್ಡ ಮೊತ್ತದ ಅಂದರೆ, ₹ 1.26 ಕೋಟಿ ಸಾಲ ಪಡೆದಿರುವುದಾಗಿ ಪ್ರಜ್ವಲ್ ಹೇಳಿದ್ದಾರೆ. ಆದರೆ, ಎಚ್.ಡಿ.ರೇವಣ್ಣ ಲೋಕಾಯುಕ್ತಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಮಗನಿಗೆ ₹ 47.36 ಲಕ್ಷ ಸಾಲ ಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ.
- ಪ್ರಜ್ವಲ್ ರೇವಣ್ಣ ತಮ್ಮ ವ್ಯಾಪಾರದ ಆದಾಯ ₹ 7.48 ಲಕ್ಷ ಎಂದು ಘೋಷಿಸಿಕೊಂಡಿದ್ದಾರೆ. ಆದರೆ, ಆದಾಯದ ಮೂಲ ಯಾವುದು ಎಂಬುದನ್ನು ಬಹಿರಂಗಪಡಿಸಿಲ್ಲ.
- 2019ರ ಮಾರ್ಚ್ 22ಕ್ಕೆ ಅನ್ವಯವಾಗುವಂತೆ ಬ್ಯಾಂಕ್ ಬ್ಯಾಲೆನ್ಸ್ ₹ 5.78 ಲಕ್ಷ ಎಂದು ಪ್ರಮಾಣ ಪತ್ರದಲ್ಲಿ ತೋರಿಸಲಾಗಿತ್ತು. ಆದರೆ, ವಾಸ್ತವದಲ್ಲಿ ಅದು ₹ 49.09 ಲಕ್ಷ ಆಗಿತ್ತು.
- ರಾಜ್ಯಸಭಾ ಸದಸ್ಯರಾಗಿದ್ದ ಕುಪೇಂದ್ರ ರೆಡ್ಡಿ ಅವರಿಂದ ಪಡೆದುಕೊಂಡಿದ್ದ ₹ 50 ಲಕ್ಷದ ಮಾಹಿತಿಯನ್ನೂ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿಲ್ಲ.



> ಹೈಕೋರ್ಟ್ ತೀರ್ಪಿನ ಪ್ರತಿ ಇನ್ನೂ ನನ್ನ ಕೈಸೇರಿಲ್ಲ. ಆದೇಶದ ಪ್ರತಿ ನೋಡಿಕೊಂಡು ವಕೀಲರ ಜೊತೆಗೆ ಚರ್ಚೆ ನಡೆಸಲಾಗುವುದು. ನಂತರ ಮುಂದಿನ ಹೆಜ್ಜೆ ಇರಿಸಲಾಗುವುದು.
> **ಪ್ರಜ್ವಲ್ ರೇವಣ್ಣ,** ಅನರ್ಹಗೊಂಡ ಸಂಸದ



> ರಾಜಕಾರಣಿಗಳಿಗೆ ಇದೊಂದು ಪಾಠ. ಯಾರೂ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಬಾರದು. ನನ್ನ ಬಗ್ಗೆಯೂ ಹೈಕೋರ್ಟ್ ಉಲ್ಲೇಖಿಸಿದ್ದರೆ, ಆ ಬಗ್ಗೆ ತೀರ್ಪು ಪರಿಶೀಲಿಸಿ, ಕಾನೂನು ಪ್ರಕಾರ ಮುಂದಿನ ಹೆಜ್ಜೆ ಇಡುವೆ.
> **ಎ.ಮಂಜು,** ಶಾಸಕ



> ಕಾನೂನು ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಎಚ್‌.ಡಿ. ರೇವಣ್ಣ ಹಾಗೂ ಎ.ಮಂಜು ಅವರೂ ಚುನಾವಣಾ ಅಕ್ರಮದಲ್ಲಿ ಭಾಗಿಯಾಗಿರುವುದಾಗಿ ಹೈಕೋರ್ಟ್ ಹೇಳಿದೆ.
> **ಜಿ. ದೇವರಾಜೇಗೌಡ,** ದೂರುದಾರ ವಕೀಲ

ಆರೋಪಗಳು

ಲೋಕಸಭೆಗೆ 2019ರ ಏಪ್ರಿಲ್ 18ರಂದು ಚುನಾವಣೆ ನಡೆದು, ಮೇ 23ರಂದು ಫಲಿತಾಂಶ ಪ್ರಕಟವಾಗಿತ್ತು. ಪ್ರಜ್ವಲ್ ರೇವಣ್ಣ ಹಾಸನ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸಿದ್ದರು. ಬಿಜೆಪಿ ಅಭ್ಯರ್ಥಿಯಾಗಿದ್ದ ಎ.ಮಂಜು ಎರಡನೇ ಸ್ಥಾನ ಗಳಿಸಿದ್ದರು. 'ಪ್ರಜ್ವಲ್ ರೇವಣ್ಣ ಚುನಾವಣೆಯಲ್ಲಿ ಅಕ್ರಮಗಳನ್ನು ನಡೆಸಿ ಜಯಗಳಿಸಿದ್ದಾರೆ. ಹೀಗಾಗಿ, ಅವರ ಲೋಕಸಭೆ ಸದಸ್ಯತ್ವವನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಿ ಪರಾಜಿತ ಅಭ್ಯರ್ಥಿ ಎ.ಮಂಜು ಮತ್ತು ಕಾಂಗ್ರೆಸ್ ಮುಖಂಡರಾಗಿದ್ದ, ನಂತರ ಬಿಜೆಪಿಗೆ ಸೇರಿದ್ದ ಜಿ.ದೇವರಾಜೇ ಗೌಡ 2019ರಲ್ಲಿ ಪ್ರತ್ಯೇಕ ಚುನಾವಣಾ ತಕರಾರು ಅರ್ಜಿಗಳನ್ನು ಸಲ್ಲಿಸಿದ್ದರು.

ನೇಸರ್ಗಿ ಪ್ರತಿಕ್ರಿಯೆ: 'ಹೈಕೋರ್ಟ್‌ನ ಈ ತೀರ್ಪಿನಿಂದ ಚುನಾವಣೆ ವೇಳೆ ಪ್ರಜ್ವಲ್ ರೇವಣ್ಣ ಮತ್ತು ಎ.ಮಂಜು ಅಕ್ರಮ ನಡೆಸಿರುವುದು ಸಾಬೀತಾಗಿದೆ. ಇದರಿಂದ ಪ್ರಜ್ವಲ್ ರೇವಣ್ಣ ಅನರ್ಹಗೊಳ್ಳಲಿದ್ದಾರೆ. ಎ.ಮಂಜು ಕೂಡಾ ಅಕ್ರಮ ಎಸಗಿರುವುದರಿಂದ ಚುನಾವಣೆಯಲ್ಲಿ ಆರು ವರ್ಷ ಸ್ಪರ್ಧಿಸುವಂತಿಲ್ಲ ಎಂಬ ನಿಯಮ ಅವರಿಗೂ ಅನ್ವಯಿಸಲಿದೆ. ಹಾಲಿ ಅರಕಲಗೂಡು ಕ್ಷೇತ್ರದ ಜೆಡಿಎಸ್ ಶಾಸಕರಾಗಿರುವ ಎ.ಮಂಜು ಆಯ್ಕೆಯೂ ರದ್ದಾಗಲಿದೆ' ಎಂದು ಜಿ.ದೇವರಾಜೇ ಗೌಡ ಪರ ವಾದ ಮಂಡಿಸಿದ್ದ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ತೀರ್ಪಿಗೆ ಪ್ರತಿಕ್ರಿಯಿಸಿದ್ದಾರೆ.

'ಇಂಡಿಯಾ' ಪ್ರೇಕ್ಷಕರಿಲ್ಲದ ಟೂರಿಂಗ್ ಟಾಕೀಸ್'



ಪ್ರಲ್ಹಾದ್ ಜೋಶಿ

ಬೆಂಗಳೂರು (ಪಿಟಿಐ): ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಶುಕ್ರವಾರ ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ವನ್ನು ಪ್ರೇಕ್ಷಕರಿಲ್ಲದ ಟೂರಿಂಗ್ ಟಾಕೀಸ್‌ಗೆ ಹೋಲಿಸಿದ್ದಾರೆ.

'ಇಂಡಿಯಾ' ವಿರುದ್ಧ ವಾಗ್ದಾಳಿ ನಡೆಸಿದ ಅವರು, ಇದು ಗೊಂದಲ ಮತ್ತು ವಿರೋಧಾಭಾಸಗಳ ಕಂತೆ ಯಾಗಿದೆ. ಅವರ ಕಾರ್ಯಸೂಚಿ ಏನು? ನಾವು ದೇಶಕ್ಕಾಗಿ ಏನಾದರೂ ಒಳ್ಳೆಯದನ್ನು ಮಾಡಲಿದ್ದೇವೆ ಎಂಬುದು ಕಾರ್ಯಸೂಚಿಯಲ್ಲ. 'ಮೋದಿಯನ್ನು ಸೋಲಿಸಿ' ಎಂಬುದು ಅವರ ಕಾರ್ಯಸೂಚಿ. ನಕಾರಾತ್ಮಕ ಪ್ರಚಾರದಿಂದ ಯಾವುದೇ ಪಕ್ಷ ಅಥವಾ ಮೈತ್ರಿಕೂಟ ಯಶಸ್ವಿಯಾಗುವುದಿಲ್ಲ' ಎಂದು ಜೋಶಿ ಹೇಳಿದರು.

ಇಲ್ಲಿಯವರೆಗೆ ಮೂರು ಸಭೆಗಳು ನಡೆದಿವೆ. ಈವರೆಗೆ ಯಾವುದೇ ನಿರ್ಧಾರ ಕೈಗೊಳ್ಳಲು ಆಗಿಲ್ಲ. ಆದ್ದರಿಂದ, ಜನರು ಸಹ ಅವರನ್ನು ನಂಬುವುದಿಲ್ಲ. ಸ್ಥಿರತೆ ಅಥವಾ ಒಗ್ಗಟ್ಟು ಇಲ್ಲ ಎಂದರು.

ವಕೀಲ ದೇವರಾಜೇಗೌಡ ನಿವಾಸಕ್ಕೆ ಭದ್ರತೆ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಿದ್ದ ದೂರುದಾರ ವಕೀಲ ಜಿ. ದೇವರಾಜೇಗೌಡ ಅವರ ಹೊಳೆನರಸೀಪುರದ ನಿವಾಸಕ್ಕೆ ಬಿಗಿ ಬಂದೋಬಸ್ತ್ ಒದಗಿಸಲಾಗಿದೆ.

ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಎಚ್.ಡಿ. ರೇವಣ್ಣ ಅವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಜಿ.ದೇವರಾಜೇ ಗೌಡ ಅವರು ಸ್ಪರ್ಧಿಸಿದ್ದಾಗ ಅವರ ಕಾರಿನ ಮೇಲೆ ದಾಳಿ ನಡೆಸಲಾಗಿತ್ತು. ಆ ಬಗ್ಗೆ ದೂರು ದಾಖಲಿಸಲಾಗಿತ್ತು.

ಜೆಡಿಎಸ್ 'ಶಕ್ತಿ ಕೇಂದ್ರ'ದಲ್ಲಿ ತಲ್ಲಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನೇ ಅನೂರ್ಜಿತಗೊಳಿಸಿ ಹೈಕೋರ್ಟ್ ನೀಡಿರುವ ತೀರ್ಪು ಜೆಡಿಎಸ್ 'ಶಕ್ತಿ ಕೇಂದ್ರ'ದಲ್ಲಿ ತಲ್ಲಣ ಸೃಷ್ಟಿಸಿದೆ. ಇಡೀ ಕುಟುಂಬವೇ ಕಾನೂನು ಕ್ರಮದ ಸುಳಿಗೆ ಸಿಲುಕಿರುವುದು ಪಕ್ಷದ ನಾಯಕರ ಚಿಂತೆಯನ್ನು ಹೆಚ್ಚಿಸಿದೆ.

ಪ್ರಜ್ವಲ್ ವಿರುದ್ಧ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದ ಎ. ಮಂಜು ಈಗ ಜೆಡಿಎಸ್ ಶಾಸಕ. ತಮ್ಮೆದುರು ಸ್ಪರ್ಧಿಸಿ ಆಯ್ಕೆಯಾಗಿದ್ದ ಪ್ರಜ್ವಲ್ ವಿರುದ್ಧದ ಹೋರಾಟದಲ್ಲಿ ಗೆಲುವು ಸಾಧಿಸಿರುವ ಮಂಜು, ಅದೇ ಚುನಾವಣೆಯಲ್ಲಿ ಅಕ್ರಮ ಎಸಗಿರುವ ಆರೋಪದಡಿ ದೋಷಿ ಎಂದು ಹೈಕೋರ್ಟ್ ಹೇಳಿದೆ.

ಪ್ರಜ್ವಲ್ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ್ದ ಜೆಡಿಎಸ್ ಶಾಸಕ ಎಚ್. ಡಿ. ರೇವಣ್ಣ ಮತ್ತು ವಿಧಾನ ಪರಿಷತ್ ಹಾಲಿ ಸದಸ್ಯ ಸೂರಜ್ ರೇವಣ್ಣ ಕೂಡ ಚುನಾವಣಾ ಅಕ್ರಮ ಎಸಗಿದ್ದಾರೆ ಎಂದು ಹೈಕೋರ್ಟ್ ಸಾರಿದೆ.

ಜತೆಯಲ್ಲೇ ಮೂವರ ವಿರುದ್ಧವೂ ಪ್ರಜಾ ಪ್ರತಿನಿಧಿ ಕಾಯ್ದೆಯಡಿ ಪ್ರಕರಣ ದಾಖಲಿಸಲು ನಿರ್ದೇಶನ ನೀಡಿರುವುದರಿಂದ ಒಂದೇ ಪ್ರಕರಣದಲ್ಲಿ ಜೆಡಿಎಸ್‌ನ ನಾಲ್ವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಹಾಸನ ಜಿಲ್ಲೆಯ ರಾಜಕಾರಣದ ಮೇಲೆ ಬಲವಾದ ಹಿಡಿತ ಸಾಧಿಸಿರುವ ರೇವಣ್ಣ ಕುಟುಂಬ ಈ ಪ್ರಕರಣದಿಂದ ತೀವ್ರ ಇಕ್ಕಟ್ಟಿಗೆ ಸಿಲುಕಿದೆ. ಕಾನೂನು ಹೋರಾಟದಲ್ಲಿ ಗೆಲುವು ಸಿಗದಿದ್ದರೆ ಒಂದೇ ಕುಟುಂಬದ ಮೂವರು ಚುನಾವಣಾ ರಾಜಕಾರಣದಿಂದ ದೂರ ಸರಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಇದರಿಂದಾಗಿ ಜೆಡಿಎಸ್‌ನ 'ಶಕ್ತಿ ಕೇಂದ್ರ'ದಲ್ಲಿ ಆತಂಕ ಮನೆಮಾಡಿದೆ.

ಅಖಾಡಕ್ಕಿಳಿದ ರೇವಣ್ಣ: ಹೈಕೋರ್ಟ್ ತೀರ್ಪು ಪ್ರಕಟವಾದ ಬೆನ್ನಲ್ಲೇ ಕುಟುಂಬವನ್ನು ಕಾನೂನು ಕ್ರಮದ ಸಂಕಷ್ಟದಿಂದ ಪಾರುಮಾಡಲು ರೇವಣ್ಣ ಅಖಾಡಕ್ಕಿಳಿದಿದ್ದಾರೆ. ಹಿರಿಯ ವಕೀಲರು ಮತ್ತು ಪಕ್ಷದ ಕೆಲವು ಪ್ರಮುಖರ ಜತೆ ಚರ್ಚಿಸಿದ್ದಾರೆ. ಪಕ್ಷದ ವರಿಷ್ಠರೂ ಆಗಿರುವ ತಮ್ಮ ತಂದೆ ಎಚ್. ಡಿ. ದೇವೇಗೌಡ ಅವರೊಂದಿಗೆ ಚರ್ಚಿಸಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ನಿರ್ಧಾರವನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಹೈಕೋರ್ಟ್ ತೀರ್ಪಿಗೆ ತಲೆ ಬಾಗುವೆ: ಶಾಸಕ ಎಚ್‌.ಡಿ. ರೇವಣ್ಣ

ಬೆಂಗಳೂರು: 'ಹೈಕೋರ್ಟ್ ತೀರ್ಪಿಗೆ ತಲೆಬಾಗುವೆ. ತೀರ್ಪಿನ ಪ್ರತಿ ಬಂದ ನಂತರ ಮುಂದಿನ ಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಜೆಡಿಎಸ್ ಶಾಸಕ, ಪ್ರಜ್ವಲ್ ತಂದೆ ಎಚ್.ಡಿ.ರೇವಣ್ಣ ಪ್ರತಿಕ್ರಿಯಿಸಿದರು.

ಅರ್ಜಿದಾರರಾದ ಎ.ಮಂಜು ಅವರು ಈಗ ಜೆಡಿಎಸ್ ಶಾಸಕರಾಗಿದ್ದಾರೆ. ಅವರು 2019ರ ಲೋಕಸಭಾ ಚುನಾವಣೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದರು. ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ತಪ್ಪು ಮಾಹಿತಿಯ ಪ್ರಮಾಣಪತ್ರವನ್ನು ಪ್ರಶ್ನಿಸಿ ದಾಖಲಿಸಲಾಗಿದ್ದ ಪ್ರಕರಣವಿದು. ಪ್ರಮಾಣಪತ್ರ ಸಲ್ಲಿಸುವಾಗ ತಪ್ಪು ಮಾಹಿತಿ ನೀಡಬಾರದು ಎಂಬ ಪಾಠ ತೀರ್ಪಿನಿಂದ ದೊರೆತಿದೆ ಎಂದರು.

ಇದು ಸತ್ಯಕ್ಕೆ ಸಂದ ನ್ಯಾಯ ಎಂದು ಅರ್ಜಿದಾರ ಹಾಗೂ ಶಾಸಕ ಎ.ಮಂಜು ಪ್ರತಿಕ್ರಿಯಿಸಿದರು.

'ನಾನು ಈಗ ಜೆಡಿಎಸ್‌ನೊಂದಿಗೆ ಇದ್ದೇನೆ. ಆದರೆ, ಪ್ರಕರಣವನ್ನು ಹಿಂಪಡೆಯಲು ಸಾಧ್ಯವಿಲ್ಲ. ತೀರ್ಪಿನ ಪ್ರತಿ ಬಂದ ನಂತರ ಏನು ಮಾಡಬೇಕು ಎಂದು ಪಕ್ಷದ ನಾಯಕರ ಜತೆ ಚರ್ಚಿಸಿ, ನಿರ್ಧರಿಸುತ್ತೇವೆ' ಎಂದರು.



ನೌಕಾಪಡೆಗೆ ಸಮರ್ಪಣೆ ಮಾಡಲಾದ ಯುದ್ಧನೌಕೆ 'ಮಹೇಂದ್ರಗಿರಿ' –ಪಿಟಿಐ ಚಿತ್ರ

ಯುದ್ಧನೌಕೆ 'ಮಹೇಂದ್ರಗಿರಿ' ನೌಕಾಪಡೆಗೆ ಸಮರ್ಪಣೆ

ಮುಂಬೈ(ಪಿಟಿಐ): ಯುದ್ಧನೌಕೆ 'ಮಹೇಂದ್ರಗಿರಿ'ಯನ್ನು ಶುಕ್ರವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ನೌಕಾಪಡೆಗೆ ಸಮರ್ಪಿಸಲಾಯಿತು.

ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ಅಭಿವೃದ್ಧಿಪಡಿಸಿರುವ ಈ ಯುದ್ಧನೌಕೆ ಜಲಾಂತರ್ಗಾಮಿಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿದೆ.

'ಪ್ರಾಜೆಕ್ಟ್ 17ಎ' ಅಡಿ ನೌಕಾಪಡೆಗೆ ಸಮರ್ಪಿಸಲಾಗಿರುವ ಕೊನೆಯ ಹಾಗೂ ಏಳನೇ ಯುದ್ಧನೌಕೆ ಇದಾಗಿದ್ದು, ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸಂವೇದಕಗಳು ಮತ್ತು ಅತ್ಯುತ್ತಮ ನಿರ್ವಹಣಾ ಸಿಸ್ಟಮ್‌ಗಳನ್ನು ಒಳಗೊಂಡಿದೆ. ಒಡಿಶಾದ ಪೂರ್ವ ಘಟ್ಟದಲ್ಲಿರುವ ಮಹೇಂದ್ರಗಿರಿ ಪರ್ವತದ ಹೆಸರನ್ನೇ ಈ ನೌಕೆಗೆ ಇಡಲಾಗಿದೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಪತ್ನಿ ಸುದೇಶ ಅವರು ಈ ಯುದ್ಧನೌಕೆಯನ್ನು ಸಮರ್ಪಿಸಿದರು.

ಮುಖ್ಯ ಅತಿಥಿಯಾಗಿದ್ದ ಉಪರಾಷ್ಟ್ರಪತಿ ಧನಕರ್ ಮಾತನಾಡಿ, 'ಯುದ್ಧನೌಕೆ ಮಹೇಂದ್ರಗಿರಿ ತನ್ನ ಕಾರ್ಯಾಚರಣೆ ಆರಂಭಿಸಿದ ನಂತರ ಕಡಲ ರಕ್ಷಣೆಗೆ ಸಂಬಂಧಿಸಿ ದೇಶದ ಕೀರ್ತಿಪತಾಕೆಯನ್ನು ಮತ್ತಷ್ಟು ಎತ್ತರಕ್ಕೆ ಹಾರಿಸುವ ವಿಶ್ವಾಸ ಇದೆ' ಎಂದು ಹೇಳಿದರು.

ಮಣಿಪುರಕ್ಕೆ ಅಗತ್ಯ ವಸ್ತು ಪೂರೈಸಿ: ಸುಪ್ರೀಂ ಕೋರ್ಟ್

ಪ್ರಜಾವಾಣಿವಾರ್ತೆ

ನವದೆಹಲಿ: ಗಲಭೆಪೀಡಿತ ಮಣಿಪುರದ ವಿವಿಧೆಡೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರಕ್ಕೆ ತಡೆಯುಂಟು ಮಾಡಿರುವುದನ್ನು ತೆರವುಗೊಳಿಸಿ ಆಹಾರ, ಔಷಧಿ ಮತ್ತು ಇತರ ಅಗತ್ಯ ವಸ್ತುಗಳನ್ನು ಪೂರೈಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.



ಮುಖ್ಯಾಂಶಗಳು

- ವಾಯುಮಾರ್ಗದ ಮೂಲಕ ಅಗತ್ಯ ವಸ್ತು ತಲುಪಿಸಲು ಸೂಚನೆ
- ಪರಿಹಾರ, ಪುನರ್ವಸತಿ ಕುರಿತು ಮುಂದಿನ ವಾರ ವಿಚಾರಣೆ

ಹೆದ್ದಾರಿ ತಡೆಯನ್ನು ತಕ್ಷಣ ತೆರವುಗೊಳಿಸಲು ಸಾಧ್ಯವಾಗದಿದ್ದರೆ ವಾಯು ಮಾರ್ಗದ ಮೂಲಕ ಅಗತ್ಯ ವಸ್ತುಗಳನ್ನು ಪೂರೈಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ಅವರಿದ್ದ ನ್ಯಾಯಪೀಠವು ಸಲಹೆ ನೀಡಿದೆ.

'ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರಕ್ಕೆ ತಡೆಯುಂಟು ಮಾಡಿರುವ ಕಾರಣ ಮಣಿಪುರದ ಜನರು ಉಪವಾಸದಿಂದಿರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಾಯು ಮಾರ್ಗದ ಮೂಲಕ ಆಹಾರ ಪದಾರ್ಥಗಳನ್ನು ಪೂರೈಸಬೇಕು' ಎಂದು ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ಹೆದ್ದಾರಿ ತಡೆಯಿಂದಾಗಿ ಮೋರೆ ಪ್ರದೇಶದಲ್ಲಿ ಆಹಾರ ಪದಾರ್ಥಗಳು ಲಭ್ಯವಾಗದೆ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ವಿವರಿಸಿದ್ದಾರೆ.

ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ನ್ಯಾಯಮೂರ್ತಿ ಗೀತಾ ಮಿತ್ತಲ್ ನೇತೃತ್ವದ ಸಮಿತಿಯು ಹೆದ್ದಾರಿ ತಡೆಯನ್ನು ತೆರವುಗೊಳಿಸಲು ನಿರ್ದೇಶನ ನೀಡಿಲ್ಲ ಎಂದು ಇಂದಿರಾ ಅವರು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

'ಕೆಲವು ಪರಿಹಾರ ಶಿಬಿರಗಳಲ್ಲಿ ಚಿಕನ್ ಪಾಕ್ಸ್ ಮತ್ತು ದಡಾರ ಕಾಣಿಸಿಕೊಂಡಿದೆ ಮತ್ತು ಹೆದ್ದಾರಿ ತಡೆಯು ಆಹಾರ ಪೂರೈಕೆ ಮೇಲೆ ಪರಿಣಾಮ ಬೀರಿದೆ' ಎಂದು ಸಮಿತಿಯ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲೆ ಮೀನಾಕ್ಷಿ ಅರೋರಾ ಹೇಳಿದ್ದಾರೆ.

ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವ ಬದಲು ನ್ಯಾಯಾಲಯದಲ್ಲಿ ಏಕೆ ವಾದಿಸುತ್ತಿದ್ದೀರಿ ಎಂದು ನ್ಯಾಯಪೀಠವು ಮೀನಾಕ್ಷಿ ಅವರನ್ನು ಪ್ರಶ್ನಿಸಿದೆ.

ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ತಡೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಮತ್ತು ಮಣಿಪುರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ.

ಮಣಿಪುರದಲ್ಲಿ ಕೈಗೊಂಡಿರುವ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳ ಕುರಿತು ಸುಪ್ರೀಂ ಕೋರ್ಟ್ ಮುಂದಿನ ವಾರ ವಿಚಾರಣೆ ನಡೆಸಲಿದೆ.

ಇದೇ 18ರಿಂದ 5 ದಿನಗಳ ಕಾಲ ನಡೆಯಲಿದೆ ಸಂಸತ್‌ನ ವಿಶೇಷ ಅಧಿವೇಶನ

ಮಹಿಳಾ ಮೀಸಲಾತಿ ಮಸೂದೆ ಮಂಡನೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ 18ರಿಂದ ಐದು ದಿನಗಳ ಕಾಲ ನಡೆಯಲಿರುವ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವ ಸಾಧ್ಯತೆ ಇದೆ.

'ಒಂದು ದೇಶ– ಒಂದು ಚುನಾವಣೆ' ಅನುಷ್ಠಾನಕ್ಕೆ ಸಂಬಂಧಿಸಿದ ಸಮಾಲೋಚನೆಯು ಸಮಯ ತೆಗೆದುಕೊಳ್ಳುವ ಕಾರಣ, ಇತರ ಕೆಲ ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆಯುವ ಆಯ್ಕೆಗಳನ್ನು ಕೇಂದ್ರ ಮುಕ್ತವಾಗಿರಿಸಿಕೊಂಡಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವ ಬಗ್ಗೆ ರಾಜಕೀಯ ತೀರ್ಮಾನ ತೆಗೆದುಕೊಂಡಿದ್ದೇ ಆದಲ್ಲಿ, 2010ರಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯಸಭೆಯಲ್ಲಿ ಮಂಡಿಸಿದ್ದ ಮಸೂದೆಯನ್ನು ಮೋದಿ ಸರ್ಕಾರ ಹಿಂಪಡೆಯಬಹುದು' ಎಂದು ಹೇಳಿವೆ.

2010ರ ಮಾರ್ಚ್‌ನಲ್ಲಿ ಈ ಮಸೂದೆಗೆ, ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ರಾಜ್ಯಸಭೆಯಲ್ಲಿ ಅಂಗೀಕರಿಸಿತ್ತು. ಆದರೆ, 15ನೇ ಲೋಕಸಭೆಯಲ್ಲಿ ಈ ಮಸೂದೆ ಮಂಡನೆಯಾದರೂ, ಸಮಾಜವಾದಿ ಪಾರ್ಟಿ, ಆರ್‌ಜೆಡಿಯಿಂದ ಭಾರಿ ವಿರೋಧ ವ್ಯಕ್ತವಾದ ಕಾರಣ ಅಂಗೀಕಾರವಾಗಿರಲಿಲ್ಲ.

ಈಗ, ಮತ್ತೊಮ್ಮೆ ಈ ಮಸೂದೆಯನ್ನು ಮಂಡಿಸುವ ಮೂಲಕ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ವಿಷಯದಲ್ಲಿ ವಿರೋಧ ಪಕ್ಷಗಳ ಪಾಳೆಯದಲ್ಲಿರುವ ಭಿನ್ನಮತವನ್ನು ಬಹಿರಂಗಗೊಳಿಸುವ ಉದ್ದೇಶವನ್ನು ಮೋದಿ ಸರ್ಕಾರ ಹೊಂದಿದೆ.

ಈ ಹಿಂದೆ ಕಾಂಗ್ರೆಸ್ ಈ ಮಸೂದೆಯನ್ನು ಬೆಂಬಲಿಸಿತ್ತು. ಈಗ, ಮತ್ತೆ ಬೆಂಬಲಿಸಿದಲ್ಲಿ ಕಾಂಗ್ರೆಸ್ ತನ್ನ ಮಿತ್ರ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.

ವಿಧಾನಸಭೆಗಳು ಹಾಗೂ ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಒದಗಿಸುವ ಉದ್ದೇಶದ ಈ ಮಸೂದೆಯನ್ನು ಮೊದಲ ಬಾರಿಗೆ 1996ರಲ್ಲಿ ಲೋಕಸಭೆಯಲ್ಲಿ ಮಂಡಿಸಲಾಗಿತ್ತು.

ಪ್ರಮುಖ ವಿಷಯಗಳ ಚರ್ಚೆ: ಪ್ರಲ್ಹಾದ ಜೋಶಿ

ಬೆಂಗಳೂರು (ಪಿಟಿಐ); ಸೆ. 18 ರಿಂದ 22ರವರೆಗೆ ನಡೆಯಲಿರುವ ಸಂಸತ್ತಿನ ವಿಶೇಷ ಅಧಿವೇಶನದ ಕಾರ್ಯಸೂಚಿಯಲ್ಲಿ 'ಪ್ರಮುಖ ವಿಷಯಗಳು' ಇವೆ. ಎಲ್ಲ ಪಕ್ಷಗಳಿಗೆ ಈ ಕುರಿತು ಶೀಘ್ರ ಮಾಹಿತಿ ರವಾನಿಸಲಾಗುವುದು ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ತಿಳಿಸಿದ್ದಾರೆ.

ಅಧಿವೇಶನದಲ್ಲಿ ನಡೆಯಬಹುದಾದ ಸಂಭಾವ್ಯ ಕಾರ್ಯಸೂಚಿಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ಸಿದ್ಧತೆಯ ಅಂತಿಮ ಹಂತದಲ್ಲಿದೆ. ಶಿಷ್ಟಾಚಾರದಂತೆ ನಿಗದಿತ ಸಮಯಕ್ಕೂ ಮುಂಚಿತವಾಗಿ ಎಲ್ಲ ಪಕ್ಷಗಳಿಗೆ ಅಧಿವೇಶನ ಕುರಿತು ಮಾಹಿತಿ ನೀಡುವುದು ಕಡ್ಡಾಯ. ಇದನ್ನು ಪಾಲಿಸಲಾಗುತ್ತದೆ ಎಂದು ಸುದ್ದಿಸಂಸ್ಥೆಗೆ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಒಂಬತ್ತು ವರ್ಷಗಳಲ್ಲಿ ಇದು ಮೊದಲ ವಿಶೇಷ ಅಧಿವೇಶನವಾಗಿದೆ. 2017ರ ಜೂನ್ 30ರಂದು ಮಧ್ಯರಾತ್ರಿ ಜಿಎಸ್‌ಟಿ ಜಾರಿಯ ಅಂಗವಾಗಿ ಲೋಕಸಭೆ ಮತ್ತು ರಾಜ್ಯಸಭೆಯ ವಿಶೇಷ ಜಂಟಿ ಅಧಿವೇಶನ ನಡೆದಿತ್ತು.

ಈ ಬಾರಿ ಐದು ದಿನಗಳ ಪೂರ್ಣ ಪ್ರಮಾಣದ ಅಧಿವೇಶನ ನಡೆಯಲಿದ್ದು, ಉಭಯ ಸದನಗಳು ಪ್ರತ್ಯೇಕವಾಗಿ ಸಭೆ ಸೇರುತ್ತವೆ.

ಗಡಿ ಸಮಸ್ಯೆ : ಚರ್ಚೆಗೆ ಒವೈಸಿ ಆಗ್ರಹ

ಹೈದರಾಬಾದ್ (ಪಿಟಿಐ): 'ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಚೀನಾದೊಂದಿಗಿನ ಗಡಿ ಸಮಸ್ಯೆ ಸೇರಿದಂತೆ ಇತರ ವಿಷಯಗಳನ್ನು ಚರ್ಚಿಸಬೇಕು' ಎಂದು ಎಐಎಂಐಎಂ ಅಧ್ಯಕ್ಷ, ಸಂಸದ ಅಸಾದುದ್ದೀನ್ ಒವೈಸಿ ಆಗ್ರಹಿಸಿದ್ದಾರೆ.

ಗುರುವಾರ ರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಗಡಿ ವಿಚಾರವಾಗಿ ವಿಸ್ತೃತವಾದ ಚರ್ಚೆಯನ್ನು ಹಮ್ಮಿಕೊಳ್ಳಬೇಕು ಎಂದು ಆಗ್ರಹಿಸಿದರು. ಚೀನಾವು ಭಾರತದ 2 ಸಾವಿರ ಚದರ ಕಿ.ಮೀ. ಭೂಮಿಯನ್ನು ಅತಿಕ್ರಮಿಸಿದೆ. ವಿಶೇಷ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಕುರಿತು ಚರ್ಚೆ ನಡೆಸುವರೆಂಬ ನಿರೀಕ್ಷೆ ಇದೆ. ದೆಪ್ಸಾಂಗ್ ಮತ್ತು ಡೆಮ್ಚಾಕ್‌ನಲ್ಲಿನ ಭೂಮಿಯನ್ನು ನಾವು ಕಳೆದುಕೊಂಡಿದ್ದೇವೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.



ಅಸಾದುದ್ದೀನ್ ಒವೈಸಿ

ಇದೇ ವೇಳೆ, 'ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯು ಸಂವಿಧಾನ ವಿರೋಧಿಯಾಗಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

2024ರ ಹೊತ್ತಿಗೆ 10 ರಾಜ್ಯಗಳ ವಿಧಾನಸಭಾ ಅವಧಿ ಅಂತ್ಯ

ನವದೆಹಲಿ (ಪಿಟಿಐ): ದೇಶದಲ್ಲಿ ಕನಿಷ್ಠ ಹತ್ತು ರಾಜ್ಯಗಳ ವಿಧಾನಸಭೆಗಳ ಅವಧಿಯು 2024ರ ಲೋಕಸಭಾ ಚುನಾವಣೆಯ ನಿಗದಿತ ಸಮಯಕ್ಕಿಂತ ಮೊದಲು ಇಲ್ಲವೇ ಅದರ ಆಸುಪಾಸಿನಲ್ಲಿ ಕೊನೆಗೊಳ್ಳಲಿದೆ.

ಈ ವರ್ಷಾಂತ್ಯದಲ್ಲಿ ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಮಿಜೋರಾಂ, ಛತ್ತೀಸಗಢ ರಾಜ್ಯಗಳಿಗೆ ವಿಧಾನಸಭಾ ಚುನಾವಣೆಯು ನಡೆಯಲಿದೆ. ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಒಡಿಶಾ, ಸಿಕ್ಕಿಂ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಲೋಕಸಭಾ ಚುನಾವಣೆಯ ಸಮಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ.

ವಿವಿಧ ರಾಜ್ಯಗಳ ವಿಧಾನಸಭೆಗಳ ಮುಕ್ತಾಯದ ಅವಧಿಯ ಸಾಧ್ಯತೆ

ರಾಜ್ಯಗಳು	ಚುನಾವಣಾ ವರ್ಷ
ಮಿಜೋರಾಂ	2023 ಡಿಸೆಂಬರ್
ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ	2024 ಜನವರಿ
ಆಂಧ್ರಪ್ರದೇಶ, ಅರುಣಾಚಲಪ್ರದೇಶ, ಒಡಿಶಾ, ಸಿಕ್ಕಿಂ	2024 ಜೂನ್
ಹರಿಯಾಣ, ಮಹಾರಾಷ್ಟ್ರ	2024 ನವೆಂಬರ್
ಜಾರ್ಖಂಡ್	2024 ಡಿಸೆಂಬರ್
ದೆಹಲಿ	2025 ಫೆಬ್ರುವರಿ
ಬಿಹಾರ	2025 ನವೆಂಬರ್
ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ	2026 ಮೇ
ಪುದುಚೇರಿ	2026 ಜೂನ್
ಗೋವಾ, ಮಣಿಪುರ, ಪಂಜಾಬ್, ಉತ್ತರಾಖಂಡ	2027 ಮಾರ್ಚ್
ಉತ್ತರಪ್ರದೇಶ	2027 ಮೇ
ಗುಜರಾತ್, ಹಿಮಾಚಲಪ್ರದೇಶ	2027 ಡಿಸೆಂಬರ್
ಮೇಘಾಲಯ, ನಾಗಾಲ್ಯಾಂಡ್, ತ್ರಿಪುರ	2028 ಮಾರ್ಚ್
ಕರ್ನಾಟಕ	2028 ಮೇ

(ಜಮ್ಮು ಮತ್ತು ಕಾಶ್ಮೀರವು ಕೇಂದ್ರಾಡಳಿತ ಅವಧಿಯನ್ನು ಪೂರ್ಣಗೊಳಿಸುವ ಬಗ್ಗೆ ಇನ್ನೂ ಸ್ಪಷ್ಟನೆ ದೊರೆತಿಲ್ಲ)



ಓಣಂ ಪುಲಿಕಲ್ಳೈ

ಓಣಂ ಹಬ್ಬದ ಸಮಾರೋಪದ ಹಿನ್ನೆಲೆಯಲ್ಲಿ ಶುಕ್ರವಾರ ಕೇರಳದ ತ್ರಿಶ್ಶೂರಿನಲ್ಲಿ ಕಲಾವಿದರು ಸಾಂಪ್ರದಾಯಿಕ 'ಪುಲಿಕಲ್ಳೈ'ನಲ್ಲಿ ಭಾಗವಹಿಸಿದ್ದರು

ಪಿಟಿಐ ಚಿತ್ರ

ಸಚಿವ ಕೌಶಲ್ ಪುತ್ರನ ನಿವಾಸದಲ್ಲಿ ಹತ್ಯೆ

ಲಖನೌ: ಕೇಂದ್ರ ಸಚಿವ ಕೌಶಲ್ ಕಿಶೋರ್ ಅವರ ಪುತ್ರ ವಿಕಾಸ್ ಕಿಶೋರ್ ಅವರ ಲಖನೌದ ದುಬಗ್ಗಾ ಪ್ರದೇಶದ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ಯುವಕನನ್ನು ಗುಂಡಿಕ್ಕಿ ಕೊಲೆ ಮಾಡಲಾಗಿದೆ.

ಪೊಲೀಸ್ ಮೂಲಗಳ ಪ್ರಕಾರ, ಯುವಕನನ್ನು ಸಚಿವರ ಮಗನ ಸ್ನೇಹಿತ ವಿನಯ್ ಶ್ರೀವಾಸ್ತವ ಎಂದು ಗುರುತಿಸಲಾಗಿದ್ದು, ತಲೆಗೆ ಗುಂಡು ತಗುಲಿದೆ. ಗುಂಡು ಹಾರಿಸಿದ ಪಿಸ್ತೂಲ್ ವಿಕಾಸ್ ಹೆಸರಿನಲ್ಲಿ ನೋಂದಣಿಯಾಗಿದೆ.

ಈ ಸಂಬಂಧ ಮೂವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆ ನಡೆದಾಗ ಲಖನೌಗೆ ತೆರಳುವ ವಿಮಾನದಲ್ಲಿ ಇದ್ದದ್ದಾಗಿ ಸಚಿವರು ಹೇಳಿದ್ದಾರೆ. ವಿಕಾಸ್ ಸಹ ವಿಮಾನದಲ್ಲಿ ಕುಳಿತಿರುವ ಚಿತ್ರ ಮತ್ತು ಟಿಕೆಟ್ ಫೋಟೊವನ್ನು ಹಂಚಿಕೊಂಡಿದ್ದಾರೆ.

ಪಿಸ್ತೂಲ್ ಅನ್ನು ಮನೆಯಲ್ಲಿ ಬಿಟ್ಟು ಮಗ ದೆಹಲಿಗೆ ತೆರಳಿದ್ದಾನೆ. ಘಟನೆ ಬಗ್ಗೆ ನ್ಯಾಯಯುತ ಮತ್ತು ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಸಚಿವರು ಹೇಳಿದ್ದಾರೆ.

'ವಿನಯ್ ಗುರುವಾರ ರಾತ್ರಿ ಸಚಿವರ ಮಗನ ಮನೆಗೆ ಹೋಗಿದ್ದರು. ವಿನಯ್ ಹಾಗೂ ಅಲ್ಲಿದ್ದ ಇತರರ ನಡುವೆ ವಾಗ್ವಾದ ನಡೆಯಿತು. ನಂತರ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು' ಎಂದು ಮೃತನ ಸಹೋದರ ತಿಳಿಸಿದ್ದಾರೆ.

ಸಚಿವರ ಮಗ ವಿನಯ್ ಅವರಿಗೆ ಒಂದು ತುಂಡು ಭೂಮಿ ನೀಡಿದ್ದರು. ಅದರಲ್ಲಿ ವಿನಯ್ ಕಾರು ತೊಳೆಯುವ ಘಟಕ ಸ್ಥಾಪಿಸಲು ನಿರ್ಧರಿಸಿದ್ದರು. ವಿನಯ್ ಮತ್ತು ಇತರರ ನಡುವೆ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ವಾಗ್ವಾದ ನಡೆಯಿತು ಎಂದು ಮೂಲಗಳು ತಿಳಿಸಿವೆ.

'ಘಟನೆಯ ತನಿಖೆ ನಡೆಸುತ್ತಿದ್ದೇವೆ. ವಿನಯ್ ತಲೆಗೆ ಗುಂಡು ತಗುಲಿತ್ತು. ವಿಧಿವಿಜ್ಞಾನ ತಂಡ ಪುರಾವೆ ಸಂಗ್ರಹಿಸುತ್ತಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಸತ್– 20ಗೆ ಭಾರತದ ಆತಿಥ್ಯ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಬದ್ಧತೆಯ ರಾಜಕೀಯ ಬೆಂಬಲ ನಿರ್ಮಿಸುವ ಪ್ರಯತ್ನದ ಭಾಗವಾಗಿ ಜಿ20 ಗುಂಪಿನ ರಾಷ್ಟ್ರಗಳ ಸಂಸತ್ತಿನ ಸ್ಪೀಕರ್‌ಗಳ ಸಭೆಗೆ (ಸಂಸತ್–20) ಭಾರತ ಆತಿಥ್ಯ ವಹಿಸಲಿದೆ.


ನವದೆಹಲಿಯ ನೂತನ ಸಂಸತ್ ಭವನದಲ್ಲಿ ಈ ಸಭೆಯು ಅಕ್ಟೋಬರ್ 12ರಿಂದ 14ರವರೆಗೆ ನಡೆಯಲಿದೆ. ಸಭೆಯಲ್ಲಿ ಜಿ20 ಗುಂಪಿನ ರಾಷ್ಟ್ರಗಳ ಉಸ್ತುವಾರಿ ಅಧಿಕಾರಿಗಳು ಹಾಗೂ ಆಹ್ವಾನಿತ ರಾಷ್ಟ್ರಗಳ ಉಸ್ತುವಾರಿ ಅಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದು ಜಿ20 ಭಾರತದ ವಿಶೇಷ ಕಾರ್ಯದರ್ಶಿ ಮುಕ್ತೇಶ್ ಪರ್ದೇಶಿ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಎಲ್ಲ ಭಾರತೀಯರು ಹಿಂದೂಗಳು: ಭಾಗವತ್

ನಾಗ್ಪುರ (ಪಿಟಿಐ): 'ಭಾರತವು ಹಿಂದೂ ರಾಷ್ಟ್ರವಾಗಿದ್ದು, ಎಲ್ಲ ಭಾರತೀಯರು ಹಿಂದೂಗಳು. ಹಿಂದೂ ಎಂಬುದು ಎಲ್ಲ ಭಾರತೀಯರನ್ನು ಪ್ರತಿನಿಧಿಸುತ್ತದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

'ದೈನಿಕ ತರುಣ ಭಾರತ' ಪತ್ರಿಕೆಯ ಮಾತೃಸಂಸ್ಥೆ ಶ್ರೀನರಕೇಸರಿ ಪ್ರಕಾಶನ ಲಿಮಿಟೆಡ್‌ನ ನೂತನ ಕಟ್ಟಡ 'ಮಧುಕರ ಭವನ'ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಹಿಂದೂಸ್ತಾನ ಹಿಂದೂ ರಾಷ್ಟ್ರ. ಇದು ವಾಸ್ತವ. ಭಾರತದಲ್ಲಿ ವಾಸಿಸುತ್ತಿರುವವರೆಲ್ಲ ಹಿಂದೂ ಸಂಸ್ಕೃತಿ, ಹಿಂದೂ ಪೂರ್ವಿಕರು, ಹಿಂದೂ ನೆಲಕ್ಕೆ ನಂಟು ಹೊಂದಿರುವವರು. ಇದನ್ನು ಹೊರತುಪಡಿಸಿದಂತೆ ಮತ್ತೇನೂ ಇಲ್ಲ' ಎಂದರು.



ಭಾರತೀಯ ಸಿದ್ಧಾಂತಕ್ಕೆ ವಿಶ್ವದೆಲ್ಲೆಡೆ ಮಾನ್ಯತೆ ಇದೆ. ನಮ್ಮ ಸಿದ್ಧಾಂತ–ತತ್ವಗಳಿಗೆ ಪರ್ಯಾಯವಿಲ್ಲ

ಮೋಹನ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ

'ಕೆಲವರಿಗೆ ಇದು ಅರ್ಥವಾಗಿದೆ. ಇನ್ನೂ ಕೆಲವರಿಗೆ ಈ ವಿಷಯ ಅರ್ಥವಾಗಿದ್ದರೂ ಅನುಷ್ಠಾನಗೊಳಿಸುತ್ತಿಲ್ಲ. ಅವರ ಸ್ವಾರ್ಥವೇ ಇದಕ್ಕೆ ಕಾರಣ. ಮತ್ತೂ ಕೆಲವರು ಈ ವಿಚಾರವನ್ನು ಅರ್ಥ ಮಾಡಿಕೊಂಡಿಲ್ಲ ಇಲ್ಲವೇ ಮರೆತು ಬಿಟ್ಟಿದ್ದಾರೆ' ಎಂದರು.

'ವರದಿಗಾರಿಕೆ ನಿಷ್ಪಕ್ಷಪಾತದಿಂದ ಕೂಡಿರಬೇಕು. ನಾವು ನಂಬಿರುವ ಆದರ್ಶಗಳಿಗೆ ಬದ್ಧವಾಗಿ, ವಾಸ್ತವದ ಆಧಾರದಲ್ಲಿ ವರದಿ ಪ್ರಕಟಿಸಬೇಕು' ಎಂದು ಭಾಗವತ್ ಹೇಳಿದರು.

'ಪರಿಸರದ ಬಗ್ಗೆ ಕಾಳಜಿ, ಸ್ವದೇಶಿ ಕೇಂದ್ರಿತ ನಡೆ ನಮ್ಮದಾಗಬೇಕು. ಕೌಟುಂಬಿಕ ಮೌಲ್ಯಗಳು ಹಾಗೂ ಶಿಸ್ತಿಗೂ ಮಹತ್ವ ನೀಡಬೇಕು' ಎಂದರು.

ತಾಯಿಯ ಆತ್ಮಹತ್ಯೆಗೆ ಪ್ರಚೋದನೆ: ಮೂವರು ಮಕ್ಕಳ ಬಂಧನ

ಮೂಲ್ಕಿ (ದಕ್ಷಿಣ ಕನ್ನಡ): ತನ್ನ ಮೂವರು ಮಕ್ಕಳು ವಿಪರೀತ ಮದ್ಯಪಾನ ಮಾಡಿ ಮನೆಯಲ್ಲಿ ಜಗಳವಾಡುತ್ತಿದ್ದ ಕಾರಣದಿಂದ ಮನನೊಂದ ತಾಯಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಯಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಅವರ ಮೂವರು ಮಕ್ಕಳನ್ನು ಪೊಲೀಸರು ಬಂಧಿಸಿದ್ದಾರೆ.

ಮೂಲ್ಕಿ ಸಮೀಪದ ಕೆ.ಎಸ್. ರಾವ್ ನಗರದ ಲಿಂಗಪ್ಪಯ್ಯ ಕಾಡು ಕೊರಂಟಬೆಟ್ಟು ಕಾಲೊನಿ ನಿವಾಸಿ ಸುಮಿತ್ರ (44) ಮೃತಪಟ್ಟವರು. ಅವರ ಮಕ್ಕಳಾದ ಮಂಜುನಾಥ (25), ಪ್ರಹ್ಲಾದ ಯಾನೆ ಪ್ರಭು (19), ಸಂಜೀವ (22) ಅವರನ್ನು ಮೂಲ್ಕಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ಗುರುವಾರ ರಾತ್ರಿ 11.30ರ ಸಮಯದಲ್ಲಿ ಮದ್ಯದ ನಶೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ಜಗಳ ಮಾಡಿಕೊಂಡಿದ್ದಾರೆ. ಈ ಸಂದರ್ಭ ತಾಯಿ ಸುಮಿತ್ರ ನೊಂದು ಮನೆಯ ಕೋಣೆಯ ಪಕ್ಕಾಸಿಗೆ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎನ್‌ಸಿಇಆರ್‌ಟಿಗೆ ಡೀಮ್ಡ್ ವಿ.ವಿ ಸ್ಥಾನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿಗೆ (ಎನ್‌ಸಿಇಆರ್‌ಟಿ) ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಘೋಷಿಸಿದರು.

ಎನ್‌ಸಿಆರ್‌ಟಿಯ 63ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಸಚಿವರು ಈ ಘೋಷಣೆ ಮಾಡಿದರು.

ಶಾಲಾ ಶಿಕ್ಷಣದ ಉನ್ನತ ಸಂಸ್ಥೆಯಾಗಿ ಎನ್‌ಸಿಆರ್‌ಟಿಸಿ ಪಠ್ಯಕ್ರಮದ ಅಭಿವೃದ್ಧಿ, ಪಠ್ಯಬೋಧನೆಯ ಕಲಿಕಾ ಸಾಮಗ್ರಿಗಳ ಅಭಿವೃದ್ಧಿ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ.

11ಕ್ಕೆ ಖಾಸಗಿ ಸಾರಿಗೆ ಬಂದ್

ಬೆಂಗಳೂರು: ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿ ಮಾತಿಗೆ ತಪ್ಪಿದ ಸರ್ಕಾರದ ನಡೆಯನ್ನು ಖಂಡಿಸಿ, ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆ.11ರಂದು ಬೆಂಗಳೂರಿನಲ್ಲಿ ಸಾರಿಗೆ ಬಂದ್ ಮಾಡಲು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ನಿರ್ಧರಿಸಿದೆ.

'ಬೇಡಿಕೆ ಈಡೇರಿಸಲು ಜುಲೈ 27ರಂದು ಬಂದ್ ನಡೆಸಲು ಕರೆ ನೀಡಲಾಗಿತ್ತು. ಶಕ್ತಿ ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು. ಇಲ್ಲವೇ ರಸ್ತೆ ತೆರಿಗೆಯನ್ನು ಸಂಪೂರ್ಣ ರದ್ದು ಮಾಡಬೇಕು ಎಂಬುದೂ ಸೇರಿದಂತೆ 30 ಬೇಡಿಕೆಗಳನ್ನು ಮುಂದಿಟ್ಟಿದ್ದೆವು. ಅದರಲ್ಲಿ 28 ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಸಾರಿಗೆ ಸಚಿವರು ಭರವಸೆ ನೀಡಿದ್ದರು. ಹಾಗಾಗಿ ಬಂದ್ ಹಿಂಪಡೆಯಲಾಗಿತ್ತು. ಆದರೆ, ಸಾರಿಗೆ ಸಚಿವರು ವಚನ ಭ್ರಷ್ಟರಾಗಿ ನಮಗೆ ದ್ರೋಹ ಬಗೆದಿದ್ದಾರೆ' ಎಂದು ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ್ ಶರ್ಮ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

32 ಸಂಘಟನೆಗಳು ಸೇರಿ ಮುಷ್ಕರ ಹಮ್ಮಿಕೊಂಡಿವೆ. ಸೆ.10ರ ರಾತ್ರಿ 12ರಿಂದ ಸೆ.11ರ ರಾತ್ರಿ 12ರವರೆಗೆ ಮುಷ್ಕರ ಇರಲಿದೆ ಎಂದು ಮಾಹಿತಿ ನೀಡಿದರು.


KALAIPPULI S THANU
PRESENTS
V CREATIONS
HAPPY BIRTHDAY
BAADSHAH
KICHCHA SUDEEPA
KICHCHA
CREATIIONS
BAADSHAH
KICHCHA SUDEEPA IN
MAX
VIJAY KARTIKEYAA
SHEKAR CHANDRA B.AJANEESH LOKNATH SHIVAKUMAR J SR GANESH BAABU DHILIP SUBBARAYAN
MT SRIRAM N.MAHENDRAN MOURYA MANJUNATH MICHAEL ARUN BHARATH SAGAR PRAVEEN D PERUMAL SELVAM
NELLAI V.SHANMUGAM RIYAZ K.AHMED KAANI STUDIO
KANNADA - TAMIL - TELUGU - MALAYALAM - HINDI
KRG

ಗುಂಡುಹಾರಿಸಿ ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಪ್ರಭುನಾಥ್ ಸಿಂಗ್ ಅಪರಾಧಿ ಎಂದು ಘೋಷಿಸಿದ 'ಸುಪ್ರೀಂ'

ಜೋಡಿ ಕೊಲೆ: ಮಾಜಿ ಸಂಸದನಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): ಜೋಡಿ ಕೊಲೆಗೆ ಸಂಬಂಧಿಸಿದ ಪ್ರಕರಣದಲ್ಲಿ ಬಿಹಾರದ ಮಹಾರಾಜಗಂಜ್‌ನ ಮಾಜಿ ಸಂಸದ ಪ್ರಭುನಾಥ್ ಸಿಂಗ್ ಅವರಿಗೆ ಶುಕ್ರವಾರ ಸುಪ್ರೀಂ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.

1995ರಲ್ಲಿ ಬಿಹಾರದ ವಿಧಾನಸಭಾ ಚುನಾವಣೆಯ ಮತದಾನ ದಿನದಂದೇ ಸರಣ್ ಜಿಲ್ಲೆಯಲ್ಲಿ ಇಬ್ಬರನ್ನು ಕೊಲೆ ಮಾಡಲಾಗಿತ್ತು.

ಕೊಲೆ ಪ್ರಕರಣದಲ್ಲಿ ಪ್ರಭುನಾಥ್ ಸಿಂಗ್ ಅವರನ್ನು ಖುಲಾಸೆಗೊಳಿಸಿದ್ದ ವಿಚಾರಣಾ ನ್ಯಾಯಾಲಯ ಮತ್ತು ಪಟ್ನಾ ಹೈಕೋರ್ಟ್‌ನ ಆದೇಶಗಳನ್ನು ಆಗಸ್ಟ್ 18ರಂದು ರದ್ದುಗೊಳಿಸಿದ್ದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎ.ಎಸ್. ಓಕಾ ಮತ್ತು ವಿಕ್ರಮ್ ನಾಥ್ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು, ಸಿಂಗ್ ಅವರನ್ನು ಅಪರಾಧಿ ಎಂದು ತೀರ್ಪು ನೀಡಿತ್ತು.

ಅಪರಾಧಿಗೆ ನೀಡಬೇಕಾದ ಶಿಕ್ಷೆಯ ಪ್ರಮಾಣದ ಬಗ್ಗೆ ವಾದಗಳನ್ನು ಆಲಿಸಲು ಶುಕ್ರವಾರ ನಿಗದಿಪಡಿಸಲಾಗಿತ್ತು. ಈ ವೇಳೆ 'ಈ ಹಿಂದೆ ಇಂಥ ಪ್ರಕರಣವನ್ನು ಎಂದೂ ನೋಡಿರಲಿಲ್ಲ' ಎಂದು ನ್ಯಾಯಪೀಠವು ಹೇಳಿದೆ.

'ಜೋಡಿ ಕೊಲೆಯಲ್ಲಿ ಹತ್ಯೆಗೀಡಾದ ಎರಡೂ ಕುಟುಂಬದವರಿಗೆ ತಲಾ ₹ 10 ಲಕ್ಷ ಹಾಗೂ ಗಾಯಗೊಂಡ ಐವರಿಗೆ ತಲಾ ₹ 5 ಲಕ್ಷ ನೀಡಬೇಕು' ಎಂದು ಅಪರಾಧಿ ಸಿಂಗ್ ಹಾಗೂ ಬಿಹಾರ ಸರ್ಕಾರಕ್ಕೆ ಪೀಠವು ನಿರ್ದೇಶನ ನೀಡಿದೆ.

ಶಿಕ್ಷೆಯ ಪ್ರಮಾಣ ನಿಗದಿಪಡಿಸುವಾಗ ನ್ಯಾಯಪೀಠವು, 'ಕೇವಲ ಎರಡೇ ಆಯ್ಕೆಗಳಿವೆ. ಮೂರನೇ ಆಯ್ಕೆ ಎಂಬುದಿಲ್ಲ. ಒಂದು ಜೀವಾವಧಿ ಶಿಕ್ಷೆ, ಮತ್ತೊಂದು ಮರಣದಂಡನೆ' ಎಂದು ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಸಿಂಗ್ ಪರ ವಕೀಲ, 'ಮರಣದಂಡನೆಗೆ ಪರಿಗಣಿಸಬಹುದಾದ ಪ್ರಕರಣವು ಇದಲ್ಲ. ಅಧೀನ ನ್ಯಾಯಾಲಯಗಳ ಖುಲಾಸೆ ಆದೇಶಗಳನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿ, ಸಿಂಗ್ ಅವರನ್ನು ಅಪರಾಧಿ ಎಂದು ಘೋಷಿಸಿದೆ. ಈ ಘೋಷಣೆಯನ್ನು ನ್ಯಾಯಾಲಯವು ಮರು ಪರಿಶೀಲಿಸಬೇಕು ಎಂದು ಅರ್ಜಿ ಸಲ್ಲಿಸಲಾಗಿದೆ' ಎಂದು ಅಪರಾಧಿ ಪರ ವಕೀಲರು ಮನವಿ ಮಾಡಿದರು.

ಇದನ್ನು ಪರಿಗಣಿಸುವುದಾಗಿ ನ್ಯಾಯಪೀಠವು ತಿಳಿಸಿತು.

'ಇಂಥ ಪ್ರಕರಣವು, ನಮ್ಮ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ನೋವಿನ ಪ್ರಕರಣವಾಗಿದೆ' ಎಂದಿರುವ ನ್ಯಾಯಪೀಠವು, 'ಕ್ರಿಮಿನಲ್ ವಿಚಾರಣೆಯಲ್ಲಿ ಮೂರು ಪ್ರಮುಖ ಪಾಲುದಾರರಾದ ತನಿಖಾಧಿಕಾರಿ, ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ನ್ಯಾಯಾಂಗ ವ್ಯವಸ್ಥೆ ಈ ಮೂವರು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಭಾಯಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಸಿಂಗ್ ಅವರ ವಿರುದ್ಧದ ಸಾಕ್ಷ್ಯವನ್ನು ಅಳಿಸಿಹಾಕಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುವಲ್ಲಿ ಈ ಮೂವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂಬುದರಲ್ಲಿ ಯಾವುದೇ ಒಂದು ಸಣ್ಣ ಅನುಮಾನವೂ ಇಲ್ಲ' ಎಂಬುದನ್ನು ಗಮನಿಸಿದೆ.

ಏನಿದು ಪ್ರಕರಣ?: 1995ರ ಮಾರ್ಚ್ 25ರಂದು ಬಿಹಾರ ವಿಧಾನಸಭಾ ಚುನಾವಣೆಯ ಮತದಾನದ ದಿನ. ಸರಣ್ ಜಿಲ್ಲೆಯ ಚಾಪ್ರಾ ಗ್ರಾಮದ ದರೋಗಾ ರೈ ಮತ್ತು ರಾಜೇಂದ್ರ ರೈ ತಮ್ಮ ಗ್ರಾಮದ ಇತರ ಎಂಟ್ಹತ್ತು ಜನರೊಂದಿಗೆ ಮತದಾನ ಮುಗಿಸಿ ವಾಪಸ್ ಬರುತ್ತಿದ್ದರು. ಅದೇ ದಾರಿಯಲ್ಲಿ ಕಾರಿನಲ್ಲಿ ತೆರಳುತ್ತಿದ್ದ ಬಿಹಾರ ಪೀಪಲ್ಸ್ ಪಾರ್ಟಿಯ ಅಭ್ಯರ್ಥಿ ಪ್ರಭುನಾಥ ಸಿಂಗ್, ಕಾರು ನಿಲ್ಲಿಸಿ ರೈ ಮತ್ತು ಗ್ರಾಮಸ್ಥರನ್ನು ಯಾರಿಗೆ ಮತ ಚಲಾಯಿಸಿದಿರಿ ಎಂದು ವಿಚಾರಿಸುತ್ತಾರೆ.

ಬೇರೆ ರಾಜಕೀಯ ಪಕ್ಷಕ್ಕೆ ಮತ ಚಲಾಯಿಸಿರುವುದಾಗಿ ರೈ ಹೇಳಿದಾಗ, ಸಿಂಗ್ ತಮ್ಮ ರೈಫಲ್‌ನಿಂದ ಅವರತ್ತ ಗುಂಡು ಹಾರಿಸುತ್ತಾರೆ. ಈ ವೇಳೆ ದರೋಗಾ ರೈ ಮತ್ತು ರಾಜೇಂದ್ರ ರೈ ಸೇರಿದಂತೆ ಮೂವರು ಗಾಯಗೊಳ್ಳುತ್ತಾರೆ. ಚಿಕಿತ್ಸೆ ಸಮಯದಲ್ಲಿ ದರೋಗಾ ಮತ್ತು ರಾಜೇಂದ್ರ ಸಾವೀಗೀಡಾಗುತ್ತಾರೆ. ಆದರೆ, ಸಾಯುವ ಮುನ್ನ ರಾಜೇಂದ್ರ ಅವರು ನೀಡಿದ್ದ ಹೇಳಿಕೆಯಿಂದ ಪ್ರಭುನಾಥ್ ಸಿಂಗ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಲಡಾಕ್: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ಸೆ. 10ರಂದು ಲಡಾಕ್ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿಯ (ಎಲ್‌ಎಎಚ್‌ಡಿಸಿ) ಚುನಾವಣೆಯಲ್ಲಿ ತನ್ನ ಅಭ್ಯರ್ಥಿಗಳಿಗೆ 'ನೇಗಿಲು' ಚಿಹ್ನೆಯನ್ನು ನಿರಾಕರಿಸಿರುವುದನ್ನು ಪ್ರಶ್ನಿಸಿ, ನ್ಯಾಷನಲ್ ಕಾನ್ಫರೆನ್ಸ್ ಸಲ್ಲಿಸಿದ ಮನವಿಯ ಮೇಲಿನ ತೀರ್ಪನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕಾಯ್ದಿರಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹಸನುದ್ದೀನ್ ಅಮಾನುಲ್ಲಾ ಅವರನ್ನೊಳಗೊಂಡ ನ್ಯಾಯಪೀಠವು, ಕೇಂದ್ರಾಡಳಿತ ಪ್ರದೇಶದ ಆಡಳಿತ ಹಾಗೂ ರಾಜಕೀಯ ಪಕ್ಷಗಳ ಪರ ವಕೀಲರ ವಾದಗಳನ್ನು ಆಲಿಸಿ, ಸೆ. 6ರಂದು ತೀರ್ಪು ನೀಡುವುದಾಗಿ ಹೇಳಿದೆ.

ಜ್ಞಾನವಾಪಿ ಸಮೀಕ್ಷೆ: ಇಂದು ವರದಿ ಸಲ್ಲಿಕೆ

ಲಖನೌ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಆಗಸ್ಟ್ 4ರಿಂದ ಕೈಗೊಂಡಿದ್ದ ವಿವಾದಿತ ಜ್ಞಾನವಾಪಿ ಮಸೀದಿ ಸಂಕೀರ್ಣದ ಸಮೀಕ್ಷೆಯು ಶುಕ್ರವಾರ ಪೂರ್ಣಗೊಂಡಿದ್ದು, ಶನಿವಾರ ಸಮೀಕ್ಷಾ ವರದಿಯನ್ನು ವಾರಾಣಸಿಯ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಸತ್ಯೇಂದ್ರ ಜೈನ್ ವಿಚಾರಣೆಯಿಂದ ಹಿಂದಕ್ಕೆ ಸರಿದ ನ್ಯಾ. ಪಿ.ಕೆ. ಮಿಶ್ರಾ



ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಸಚಿವ ಸತ್ಯೇಂದ್ರ ಜೈನ್ ಅವರ ಮಧ್ಯಂತರ ಜಾಮೀನು ಅರ್ಜಿ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಪಿ.ಕೆ. ಮಿಶ್ರಾ ಅವರು ಶುಕ್ರವಾರ ಹಿಂದಕ್ಕೆ ಸರಿದಿದ್ದಾರೆ.

ವಿಚಾರಣೆಯಿಂದ ಹಿಂದೆ ಸರಿದಿರುವ ಹಿಂದಿನ ಕಾರಣವನ್ನು ಅವರು ತಿಳಿಸಿಲ್ಲ. ಜಾರಿ ನಿರ್ದೇಶನಾಲಯವು (ಇ.ಡಿ) ಕಳೆದ ವರ್ಷ ಮೇ 30ರಂದು ಸತ್ಯೇಂದ್ರ ಜೈನ್ ಅವರನ್ನು ಬಂಧಿಸಿತ್ತು.

'ವಿಶೇಷ ಸ್ಥಾನಮಾನ: ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ನಿರ್ಧಾರ'

ನವದೆಹಲಿ (ಪಿಟಿಐ): 'ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಹಿಂಪಡೆಯಲಾಗಿದೆ. ಇದು ಕೇವಲ ಆಡಳಿತಾತ್ಮಕ ನಿರ್ಧಾರವಷ್ಟೇ ಆಗಿರಲಿಲ್ಲ' ಎಂದು ಹಿರಿಯ ವಕೀಲ ರಾಕೇಶ್ ದ್ವಿವೇದಿ ಸುಪ್ರೀಂಕೋರ್ಟ್‌ಗೆ ಶುಕ್ರವಾರ ತಿಳಿಸಿದರು.

ಈ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿದ್ದ ನ್ಯಾಯಪೀಠ ನಡೆಸಿತು.

ಅರ್ಜಿದಾರ ಅಶ್ವಿನಿ ಉಪಾಧ್ಯಾಯ ಪರ ವಾದ ಮಂಡಿಸಿದ ಅವರು, 'ವಿಶೇಷ ಸ್ಥಾನಮಾನ ಹಿಂಪಡೆಯುವ ಕುರಿತು ತೀರ್ಮಾನ ಕೈಗೊಳ್ಳುವಾಗ ಜಮ್ಮು–ಕಾಶ್ಮೀರದ ಸಂಸದರನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಿತ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಸಂವಿಧಾನದ 370ನೇ ವಿಧಿಯಲ್ಲಿನ 'ಶಿಫಾರಸು' ಎಂಬ ಪದವು ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಮಿತಿ ಒಪ್ಪಿಗೆ ಬೇಕು ಎಂದು ಅರ್ಥವೇ ಹೊರತು, ಒಪ್ಪಿಗೆ ಅಗತ್ಯ ಎಂಬುದನ್ನು ಸೂಚಿಸುವುದಿಲ್ಲ' ಎಂದೂ ಹೇಳಿದರು.

'ಭಾರತದ ಸಂವಿಧಾನ ರಚನಾ ಸಮಿತಿಗೆ ಇದ್ದಂಥ ಸ್ವಾತಂತ್ರ್ಯವನ್ನು ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಮಿತಿ ಹೊಂದಿರಲಿಲ್ಲ' ಎಂದು ಹೇಳುವ ಮೂಲಕ ಎರಡು ಸಂವಿಧಾನ ರಚನಾ ಸಮಿತಿಗಳ ನಡುವಿನ ವ್ಯತ್ಯಾಸವನ್ನು ದ್ವಿವೇದಿ ಅವರು ನ್ಯಾಯಪೀಠದ ಗಮನಕ್ಕೆ ತರುವ ಪ್ರಯತ್ನ ಮಾಡಿದರು.

ಇತರ ಕೆಲ ಅರ್ಜಿದಾರರ ಪರ ವಕೀಲರ ವಾದಗಳನ್ನು ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಸೆಪ್ಟೆಂಬರ್ 4ಕ್ಕೆ ಮುಂದೂಡಿತು.

ನವಲಖಾಗೆ ಗೃಹಬಂಧನ: ಆದೇಶ ಕಾಯ್ದಿರಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ



ಗೌತಮ್ ನವಲಖಾ

ನವದೆಹಲಿ: ಭೀಮಾ ಕೋರೆಗಾಂವ ಪ್ರಕರಣದ ಆರೋಪಿ ಗೌತಮ್ ನವಲಖಾ ಅವರನ್ನು ಗೃಹಬಂಧನದಲ್ಲಿರಿಸಲು ಅನುಮತಿ ನೀಡಿ ಆದೇಶಿಸಿರುವುದು ತಪ್ಪು ದೃಷ್ಟಾಂತವಾಗಲಿದೆ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

2022ರ ನವೆಂಬರ್ 10 ರಂದು ನ್ಯಾಯಮೂರ್ತಿ ಕೆ. ಎಂ. ಜೋಸೆಫ್ (ನಿವೃತ್ತ) ನೇತೃತ್ವದ ಪೀಠವು ನವಲಖಾ ಅವರ ಆರೋಗ್ಯ ಹದಗೆಡುತ್ತಿರುವುದನ್ನು ಪರಿಗಣಿಸಿ ಗೃಹಬಂಧನದಲ್ಲಿಡಲು ಅನುಮತಿ ನೀಡಿತ್ತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ನೇತೃತ್ವದ ಎನ್‌ಐಎ, ಇದು ಅಸಾಮಾನ್ಯ ಮತ್ತು ಅನಗತ್ಯ ಆದೇಶ ಎಂದು ವಾದಿಸುತ್ತಿದ್ದಂತೆ, ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಜೆ.ಬಿ. ಪಾರ್ದೀವಾಲಾ ಅವರ ನ್ಯಾಯಪೀಠ, 'ಮೇಲ್ನೋಟಕ್ಕೆ ನಮಗೂ ಸಂಶಯ ಬರುತ್ತದೆ. ಈ ಬಗ್ಗೆ ಸುದೀರ್ಘ ಆದೇಶ ಹೊರಡಿಸಲಾಗಿದೆ. ಇಂತಹ ಆದೇಶ ಹೊರಡಿಸಲು ಈ ಪ್ರಕರಣ ಯೋಗ್ಯವೇ ಎಂಬುದನ್ನು ಪರಿಗಣಿಸಿರುವುದು ಕೂಡ ತಪ್ಪು ದೃಷ್ಟಾಂತವಾಗಲಿದೆ' ಎಂದು ಮೌಖಿಕವಾಗಿ ಪೀಠ ಹೇಳಿತು.

ನವಲಖಾ ಅವರನ್ನು ಗೃಹಬಂಧನದಲ್ಲಿ ಇರಿಸುವುದು ಅನಗತ್ಯ. ಏಕೆಂದರೆ ಆರಂಭದಲ್ಲಿ ಆರೋಗ್ಯ ಕಾರಣಕ್ಕೆ ಅವಕಾಶ ನೀಡಲಾಯಿತು. ಭದ್ರತೆ ಮತ್ತು ಕಣ್ಗಾವಲಿಗಾಗಿ ಅವರು ಒಂದು ಕೋಟಿ ರೂಪಾಯಿ ಪಾವತಿಸಬೇಕಾಗಿದೆ ಎಂದು ಅವರು ಹೇಳಿದರು.

ನವಲಖಾ ಪರ ವಕೀಲೆ ನಿತ್ಯಾ ರಾಮಕೃಷ್ಣನ್, ಈಗಾಗಲೇ ಎಂಟು ಲಕ್ಷ ರೂಪಾಯಿಗಳನ್ನು ಠೇವಣಿ ಇಡಲಾಗಿದೆ ಎಂದರು. ನವಲಖಾ ಅವರನ್ನು ಬೇರೆಡೆಗೆ ಸ್ಥಳಾಂತರಿಸುವ ವಿಷಯವನ್ನು ನ್ಯಾಯಾಲಯ ಎಂಟು ವಾರಗಳವರೆಗೆ ಮುಂದೂಡಿದೆ.

'ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ದೇಶದಾದ್ಯಂತ ಅನ್ವಯ'

ಮುಂಬೈ (ಪಿಟಿಐ): ಪರಿಶಿಷ್ಟ ಜಾತಿ ಅಥವಾ ಪಂಗಡದವರ ಮೇಲೆ ದೇಶದ ಯಾವುದೇ ಭಾಗದಲ್ಲಿ ದೌರ್ಜನ್ಯ ನಡೆದರೂ, ಎಸ್‌ಸಿ,ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅನ್ವಯವಾಗುತ್ತದೆ. ಕಾಯ್ದೆಯಡಿ ರಕ್ಷಣೆ ಪಡೆಯಲು ಆತ ಅರ್ಹ ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ.

ದೇಶದ ಯಾವುದೇ ಭಾಗದಲ್ಲಿ ಪರಿಶಿಷ್ಟ ವ್ಯಕ್ತಿ ಮೇಲೆ ದೌರ್ಜನ್ಯ ನಡೆದಿರಲಿ, ಕೃತ್ಯ ನಡೆದ ರಾಜ್ಯದಲ್ಲಿ ಆತನನ್ನು ಎಸ್‌ಸಿ ಅಥವಾ ಎಸ್‌ಟಿ ಎಂದು ಪರಿಗಣಿಸದಿದ್ದರೂ ಕಾಯ್ದೆಯಡಿ ಆ ವ್ಯಕ್ತಿಗೆ ರಕ್ಷಣೆ ನೀಡಬೇಕು ಎಂದೂ ಹೈಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ, ಭಾರತಿ ಡಾಂಗ್ರೆ ಮತ್ತು ಎನ್.ಜೆ.ಜಮಾದಾರ್ ಅವರಿದ್ದ ಪೂರ್ಣಪೀಠವು ಈ ತೀರ್ಪು ನೀಡಿದೆ. ವ್ಯಕ್ತಿಯನ್ನು ಪರಿಶಿಷ್ಟ ಎಂಬುದಾಗಿ ಘೋಷಿಸಿರುವ ರಾಜ್ಯಕ್ಕೆ ಮಾತ್ರ ಈ ಕಾಯ್ದೆ ಸೀಮಿತಗೊಳಿಸಿದಲ್ಲಿ ಕಾಯ್ದೆ ಉದ್ದೇಶವೇ ವ್ಯರ್ಥವಾಗಲಿದೆ ಎಂದು ಪೀಠ ಪ್ರತಿಪಾದಿಸಿದೆ.

'ಎಸ್‌ಸಿ, ಎಸ್‌ಟಿ ಜನರನ್ನು ಅವರ ವಿರುದ್ಧ ನಡೆಯುವ ದೌರ್ಜನ್ಯದಿಂದ ರಕ್ಷಿಸಲು, ಪ್ರಬಲ ಜಾತಿಯವರಿಂದಾಗುವ ಅವಮಾನ, ಕಿರುಕುಳದಿಂದ ತಪ್ಪಿಸುವ ಸಲುವಾಗಿ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ' ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

'ನಿರ್ದಿಷ್ಟ ಜಾತಿ ಅಥವಾ ಗುಂಪಿಗೆ ಸೇರಿದ ದಂಪತಿಗೆ ಜನಿಸುವ ವ್ಯಕ್ತಿಗೆ ಸ್ವಯಂಚಾಲಿತವಾಗಿಯೇ ಆ ಜಾತಿ ಅಂಟಿಕೊಳ್ಳುತ್ತದೆ. ಈ ವಿಷಯದಲ್ಲಿ ವ್ಯಕ್ತಿಗೆ ಆಯ್ಕೆ ಇಲ್ಲ. ಜಾತಿಯ ಹಣೆಪಟ್ಟಿ ಕಳಚಿಕೊಳ್ಳಲು ವ್ಯಕ್ತಿಗೆ ಸಾಧ್ಯವಾಗುವುದಿಲ್ಲ ' ಎಂದೂ ಪೀಠ ಹೇಳಿದೆ.

ಇದಕ್ಕೂ ಮುನ್ನ, ಅರ್ಜಿದಾರರೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಅಭಿನವ್ ಚಂದ್ರಚೂಡ್, 'ಸಂತ್ರಸ್ತನು ತನ್ನ ಮೂಲ ರಾಜ್ಯದಿಂದ ವಲಸೆ ಹೋದಾಗ ಆತನ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಎಸ್‌ಸಿ,ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅನ್ವಯಿಸುವುದಿಲ್ಲ' ಎಂದು ವಾದಿಸಿದ್ದರು.

52 ಅಧಿಕಾರಿಗಳ ವಿರುದ್ಧ ಕ್ರಮ: ಕೃಷ್ಣ ಬೈರೇಗೌಡ

ಬೆಂಗಳೂರು:ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವಿರುದ್ಧ5 ರಿಂದ 7 ವರ್ಷಗಳ ಕಾಲ ಸಚಿವಾಲಯದಲ್ಲೇ ಬಾಕಿ ಇದ್ದ ಸುಮಾರು 108 ಶಿಸ್ತು ಕ್ರಮ ಕಡತಗಳ ಪೈಕಿ 52 ಮಂದಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿರುವ ಅವರು, 4 ಮಂದಿಯ ವಾರ್ಷಿಕ ವೇತನ ಬಡ್ತಿ ತಡೆಹಿಡಿಯಲಾಗಿದೆ. ಶಿಸ್ತು ಕ್ರಮ ಜರುಗಿಸುವ ಮುನ್ನವೇ ನಿವೃತ್ತಿಗೊಂಡಿರುವ 6 ಮಂದಿಯ ನಿವೃತ್ತಿ ವೇತನದಲ್ಲಿ ಶೇ 5 ರಿಂದ ಶೇ 10 ರಷ್ಟು ಕಡಿತ ಮಾಡಲಾಗಿದೆ. 15 ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸಲಾಗಿದೆ. 30 ಪ್ರಕರಣಗಳನ್ನು ಇಲಾಖೆ ವಿಚಾರಣೆ ಕೈಗೊಳ್ಳಲು ಶಿಫಾರಸು ಮಾಡಲಾಗಿದೆ. 1 ಪ್ರಕರಣದಲ್ಲಿ ವಾಗ್ದಂಡನೆ ವಿಧಿಸಲಾಗಿದೆ ಎಂದಿದ್ದಾರೆ.

ಲೋಕಾಯುಕ್ತ ತನಿಖಾ ವರದಿ ಶಿಫಾರಸಿನಂತೆ ಉಳಿದ ಪ್ರಕರಣಗಳಲ್ಲಿ ಅಧಿಕಾರಿ, ನೌಕರಿಗೆ ಮೇಲಿನ ಆರೋಪಗಳು ಸಾಬೀತಾಗದ ಕಾರಣ ಅವರನ್ನು ಪ್ರಕರಣದಿಂದ ಖುಲಾಸೆಗೊಳಿಸಲಾಗಿದೆ ಎಂದರು.

ನಟ ಗಣೇಶ್ ಮನೆ ನಿರ್ಮಾಣಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿ ಚಿತ್ರನಟ ಗಣೇಶ್ ತಮ್ಮ ವಾಸದ ಮನೆ ನಿರ್ಮಾಣ ಮುಂದುವರಿಸಲು ಹೈಕೋರ್ಟ್ ಅನುಮತಿ ನೀಡಿದೆ. ಆದರೆ, 'ಈ ಅನುಮತಿಯು ಅರ್ಜಿ ವಿಚಾರಣೆ ನಂತರ ಹೊರಹೊಮ್ಮುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಆದೇಶಿಸಿದೆ.

ಈ ಕುರಿತಂತೆ ಗಣೇಶ್ ಕಿಶನ್ ಬಿನ್ ಕಿಶನ್ ಅಲಿಯಾಸ್ ನಟ ಗಣೇಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜೀವನ ನಡೆಸುವುದಕ್ಕಾಗಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಬಹುದು ಎಂದು ತಿಳಿಸಿದೆ. ಆದರೆ, ವಾಣಿಜ್ಯ ಬಳಕೆಗೆ ಅವಕಾಶವಿಲ್ಲ. ಈ ಪ್ರಕರಣದಲ್ಲಿ, ಅರ್ಜಿದಾರರು ವಾಸದ ಮನೆ ನಿರ್ಮಾಣ ಮಾಡುತ್ತಿದ್ದಾರೆ. ಹೀಗಾಗಿ ಮನೆ ನಿರ್ಮಾಣಕ್ಕೆ ಅನುಮತಿ ನೀಡಬೇಕು. ಒಂದು ವೇಳೆ ಅಂತಿಮ ಆದೇಶ ಗಣೇಶ್ ಅವರ ವಿರುದ್ಧ ಬಂದಲ್ಲಿ ನ್ಯಾಯಾಲಯದ ಆದೇಶಕ್ಕೆ ಬದ್ಧವಾಗಿರುತ್ತಾರೆ' ಎಂಬ ಭರವಸೆ ನೀಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಅರ್ಜಿಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ತಿಳಿಸಿತು.

ಪ್ರಕರಣವೇನು?: 'ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಳಿ ಗ್ರಾಮದ ಸರ್ವೆ ನಂಬರ್ 105 ರಲ್ಲಿ ಗಣೇಶ್ 1 ಎಕರೆ 24 ಗುಂಟೆ ಜಮೀನು ಖರೀದಿಸಿದ್ದಾರೆ. ಈ ಸ್ವತ್ತಿನಲ್ಲಿ ಅವರು ಜೆಸಿಬಿ ಯಂತ್ರದ ಸಹಾಯದಿಂದ ಭೂಮಿಯನ್ನು ಸಮತಟ್ಟು ಮಾಡಿ, ಬೃಹತ್ ಕಟ್ಟಡ ನಿರ್ಮಾಣಕ್ಕೆ ತಯಾರಿ ನಡೆಸುತ್ತಿರುವುದು ಕಂಡು ಬಂದಿದೆ' ಎಂದು ಆಕ್ಷೇಪಿಸಿದ್ದ ಅರಣ್ಯ ಅಧಿಕಾರಿಗಳು, 'ಷರತ್ತುಗಳನ್ನು ಉಲ್ಲಂಘಿಸಿ ಬೃಹತ್ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ತಯಾರಿ ನಡೆಸುತ್ತಿರುವುದರಿಂದ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು' ಎಂದು ಆಗ್ರಹಿಸಿದ್ದರು.

ಈ ಸಂಬಂಧ ಬಂಡೀಪುರ ಸೂಕ್ಷ್ಮ ಪರಿಸರ ವಲಯದ ಉಸ್ತುವಾರಿ ಸಮಿತಿ, ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕರು 2023ರ ಆಗಸ್ಟ್ 14ರಂದು ಗಣೇಶ್‌ಗೆ ನೋಟಿಸ್ ನೀಡಿದ್ದರು.

ಈ ನೋಟಿಸ್ ಅನ್ನು ಪ್ರಶ್ನಿಸಿ ಗಣೇಶ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೇವು ಹಗರಣ: 35 ಮಂದಿಗೆ ಜೈಲು

ರಾಂಚಿ (ಜಾರ್ಖಂಡ್) (ಪಿಟಿಐ): ಮೇವು ಹಗರಣದ 35 ಮಂದಿ ಅಪರಾಧಿಗಳಿಗೆ ಇಲ್ಲಿನ ವಿಶೇಷ ಸಿಬಿಐ ನ್ಯಾಯಾಲಯವು ಶುಕ್ರವಾರ ನಾಲ್ಕು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹75 ಸಾವಿರದಿಂದ ₹ 1ಕೋಟಿ ವರೆಗೆ ದಂಡ ವಿಧಿಸಿದೆ.

ಡೊರಾಂಡಾ ಖಜಾನೆಯಿಂದ ₹36.59 ಕೋಟಿ ಹಿಂಪಡೆದು ವಂಚಿಸಿದ ಪ್ರಕರಣದ ಜೊತೆ ನಂಟು ಹೊಂದಿರುವ ಈ ಪ್ರಕರಣದಲ್ಲಿ ಇವರು ಅಪರಾಧಿಗಳೆಂದು ನ್ಯಾಯಾಲಯವು ಕಳೆದ ವಾರ ಘೋಷಿಸಿತ್ತು. ಸಿಬಿಐ ನ್ಯಾಯಾಧೀಶರಾದ ವಿಶಾಲ್ ಶ್ರೀವಾಸ್ತವ್ ಅವರು ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ್ದಾರೆ.

ರಾಜ್ಯದ 2023ರ ಅಪರಾಧ ಪ್ರಕರಣಗಳು • ವಾಹನ ಕಳ್ಳತನವೂ ಹೆಚ್ಚಳ

6 ತಿಂಗಳಲ್ಲಿ 650 ಕೊಲೆ, 1,857 ಗಲಭೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2023ರ ಜನವರಿಯಿಂದ ಜೂನ್‌ವರೆಗೆ 650 ಕೊಲೆಗಳು ನಡೆದಿದ್ದು, 1,857 ಗಲಭೆ ಪ್ರಕರಣಗಳು ದಾಖಲಾಗಿವೆ. ಈ ಅವಧಿಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳೂ ಹೆಚ್ಚಾಗಿದೆ.

ರಾಜ್ಯ ಪೊಲೀಸ್ ಇಲಾಖೆ ಅಪರಾಧ ಕೃತ್ಯಗಳ ಅಂಕಿ– ಅಂಶ ಬಿಡುಗಡೆ ಮಾಡಿದೆ. 2022ಕ್ಕೆ ಹೋಲಿಸಿದರೆ 2023 ರಲ್ಲಿ ಅಪರಾಧಗಳು ಸ್ವಲ್ಪ ಮಟ್ಟಿಗೆ ಇಳಿಕೆಯಾಗಿವೆ.

'2022ರಲ್ಲಿ ಜನವರಿಯಿಂದ ಜೂನ್‌ವರೆಗೆ 715 ಕೊಲೆಗಳು ನಡೆದಿದ್ದವು. ಆದರೆ, ಈ ವರ್ಷ 650 ಕೊಲೆಗಳು ಆಗಿವೆ. ಆಸ್ತಿ, ಚಿನ್ನಾಭರಣ, ಶೀಲ ಶಂಕೆ, ವೈಯಕ್ತಿಕ ದ್ವೇಷ ಹಾಗೂ ಇತರೆ ಕಾರಣಗಳಿಗಾಗಿ ಕೊಲೆಗಳು ನಡೆದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಜನಸಂಖ್ಯೆ ಹೆಚ್ಚಿರುವ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೆಚ್ಚು ಕೊಲೆಗಳು ನಡೆದಿವೆ' ಎಂದರು.

ಗಲಭೆಗಳಿಂದ ಶಾಂತಿಗೆ ಧಕ್ಕೆ: 'ಗಲಭೆ ಸೃಷ್ಟಿಸಿ ಸಾರ್ವಜನಿಕ ಶಾಂತಿಗೆ ಧಕ್ಕೆ ತಂದ ಹಾಗೂ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪದಡಿ 1,857 ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಪ್ರತಿಭಟನೆ ಹಾಗೂ ಇತರೆ ಕಾರಣಕ್ಕಾಗಿ ಗುಂಪು ಸೇರಿದ್ದ ಜನ, ಗಲಭೆ ಸೃಷ್ಟಿಸಿದ್ದರು. ಗಲಭೆ ಪ್ರಕರಣ ಜೊತೆಯಲ್ಲಿ ಬೇರೆ ಬೇರೆ ಪ್ರಕರಣಗಳೂ ದಾಖಲಾಗಿವೆ' ಎಂದು ಹೇಳಿದರು.

5,766 ವಾಹನ ಕಳ್ಳತನ: '2023ರಲ್ಲಿ ಜನವರಿಯಿಂದ ಜೂನ್‌ವರೆಗೆ 5,766 ವಾಹನಗಳು ಕಳ್ಳತನ ಆಗಿವೆ. 2022ರಲ್ಲಿ ಆರು ತಿಂಗಳಿನಲ್ಲಿ 5,952 ವಾಹನಗಳು ಕಳ್ಳತನವಾಗಿದ್ದವು' ಎಂದು ತಿಳಿಸಿದರು.

2023ರ ಅಂಕಿ–ಅಂಶ

289 ಅತ್ಯಾಚಾರ

1,420 ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ

9,349 ಸೈಬರ್ ಅಪರಾಧಗಳು

2023ರಲ್ಲಿ ದಾಖಲಾದ ಪ್ರಕರಣಗಳು

ತಿಂಗಳು	ಕೊಲೆ	ಸುಲಿಗೆ	ಕಳ್ಳತನ	ಗಲಭೆ (riots)	ವಾಹನ ಕಳ್ಳತನ
ಜನವರಿ	104	152	1646	281	902
ಫೆಬ್ರುವರಿ	119	120	1626	296	857
ಮಾರ್ಚ್	110	139	1661	336	907
ಏಪ್ರಿಲ್	102	114	1560	293	877
ಮೇ	104	153	1723	279	935
ಜೂನ್	111	139	2422	372	1288

2022 ರಲ್ಲಿ ದಾಖಲಾದ ಪ್ರಕರಣಗಳು

ತಿಂಗಳು	ಕೊಲೆ	ಸುಲಿಗೆ	ಕಳ್ಳತನ	ಗಲಭೆ (riots)	ವಾಹನ ಕಳ್ಳತನ
ಜನವರಿ	113	111	1583	335	912
ಫೆಬ್ರುವರಿ	103	111	1624	354	892
ಮಾರ್ಚ್	125	128	1732	377	983
ಏಪ್ರಿಲ್	124	142	1704	418	950
ಮೇ	129	143	1874	351	1053
ಜೂನ್	121	153	1937	349	1162

ತಿಂಗಳವಾರು ಅಪರಾಧ ವಿವರ

ಅಪರಾಧ ಪ್ರಕರಣ	ಜನವರಿ	ಫೆಬ್ರುವರಿ	ಮಾರ್ಚ್	ಏಪ್ರಿಲ್	ಮೇ	ಜೂನ್
ಅತ್ಯಾಚಾರ	29	56	44	46	47	67
ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ	209	190	235	256	249	281
ಸೈಬರ್	1325	1370	1615	1710	1570	1759

ಮಲಯಾಳ ನಟಿ ಅಪರ್ಣಾ ಆತ್ಮಹತ್ಯೆ?



ಅಪರ್ಣಾ ನಾಯರ್

ತಿರುವನಂತಪುರ (ಪಿಟಿಐ): 'ಮಲಯಾಳ ಸಿನಿಮಾ, ಧಾರಾವಾಹಿ ನಟಿ ಅಪರ್ಣಾ ನಾಯರ್ (33) ಅವರ ಮೃತದೇಹವು ನೇಣು ಬಿಗಿದ ಸ್ಥಿತಿಯಲ್ಲಿ ಅವರ ನಿವಾಸದಲ್ಲಿ ಪತ್ತೆಯಾಗಿದೆ' ಎಂದು ಪೊಲೀಸರು ಶುಕ್ರವಾರ ಹೇಳಿದ್ದಾರೆ.

'ಗುರುವಾರ ಸಂಜೆ 7.30ರ ಸುಮಾರಿಗೆ ಘಟನೆ ನಡೆದಿದೆ. ಅಪರ್ಣಾ ಪತಿ, ಮಕ್ಕಳೊಂದಿಗೆ ವಾಸಿಸುತ್ತಿದ್ದರು. ಕರಮಾನ ಬಳಿಯಲ್ಲಿರುವ ಅವರ ನಿವಾಸದ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅಪರ್ಣಾ ಪತ್ತೆಯಾದ ತಕ್ಷಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆ ಅಧಿಕಾರಿಗಳು ಈ ಕುರಿತು ನಮಗೆ ಮಾಹಿತಿ ನೀಡಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಪ್ರಾರಂಭಿಸಲಾಗಿದೆ' ಎಂದರು.

ಪ್ರಸ್ತುತ, ಅಪರ್ಣಾ ಅವರದ್ದು ಅಸಹಜ ಸಾವು ಪ್ರಕರಣವಾಗಿದ್ದು, ಕೌಟುಂಬಿಕ ಕಲಹವೇ ಕಾರಣವಿರಬಹುದೆಂದು ಎಂದು ಪೊಲೀಸರು ಶಂಕಿಸಿದ್ದಾರೆ.



ಬೆಳಕಿನ ಉಂಗುರ

ವಿರಾಜಪೇಟೆಯಲ್ಲಿ ಶುಕ್ರವಾರ ಸೂರ್ಯನ ಸುತ್ತ ಬೆಳಕಿನ ವೃತ್ತ ಕಾಣಿಸಿತು.

'ಕಾಂಗ್ರೆಸ್ 'ಸೀಮೆಎಣ್ಣೆ' ಪಕ್ಷ ಎಂದಿದ್ದ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷವನ್ನು 'ಸೀಮೆಎಣ್ಣೆ' ಪಕ್ಷ ಎಂದು ಟೀಕಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ಮುಖ ಇಟ್ಟುಕೊಂಡು ಆ ಪಕ್ಷದಲ್ಲಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಪ್ರಶ್ನಿಸಿದರು.

ಜೆಡಿಎಸ್ ಉನ್ನತ ನಾಯಕರ ಸಮಿತಿ ಸಭೆಯ ನಂತರ ಅವರು ಮಾತನಾಡಿದರು.

ಕಾಂಗ್ರೆಸ್ ವಿದೇಶಿ ಪಕ್ಷ. ಸೋನಿಯಾ ಗಾಂಧಿ ಅವರಿಗೆ ಭಾರತದ ಪೌರತ್ವವನ್ನೇ ನೀಡಬಾರದು ಎಂದು ಹೇಳಿದ್ದ ಸಿದ್ದರಾಮಯ್ಯ ಇಂದು ಅವರ ಕಾಲಡಿಗೇ ಶರಣಾಗಿದ್ದಾರೆ. ಅಧಿಕಾರಕ್ಕಾಗಿ ಯಾವಮಟ್ಟಕ್ಕಾದರೂ ಇಳಿಯುತ್ತಾರೆ. ಅವರೊಬ್ಬ ಅವಕಾಶವಾದಿ ಎಂದು ಟೀಕಿಸಿದರು.

ರಾಜ್ಯದಲ್ಲಿ ಭಾರಿ ಬಹುಮತ ಪಡೆದು ಅಧಿಕಾರಕ್ಕೆ ಬಂದರೂ ಬೇರೆ ಪಕ್ಷದ ಶಾಸಕರು, ನಾಯಕರನ್ನು ಪಕ್ಷಕ್ಕೆ ಸೆಳೆಯುವ ಯಾವ ನಾಯಕರನ್ನೂ ನೋಡಿಲ್ಲ. ಅವರು ಎಷ್ಟೇ ಪ್ರಯತ್ನ ಮಾಡಿದರೂ ಜೆಡಿಎಸ್‌ನ ಒಬ್ಬ ಶಾಸಕರನ್ನೂ ಸೆಳೆಯಲು ಸಾಧ್ಯವಿಲ್ಲ ಎಂದರು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ಶಾಸಕರ ಕ್ಷೇತ್ರಕ್ಕೂ ತಲಾ ₹ 25 ಕೋಟಿ ಅನುದಾನ ನೀಡಿದ್ದರು. ಆದರೆ, ಸಿದ್ದರಾಮಯ್ಯ ವಿರೋಧ ಪಕ್ಷದ ಶಾಸಕರನ್ನು ಕಡೆಗಣಿಸುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳ ಭಾರಕ್ಕೆ ಸರ್ಕಾರದ ಆರ್ಥಿಕ ಪರಿಸ್ಥಿತಿ ನಲುಗಿದೆ. ಜೆಡಿಎಸ್ ಅಧಿಕಾರಕ್ಕೆ ಬಂದಿದ್ದರೆ ಪಂಚರತ್ನದ ಮೂಲಕ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮಾಡುತ್ತಿತ್ತು ಎಂದು ಹೇಳಿದರು.

ವಿಶ್ವಕರ್ಮರಿಗೆ ಸ್ಥಾನಮಾನ ನೀಡಲು ಮನವಿ

ಪ್ರಜಾವಾಣಿ ವಾರ್ತೆ



ಕರ್ನಾಟಕ ವಿಶ್ವಕರ್ಮ ಸಮುದಾಯ ಸಮನ್ವಯ ಸಮಿತಿ ಸದಸ್ಯರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಬೆಂಗಳೂರು: 'ರಾಜ್ಯದಲ್ಲಿ ವಿಶ್ವಕರ್ಮರ ಪರಿಸ್ಥಿತಿ ಶೋಚನೀಯವಾಗಿದೆ. ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದಿದೆ. ಹೀಗಾಗಿ, ನಿಗಮ, ಮಂಡಳಿ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಸಮಾಜಕ್ಕೆ ಆದ್ಯತೆ ನೀಡಬೇಕು' ಎಂದು ಕರ್ನಾಟಕ ವಿಶ್ವಕರ್ಮ ಸಮುದಾಯ ಸಮನ್ವಯ ಸಮಿತಿ ಒತ್ತಾಯಿಸಿದೆ.

ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಮಿತಿ ಸದಸ್ಯರು 'ನಮ್ಮ ಸಮಾಜದಿಂದ ನಾಲ್ಕು ದಶಕಗಳ ಹಿಂದೆ ಬಿ.ವಿ. ಪತ್ತಾರ ಅವರು ಮಾತ್ರ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅಲ್ಲಿಂದ ಇಲ್ಲಿಯವರೆಗೂ ಯಾರು ಶಾಸಕರಾಗಿ ಆಯ್ಕೆಯಾಗಿಲ್ಲ. ನಿಮ್ಮನ್ನೇ ಸಮಾಜದ ಧ್ವನಿ, ಶಕ್ತಿ ಎಂದು ಭಾವಿಸಿದ್ದೇವೆ. ಆದ್ದರಿಂದ, ಸಮುದಾಯದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿದರು.

'ರಾಜ್ಯ ಸರ್ಕಾರದಿಂದ ಸೆಪ್ಟೆಂಬರ್ 17ರಂದು ವಿಶ್ವಕರ್ಮ ಜಯಂತಿಗೆ ಚಾಲನೆ ನೀಡಬೇಕೆಂದು ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಸಮಾಜದ ಮುಖಂಡರಾದ ಕೆ.ಎಂ. ಮಂಜುನಾಥ ಅವರಿಗೆ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡಬೇಕೆಂದು' ಒತ್ತಾಯಿಸಿದರು.

'ಬಡಗಿ, ಬಂಗಾರ, ಬೆಳ್ಳಿ ಆಭರಣ ತಯಾರಿಕೆ, ಮೂರ್ತಿ ಕೆತ್ತನೆ (ಶಿಲ್ಪಕಲೆ) ಕಮ್ಮಾರಿಕೆ ಕಸಬುಗಳನ್ನು ಮಾಡುತ್ತ ಜೀವನ ವಿಶ್ವಕರ್ಮ ಸಮುದಾಯದವರು ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಸಬಲರಾಗಿಲ್ಲ, ಆದರೂ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ಸಮಸ್ತ ವರ್ಗಗಳ ಜತೆಗೆ ನಮ್ಮ ಸಮಾಜಕ್ಕೂ ಶೈಕ್ಷಣಿಕ, ಆರ್ಥಿಕ, ಸ್ವಾವಲಂಬನೆ ಶಕ್ತಿ ತುಂಬಿದೆ' ಎಂದು ಹೇಳಿದರು.

ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಗದ ಮಾಜಿ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಪತ್ತಾರ ಕನಕಗಿರಿ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗ ರಾಜ್ಯ ಉಪಾಧ್ಯಕ್ಷ ಕೆ.ಎಂ. ಮಂಜುನಾಥ್ ಇದ್ದರು.

ವರ್ಗಾವಣೆ ಗೊಂದಲ • ಜ್ಯೇಷ್ಠತಾ ಪಟ್ಟಿ ಅಂತಿಮವಾಗಿಲ್ಲ- ಆರೋಪ

ಸೆ.8ರಿಂದ ಪಿಡಿಒಗಳಿಂದ ಅಸಹಕಾರ ಚಳವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆ ಪ್ರಕ್ರಿಯೆಯಲ್ಲಿನ ಗೊಂದಲ ನಿವಾರಣೆ, 'ಗ್ರೂಪ್ ಬಿ' ಶ್ರೇಣಿ ನೀಡುವುದು ಸೇರಿದಂತೆ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಸೆಪ್ಟೆಂಬರ್ 8ರಿಂದ ಅಸಹಕಾರ ಚಳುವಳಿ ಆರಂಭಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಪಿಡಿಒ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಅವರಿಗೆ ಶುಕ್ರವಾರ ಪತ್ರ ಸಲ್ಲಿಸಿರುವ ಸಂಘದ ಅಧ್ಯಕ್ಷ ರಾಜು ವಾರದ ನೇತೃತ್ವದ ನಿಯೋಗ, ಸೆ.8ರೊಳಗೆ ತಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದೆ.

'ಪಿಡಿಒ ಹುದ್ದೆ ಸೃಷ್ಟಿಯಾಗಿ 13 ವರ್ಷ ಕಳೆದರೂ ಕ್ರಮಬದ್ಧವಾದ ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸಿಲ್ಲ. ಬಡ್ತಿ ನೀಡಲು ವಿಳಂಬ ಮಾಡಲಾಗುತ್ತಿದೆ. ವರ್ಗಾವಣೆ ಪ್ರಕ್ರಿಯೆಯನ್ನು ಸರಿಯಾಗಿ ನಿರ್ವಹಿಸದೇ ಗೊಂದಲ ಸೃಷ್ಟಿಸಲಾಗಿದೆ. ಪಿಡಿಒ ಹುದ್ದೆಯನ್ನು 'ಗ್ರೂಪ್ ಬಿ' ವೃಂದಕ್ಕೆ ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಈಡೇರಿಸಿಲ್ಲ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಪಿಡಿಒಗಳ ಸೇವಾ ವಿಷಯವನ್ನು ಸಕಾಲ ಕಾಯ್ದೆಯ ವ್ಯಾಪ್ತಿಗೆ ತಂದಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿ ನೇಮಕಾತ ಮಾಡದೇ ಇರುವುದರಿಂದ ಪಿಡಿಒಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಇಲಾಖಾ ವಿಚಾರಣೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುತ್ತಿಲ್ಲ. ರಜಾ ದಿನಗಳಲ್ಲೂ ಕಾರ್ಯನಿರ್ವಹಿಸುವಂತೆ ಹಿರಿಯ ಅಧಿಕಾರಿಗಳು ಒತ್ತಡ ಹೇರುತ್ತಿದ್ದಾರೆ. ಪಿಡಿಒಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ' ಎಂದು ದೂರಿದ್ದಾರೆ.

ಸೆ.8ರೊಳಗೆ ತಮ್ಮ ಬೇಡಿಕೆ ಈಡೇರಿಸದಿದ್ದರೆ ಪಿಡಿಒಗಳು ಇಲಾಖೆಯ ವಾಟ್ಸ್ ಆ್ಯಪ್ ಗುಂಪುಗಳಿಂದ ಹೊರ ಬರುತ್ತಾರೆ. ಹಿರಿಯ ಅಧಿಕಾರಿಗಳು ಕರೆಯುವ ಸಭೆಗೆ ಗೈರಾಗಲಿದ್ದಾರೆ. ಆನ್‌ಲೈನ್ ಸೇವೆಗಳನ್ನೂ ಸ್ಥಗಿತಗೊಳಿಸುತ್ತಾರೆ. ಇಲಾಖೆಯ ಮೂಲ ಸೇವೆಗಳನ್ನು ಮಾತ್ರ ಒದಗಿಸುವ ಮೂಲಕ 'ಅಸಹಕಾರ' ಚಳವಳಿ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಬೇಡಿಕೆ ಈಡೇರಿಸದಿದ್ದರೆ ಸೆ.14ರಿಂದ ಪಂಚಾಯತ್ ರಾಜ್ ಆಯುಕ್ತಾಲಯದ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗುವುದು ಎಂದು ರಾಜು ವಾರದ ಹೇಳಿದ್ದಾರೆ.




ಸುಭಾಷಿತ

ಐಶ್ವರ್ಯ ಮತ್ತು ಪ್ರಸಿದ್ಧಿ ಪ್ರತಿಯೊಬ್ಬ ಮನುಷ್ಯನ ಬಯಕೆ. ಅದು ಸ್ವಾಭಾವಿಕ. ಆದರೆ, ಅದಕ್ಕಾಗಿ ನೀವು ಏನನ್ನು ಪಣಕ್ಕೆ ಇಡುತ್ತಿದ್ದೀರಿ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ.

–ಕನ್‌ಫ್ಯೂಷಿಯಸ್

ಅಗತ್ಯ ವಸ್ತು: ರಫ್ತಿಗೆ ನಿರ್ಬಂಧ ರೈತರ ಹಿತರಕ್ಷಣೆಗೂ ಇರಲಿ ಆದ್ಯತೆ

ದಿನಬಳಕೆಯ ಆಹಾರ ವಸ್ತುಗಳ ದರ ಏರಿಕೆಯ ಪರಿಣಾಮವಾಗಿ ಆಹಾರ ಹಣದುಬ್ಬರವು ಜುಲೈನಲ್ಲಿ ಶೇಕಡ 11.5ರಷ್ಟನ್ನು ತಲುಪಿತ್ತು. ಅಗತ್ಯ ವಸ್ತುಗಳ ದರ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಕೆಲವು ದಿನಗಳಿಂದ ಈಚೆಗೆ ಹಲವು ಕ್ರಮಗಳನ್ನು ಕೈಗೊಂಡಿದೆ. ಮುಂದಿನ ಕೆಲವು ತಿಂಗಳುಗಳ-ವರೆಗೂ ಆಹಾರ ವಸ್ತುಗಳ ದರ ಏರುಗತಿಯಲ್ಲೇ ಸಾಗುವ ಸಾಧ್ಯತೆ ಇದೆ ಎಂಬ ಮುನ್ಸೂಚನೆಗಳಿವೆ. ಮುಂಗಾರು ಮಳೆಯ ಕಣ್ಣಾಮುಚ್ಚಾಲೆ ಮತ್ತು ಎಲ್ ನಿನೊದ ಸಂಭವನೀಯ ದುಷ್ಪರಿಣಾಮಗಳಿಂದ ಮುಂಗಾರು ಮತ್ತು ಹಿಂಗಾರಿನ ಬೆಳೆಗಳು ವಿಫಲವಾಗುವ ಸಂಭವವಿದೆ ಎಂಬ ವರದಿಗಳಿವೆ. ಈ ಬೆಳವಣಿಗೆಯು ಅಗತ್ಯ ವಸ್ತುಗಳ ದರ ಏರಿಕೆಗೆ ಕಾರಣವಾಗಲಿದೆ. ದರ ಏರಿಕೆಯನ್ನು ನಿಯಂತ್ರಿಸದೇ ಇದ್ದರೆ ಮುಂಬರುವ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆ ಮತ್ತು 2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲಿ ತಮಗೆ ಹಿನ್ನಡೆ ಉಂಟಾಗಬಹುದು ಎಂಬ ಆತಂಕ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವನ್ನು ಕಾಡುತ್ತಿದೆ. ಈ ಕಾರಣಕ್ಕಾಗಿಯೇ ಬೆಲೆ ಏರಿಕೆ ನಿಯಂತ್ರಣವನ್ನು ಅತ್ಯಂತ ತುರ್ತು ಕೆಲಸ ಎಂದು ಭಾವಿಸಿ ಸರ್ಕಾರವು ಕಾರ್ಯ-ಪ್ರವೃತ್ತವಾಗಿದೆ. ಇಂತಹ ಬಹುತೇಕ ಕ್ರಮಗಳು ಮಾರುಕಟ್ಟೆ ಮಧ್ಯಪ್ರವೇಶದ ಮಾದರಿಯಲ್ಲಿದ್ದು, ಅಗತ್ಯ ಇರುವಷ್ಟು ಆಹಾರ ವಸ್ತುಗಳ ಪೂರೈಕೆ ಮತ್ತು ಅವುಗಳ ಬೆಲೆ ನಿಯಂತ್ರಣಕ್ಕೆ ಪೂರಕವಾಗಿವೆ. ಈ ಪ್ರಕ್ರಿಯೆಯಲ್ಲಿ ಸರ್ಕಾರವು ಕೈಗೊಂಡಿರುವ ಬಹುತೇಕ ಕ್ರಮಗಳು ಆಹಾರ ವಸ್ತುಗಳನ್ನು ಉತ್ಪಾದಿಸುವ ರೈತರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇದೆ.



ಇಂತಹ ವಿಚಾರಗಳಲ್ಲಿ ರೈತರು ಮತ್ತು ಗ್ರಾಹಕರು ಇಬ್ಬರ ಹಿತವನ್ನೂ ರಕ್ಷಿಸುವಂತಹ ಸಮತೋಲನದ ನಿರ್ಧಾರಗಳನ್ನು ಕೈಗೊಳ್ಳುವುದು ಅಗತ್ಯ

ಈರುಳ್ಳಿ ರಫ್ತಿನ ಮೇಲೆ ಶೇಕಡ 40ರಷ್ಟು ಸುಂಕ ವಿಧಿಸಿರುವ ಕೇಂದ್ರ ಸರ್ಕಾರವು ಅದನ್ನು ಡಿಸೆಂಬರ್‌ವರೆಗೂ ಮುಂದುವರಿಸಲಿದೆ. ಬಾಸ್ಮತಿಯೇತರ ಅಕ್ಕಿ ರಫ್ತನ್ನು ನಿಷೇಧಿಸಲಾಗಿದೆ. ಬಾಸ್ಮತಿ ಹೆಸರಿನಲ್ಲಿ ಬಾಸ್ಮತಿಯೇತರ ಬಿಳಿ ಅಕ್ಕಿ ರಫ್ತಾಗುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ. ಬೇಳೆ ಕಾಳುಗಳು ಮತ್ತು ಗೋಧಿಯ ದಾಸ್ತಾನಿನ ಮೇಲೆ ಮಿತಿ ಹೇರಲಾಗಿದೆ. ಈರುಳ್ಳಿಯ ಕಾಪು ದಾಸ್ತಾನಿನ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಈರುಳ್ಳಿ ಬೆಲೆ ಏರುವುದು ಎಂಬ ವರದಿಗಳ ಹಿನ್ನೆಲೆಯಲ್ಲಿ ಖುಷಿಯಲ್ಲಿದ್ದ ಈರುಳ್ಳಿ ಬೆಳೆಗಾರರು ಮತ್ತು ವರ್ತಕರು, ಸರ್ಕಾರದ ಕ್ರಮಗಳಿಂದ ದರ ಕುಸಿಯಬಹುದು ಎಂಬ ಭೀತಿಯಲ್ಲಿದ್ದಾರೆ. ಈ ಕಾರಣದಿಂದಾಗಿಯೇ ಸರ್ಕಾರದ ತೀರ್ಮಾನಗಳ ವಿರುದ್ಧ ಪ್ರತಿಭಟನೆಯನ್ನೂ ನಡೆಸಿದ್ದಾರೆ. ಕುಚ್ಚಲಕ್ಕಿ ರಫ್ತಿನ ಮೇಲೆ ಶೇ 20ರಷ್ಟು ಸುಂಕ ವಿಧಿಸಲಾಗಿದೆ. 2021–22ರಲ್ಲಿ ಅಕ್ಕಿ ರಫ್ತಿನಲ್ಲಿ ಶೇ 30ರಷ್ಟು ಕುಚ್ಚಲಕ್ಕಿಯೇ ಇತ್ತು. ಇದೇ ಅವಧಿಯಲ್ಲಿ ಬಾಸ್ಮತಿಯೇತರ ಬಿಳಿ ಅಕ್ಕಿಯ ರಫ್ತಿನ ಪ್ರಮಾಣವು ಶೇ 30ರಷ್ಟಿತ್ತು. ದೇಶದ ಮಾರುಕಟ್ಟೆಯಲ್ಲಿ ಅಕ್ಕಿಯ ಕೊರತೆ ಉದ್ಭವಿಸುವುದನ್ನು ತಡೆಯುವುದು ಮತ್ತು ಬೆಲೆ ಏರಿಕೆ ನಿಯಂತ್ರಿಸುವುದು ಈ ಕ್ರಮಗಳ ಹಿಂದಿನ ಉದ್ದೇಶ.

ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕಾಗಿ ಕೈಗೊಂಡಿರುವ ಈ ಕ್ರಮಗಳು ರೈತರ ಹಿತಾಸಕ್ತಿಗೆ ಧಕ್ಕೆಯುಂಟು ಮಾಡಲಿವೆ ಮತ್ತು ಅವರ ಆದಾಯ ಕುಸಿತಕ್ಕೂ ಕಾರಣವಾಗುವ ಅಪಾಯವಿದೆ. ಕೃಷಿ ಅತ್ಯಂತ ಕಡಿಮೆ ಲಾಭವಿರುವ ವೃತ್ತಿ. ಬೆಳೆ ನಷ್ಟದ ಸಂದರ್ಭದಲ್ಲಿ ರೈತರಿಗೆ ಸರ್ಕಾರದ ಕಡೆಯಿಂದ ಹೆಚ್ಚಿನ ನೆರವು ದೊರೆಯುತ್ತಿಲ್ಲ. ಸಾಮಾನ್ಯವಾಗಿ ರೈತರು ತಮ್ಮ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಯನ್ನು ಪಡೆಯುತ್ತಿಲ್ಲ. ಲಾಭದ ಬಹುಪಾಲು ಮಧ್ಯವರ್ತಿಗಳ ಪಾಲಾಗುತ್ತಿದೆ. ಸಂಘಟಿತರಾಗಿ ಸರ್ಕಾರದ ವಿರುದ್ಧ ಅಭಿಪ್ರಾಯ ರೂಪಿಸುವಲ್ಲಿ ಶಕ್ತಿ ಹೊಂದಿರುವ ಗ್ರಾಹಕರಿಗೆ ಬೆಲೆ ಏರಿಕೆಯಿಂದ ಆಗುವ ತೊಂದರೆಗಳ ಕುರಿತು ಸರ್ಕಾರ ಕಾಳಜಿ ತೋರಿದೆ. ಆದರೆ, ಕೃತಕವಾಗಿ ಕೃಷಿ ಉತ್ಪನ್ನಗಳ ಬೆಲೆ ಕುಸಿಯುವಂತೆ ಮಾಡಿದಾಗ ರೈತರು ನಷ್ಟ ಅನುಭವಿಸುತ್ತಾರೆ ಎಂಬುದು ವಾಸ್ತವ. ಈ ಬಗೆಯ ನಿರ್ಬಂಧಗಳಿಂದ ಗ್ರಾಮೀಣ ಪ್ರದೇಶದ ಬೇಡಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆಯು ಕೈಗಾರಿಕೆ ಮತ್ತು ವ್ಯಾಪಾರ ವಹಿವಾಟಿನ ಏಳಿಗೆಗೆ ಪೂರಕವಾದುದು. ಈ ನಿರ್ಬಂಧಗಳಿಂದ ಆ ಕ್ಷೇತ್ರಗಳ ಮೇಲೂ ದುಷ್ಪರಿಣಾಮ ಆಗುತ್ತದೆ. ಈ ಬಾರಿ ಬೆಲೆ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಗ್ರಾಹಕರಿಗಷ್ಟೇ ಅನುಕೂಲಕರವಾಗಿವೆ. ಇಂತಹ ವಿಚಾರಗಳಲ್ಲಿ ರೈತರು ಮತ್ತು ಗ್ರಾಹಕರು ಇಬ್ಬರ ಹಿತವನ್ನೂ ರಕ್ಷಿಸುವಂತಹ ಸಮತೋಲನದ ನಿರ್ಧಾರಗಳನ್ನು ಕೈಗೊಳ್ಳುವುದು ಅಗತ್ಯ. ನಿರ್ಬಂಧಗಳನ್ನು ಹೇರುವ ಮೂಲಕ ರಫ್ತು ಒಪ್ಪಂದಗಳನ್ನು ಮುರಿಯುವುದು ಕೂಡ 'ನಂಬಿಕೆಯ ರಫ್ತುದಾರ' ಎಂಬ ದೇಶದ ವಿಶ್ವಾಸಾರ್ಹತೆಗೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇದೆ. ಈ ಬಗ್ಗೆಯೂ ಎಚ್ಚರಿಕೆ ಅಗತ್ಯ.

ದಿನದ ಟ್ವೀಟ್

ಈ ಪರಿ ಅಧ್ಯಯನ?!




'ಒಂದು ರಾಷ್ಟ್ರ, ಒಂದು ಚುನಾವಣೆ' ಪ್ರಸ್ತಾವ ಕುರಿತು 2016ರಿಂದ ಈಚೆಗೆ ಸಂಸದೀಯ ಸ್ಥಾಯಿ ಸಮಿತಿ, ಕಾನೂನು ಆಯೋಗ ಮತ್ತು ನೀತಿ ಆಯೋಗವು ಈಗಾಗಲೇ ಪರಿಶೀಲಿಸಿವೆ ಮತ್ತು ಮೂರು ಪ್ರತ್ಯೇಕ ವರದಿಗಳನ್ನು ಸಲ್ಲಿಸಿವೆ. ಇದೀಗ ನಾಲ್ಕನೇ ಸಮಿತಿಯು ಈ ಪ್ರಸ್ತಾವದ ಬಗ್ಗೆ ಅಧ್ಯಯನ ನಡೆಸಲಿದೆ!

('ಒಂದು ರಾಷ್ಟ್ರ, ಒಂದು ಚುನಾವಣೆ' ಪ್ರಸ್ತಾವದ ಪರಿಶೀಲನೆಗೆ ಸರ್ಕಾರವು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಿರುವುದಕ್ಕೆ ಪ್ರತಿಕ್ರಿಯೆ)

ಅರವಿಂದ್ ಗುಣಶೇಖರ್, ಪತ್ರಕರ್ತ

ಕಿಡಿನುಡಿ



ಬಿಜೆಪಿಗೆ ಒಂದು ವಿನಮ್ರ ಸಲಹೆ. ವಿರೋಧ ಪಕ್ಷದ ನಾಯಕನಿಲ್ಲದೆ ವಿಧಾನಸಭೆ ಅಪೂರ್ಣ ಎನಿಸುತ್ತಿದೆ. ನಿಮಗೆ ಆಯ್ಕೆ ತೀರಾ ಕಷ್ಟವಾದಲ್ಲಿ ಕಾಂಗ್ರೆಸ್‌ನಲ್ಲೇ ಸೂಕ್ತರಾದ ಒಬ್ಬರನ್ನು ಹುಡುಕಿ ವಿರೋಧ ಪಕ್ಷದ ನಾಯಕನ ಹುದ್ದೆಯನ್ನು 'ಔಟ್‌ಸೋರ್ಸ್' ಮಾಡಿ!

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಬುಧವಾರ, 2-9-1998

- **ಶಿಕ್ಷಕರ ಚಳವಳಿ ನಡುವೆ ಕೆಲವೆಡೆ ಪಾಠ ಪ್ರವಚನ**

ಬೆಂಗಳೂರು, ಸೆ. 1– ವಿಶ್ವವಿದ್ಯಾಲಯಗಳು ಮತ್ತು ಪದವಿ ಕಾಲೇಜುಗಳ ಶಿಕ್ಷಕರು ಮುಷ್ಕರ ನಡೆಸುತ್ತಿರುವುದರಿಂದ ಹಲವು ಖಾಸಗಿ ಕಾಲೇಜುಗಳಲ್ಲಿ ಅರೆಕಾಲಿಕ ಮತ್ತು ತಾತ್ಕಾಲಿಕ ಸೇವೆಯಲ್ಲಿರುವ ಶಿಕ್ಷಕರು ತರಗತಿಗಳನ್ನು ತೆಗೆದುಕೊಂಡು ಪಾಠಪ್ರವಚನ ಮುಂದುವರಿಸುತ್ತಿದ್ದಾರೆ. ಹೀಗಾಗಿ ಕೆಲವು ಕಾಲೇಜುಗಳಲ್ಲಾದರೂ ವಿದ್ಯಾರ್ಥಿಗಳು ಈಗ ಕೊಂಚ ನಿಟ್ಟುಸಿರು ಬಿಡುವಂತಾಗಿದೆ.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಈಗ ಅರೆಕಾಲಿಕ ಶಿಕ್ಷಕರ ಸೇವೆಯನ್ನೇ ನಿರ್ಬಂಧಿಸಿರುವುದರಿಂದ ಅಲ್ಲಿ ಅರೆಕಾಲಿಕ ಅಧ್ಯಾಪಕರು ಪಾಠ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ.

- **ಗಜಗಾತ್ರದ ಕೆಪಿಸಿಸಿ ಪಟ್ಟಿ 149 ಮಂದಿಗೆ ಸ್ಥಾನ**

ನವದೆಹಲಿ, ಸೆ. 1– ಕಳೆದ ಒಂದೂವರೆ ವರ್ಷದಿಂದ ನನೆಗುದಿಗೆ ಬಿದ್ದಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸಮಿತಿಗೆ ಇಂದು ಸಂಜೆವರೆಗೂ ಮಾರ್ಪಾಟಿಗಾಗಿ ರಾಜ್ಯದಿಂದ ಬರುತ್ತಲೇ ಇದ್ದ ಒತ್ತಡಗಳ ನಡುವೆ ಅಲ್ಪಸ್ವಲ್ಪ ಬದಲಾ-ವಣೆಗಳನ್ನು ಮಾಡುತ್ತಲೇ 149 ಮಂದಿಯ ಗಜಗಾತ್ರದ ಪಟ್ಟಿಯನ್ನು ಕೊನೆಗೂ ಎಐಸಿಸಿಯು ಬಿಡುಗಡೆ ಮಾಡಿತು.

ಧರ್ಮಸಿಂಗ್ ನಾಯಕತ್ವದ ಕೆಪಿಸಿಸಿಗೆ ಹದಿನೆಂಟು ಮಂದಿ ಉಪಾಧ್ಯಕ್ಷರು, ಇಪ್ಪತ್ತೈದು ಮಂದಿ ಪ್ರಧಾನ ಕಾರ್ಯದರ್ಶಿಗಳು, ಇಪ್ಪತ್ತೆಂಟು ಮಂದಿ ಕಾರ್ಯದರ್ಶಿಗಳು ಮತ್ತು ನಲವತ್ತು ಮಂದಿಯ ಕಾರ್ಯನಿರ್ವಾ-ಹಕ ಸಮಿತಿಯನ್ನು ರಚಿಸಲಾಗಿದೆ. ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ವಂಚಿತರಾದ ರೆನ್ನಲಾದ ಡಿ.ಬಿ.ಚಂದ್ರೇಗೌಡ ಅವರ ಹೆಸರು ಹದಿನೆಂಟು ಮಂದಿಯ ಉಪಾಧ್ಯಕ್ಷರ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ.

50 ವರ್ಷಗಳ ಹಿಂದೆ

ಭಾನುವಾರ, 2-9-1973

- **ರಂಗನಾಥ್, ಚಂದ್ರೇಗೌಡ ಪದಚ್ಯುತಿಗೆ ರಾಜ್ಯದ 14 ಎಂ.ಪಿ.ಗಳ ಆಗ್ರಹ**

ನವದೆಹಲಿ, ಸೆ. 1– ಕರ್ನಾಟಕದ ಹದಿನಾಲ್ಕು ಮಂದಿ ಸಂಸತ್ ಸದಸ್ಯರು ಇಂದು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ರಂಗನಾಥ್ ಮತ್ತು ರಾಜ್ಯ ಯುವಜನ ಕಾಂಗ್ರೆಸ್ ಅಧ್ಯಕ್ಷ ಡಿ.ಬಿ.ಚಂದ್ರೇಗೌಡರನ್ನು ಪದಚ್ಯುತಿಗೊಳಿಸುವಂತೆ ಆಗ್ರಹಪಡಿಸಿದರು.

ಇತ್ತೀಚೆಗೆ ಚುನಾವಣೆ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ನಡೆದ ಘಟನೆಗಳಿಗೆ ಈ ಇಬ್ಬರು ನಾಯಕರೇ ಹೊಣೆಯೆಂದು ಪ್ರಧಾನ ಮಂತ್ರಿಯವರಿಗೆ ಅವರುಗಳು ಸಲ್ಲಿಸಿದ ಮನವಿಪತ್ರದಲ್ಲಿ ಆಪಾದಿಸಿದ್ದಾರೆ.

- **ನಿವೃತ್ತಿ ವಯಸ್ಸು 55**

ಬೆಂಗಳೂರು, ಸೆ. 1– ಸಚಿವ ಸಂಪುಟ ಇಂದು ಕೈಗೊಂಡ ಮಹತ್ತರ ನಿರ್ಧಾರದ ಪ್ರಕಾರ, ನ್ಯಾಯಾಂಗದ ಅಧಿಕಾರಿಗಳನ್ನೊಳಗೊಂಡು, ಎಲ್ಲ ಸರ್ಕಾರಿ ಸಿಬ್ಬಂದಿಯವರು, 55ನೇ ವಯಸ್ಸಿನಲ್ಲಿಯೇ ನಿವೃತ್ತಿ ಹೊಂದುವರು.

58ರವರೆಗೆ ನಿವೃತ್ತಿ ವಯಸ್ಸು ವಿಸ್ತರಣೆಗೆ ಅವಕಾಶ ಹೊಂದಿರುವ ಶಿಕ್ಷಕವರ್ಗದವರಿಗೂ, ಈ ನಿರ್ಧಾರ ಅನ್ವಯವಾಗುವುದು. 55 ವಯಸ್ಸು ಕಳೆದು, ಈಗ ಸೇವೆ-ಯಲ್ಲಿರುವವರೂ, ಈ ನಿರ್ಧಾರ ಜಾರಿಗೆ ಬಂದಂದಿನಿಂದ ನಿವೃತ್ತರಾಗಬೇಕಾಗುತ್ತದೆ.

ಮಕ್ಕಳನ್ನು ಕಂಗೆಡಿಸುತ್ತಿದೆ 'ಟ್ಯೂಷನ್ ರಾಜಧಾನಿ'ಯಲ್ಲಿನ ತೀವ್ರ ಸ್ಪರ್ಧಾತ್ಮಕ ಪರಿಸರ

ಕೋಟಾ: ಕೊನೆಗಾಣದ ಆತ್ಮಹತ್ಯೆ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಉನ್ನತ ಶಿಕ್ಷಣಕ್ಕಾಗಿ ನಡೆಯುವ ಪ್ರವೇಶ ಪರೀಕ್ಷೆಗಳಲ್ಲಿ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಕಠಿಣವಾದುದು, ಚೀನಾದಲ್ಲಿ ಕಾಲೇಜು ಶಿಕ್ಷಣಕ್ಕಾಗಿ ರಾಷ್ಟ್ರಮಟ್ಟದಲ್ಲಿ ನಡೆಯುವ 'ಗಾವ್‌ಕಾವ್' ಪರೀಕ್ಷೆ. ಎರಡನೆಯ ಸ್ಥಾನದಲ್ಲಿ ಇರುವುದು ನಮ್ಮ ದೇಶದ ಐಐಟಿ- ಜೆಇಇ.

2022ರಲ್ಲಿ ದೇಶದ 23 ಐಐಟಿಗಳಿಗೆ ಅಂತಿಮವಾಗಿ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ 13,801. ಇವರಲ್ಲಿ ಕೋಟಾದಲ್ಲಿರುವ ಕೋಚಿಂಗ್ ಕೇಂದ್ರಗಳಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ 2,184. ಇದರೊಂದಿಗೆ, ರಾಷ್ಟ್ರ-ಮಟ್ಟದಲ್ಲಿ ಮೊದಲ 100 ಸ್ಥಾನ ಪಡೆದ ವಿದ್ಯಾರ್ಥಿಗಳ ಪಟ್ಟಿಯಲ್ಲಿ 40 ಮಂದಿ ಕೋಟಾ ಟ್ಯೂಷನ್ ಕೇಂದ್ರಗಳಿಂದ ಬಂದವರು. ವರ್ಷ ವರ್ಷವೂ ಇಂತಹ ಉತ್ತಮ ಫಲಿತಾಂಶದ ದಾಖಲೆಯೇ ಉಜ್ವಲ ಭವಿಷ್ಯದ ಕನಸು ಹೊತ್ತ ಲಕ್ಷಾಂತರ ವಿದ್ಯಾರ್ಥಿಗಳನ್ನು ಕೋಟಾದ ಟ್ಯೂಷನ್ ಕೇಂದ್ರಗಳತ್ತ ಇನ್ನಿಲ್ಲದ ಹಾಗೆ ಸೆಳೆಯುತ್ತದೆ.

ಐಐಟಿ, ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳ 'ಟ್ಯೂಷನ್ ರಾಜಧಾನಿ' ಎಂದೇ ಪ್ರಸಿದ್ಧವಾಗಿರುವ ರಾಜಸ್ಥಾನದ ಕೋಟಾ ಪಟ್ಟಣಕ್ಕೆ, 'ಪ್ರತಿಷ್ಠಿತ ಐಐಟಿಗಳ ಪ್ರವೇಶದ್ವಾರ' ಎಂಬ ಹೆಗ್ಗಳಿಕೆ ಇದೆ. ಇದೇ ಕಾರಣದಿಂದ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ, ಪಂಜಾಬ್, ಮಹಾರಾಷ್ಟ್ರ, ಗುಜರಾತ್ ಮತ್ತು ಪಶ್ಚಿಮ ಬಂಗಾಳದಿಂದ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು, ಕೋಟಾದಲ್ಲಿರುವ ಟ್ಯೂಷನ್ ಕೇಂದ್ರಗಳಿಗೆ ಬಂದು ಸೇರುತ್ತಾರೆ. ಪ್ರತಿವರ್ಷ ಜುಲೈನಿಂದ ಮುಂದಿನ ಜನವರಿಯವರೆಗೆ ಊಟ, ನಿದ್ದೆ, ವಿಶ್ರಾಂತಿಗೆ ಗಮನ ಕೊಡದೇ, ಪ್ರತಿದಿನ 12ರಿಂದ 15 ಗಂಟೆಗಳ ಕಾಲ, ಅತಿ ತೀಕ್ಷ್ಣ ಸ್ಪರ್ಧಾತ್ಮಕ ಪರಿಸರದಲ್ಲಿ ತರಗತಿಯ ಪಾಠ, ಪ್ರವಚನ, ಟೆಸ್ಟ್‌ಗಳಲ್ಲಿ ಮುಳುಗಿಹೋಗುತ್ತಾರೆ.

ಈ ಬಿಡುವಿಲ್ಲದ ಕಟ್ಟುನಿಟ್ಟಿನ ದಿನಚರಿ ಸೃಷ್ಟಿಸುವ ಒತ್ತಡ, ಆತಂಕ, ಉದ್ವಿಗ್ನತೆ, ನಿರಾಸೆಯನ್ನು ತಾಳಲಾರದವರು ತರಬೇತಿಯನ್ನು ಅರ್ಧಕ್ಕೇ ಬಿಟ್ಟು ಊರಿಗೆ ಹೋಗುವುದೂ ಉಂಟು. ಆದರೆ ಹಾಗೆ ಮಾಡಲಾರದಂತಹ ಅಸಹಾಯಕ ಪರಿಸ್ಥಿತಿಯಲ್ಲಿರುವ, ಭಾವನಾತ್ಮಕವಾಗಿ ಪ್ರಬುದ್ಧವಾಗಿರದ ಕೆಲವು ಮಕ್ಕಳು ಬದುಕಿಗೇ ವಿದಾಯ ಹೇಳುತ್ತಾರೆ. 2015ರಿಂದ 2023ರ ಆಗಸ್ಟ್ 31ರವರೆಗೆ ಈ ರೀತಿ 123 ಮಕ್ಕಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ವರ್ಷವೊಂದರಲ್ಲೇ 23 ಆತ್ಮಹತ್ಯೆಗಳಾಗಿವೆ.

ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯುವುದು ಭವಿಷ್ಯದ ಬದುಕಿಗೆ ಇಂದು ಮಾಡುವ ಹೂಡಿಕೆ ಎಂಬ ಭಾವನೆ ನಮ್ಮಲ್ಲಿ ಪ್ರಬಲವಾಗಿದೆ. ಈ ಕಾರಣದಿಂದ ಸಾಲಸೋಲ ಮಾಡಿ, ಸ್ಥಿರಾಸ್ತಿಗಳನ್ನು ಮಾರಿ, ಮಕ್ಕಳನ್ನು ಕೋಟಾ ಟ್ಯೂಷನ್ ಕೇಂದ್ರಗಳಿಗೆ ಕಳುಹಿಸುವ ಸಾವಿರಾರು ಪೋಷಕರಿದ್ದಾರೆ. ಉತ್ತರ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಈ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಪೋಷಕರ ಈ ನಿರೀಕ್ಷೆಯ ಭಾರವನ್ನು ಹೊತ್ತು ಕೋಟಾಗೆ ಬಂದಿಳಿಯುವ ಮಕ್ಕಳಿಗೆ ಅಲ್ಲಿ ಬೇರೊಂದು ಪ್ರಪಂಚವೇ ಎದುರಾಗುತ್ತದೆ. ಗಾಬರಿ ಹುಟ್ಟಿಸುವ ಗಾತ್ರದ ಕ್ಲಿಷ್ಟ ಪಠ್ಯವಸ್ತು, ತೀವ್ರ ಸ್ಪರ್ಧಾತ್ಮಕ ಪರಿಸರ, ಪ್ರತಿದಿನ 10ರಿಂದ 15 ಗಂಟೆಗಳ ಕಾಲ ಗಮನವಿಟ್ಟು ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯ ಮಕ್ಕಳನ್ನು ಕಂಗೆಡಿಸುತ್ತವೆ.

ತಮ್ಮ ಊರಿನಲ್ಲಿ ಶೇ 90ರಷ್ಟು ಅಂಕ ಪಡೆಯುತ್ತಿದ್ದ ಮಕ್ಕಳು ಇಲ್ಲಿ ಶೇ 60-70 ಅಂಕ ಬಂದಾಗ ಕುಗ್ಗುವುದು ಸಹಜ. ಪ್ರತಿವಾರವೂ ಕಡ್ಡಾಯವಾಗಿ ತೆಗೆದುಕೊಳ್ಳಲೇ-ಬೇಕಾದ 'ಟೆಸ್ಟ್' ತೀವ್ರ ಆತಂಕಕ್ಕೆ ಕಾರಣವಾಗುವುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಈ ಟೆಸ್ಟ್‌ಗಳಲ್ಲಿ ಕಡಿಮೆ ಅಂಕ ಬಂದವರನ್ನು ಪ್ರತ್ಯೇಕಿಸಿ, ಉತ್ತಮ ಅಂಕ ಪಡೆದ 'ಸ್ಟಾರ್' ವಿದ್ಯಾರ್ಥಿಗಳಿಗೆ ಮತ್ತಷ್ಟು ಉತ್ತಮ ತರಬೇತಿ ನೀಡಲಾಗುತ್ತದೆ. ಈ ವರ್ಗೀಕರಣ ಮತ್ತು ಅಂಕಗಳನ್ನು ಪಾಲಕರಿಗೆ ತಿಳಿಸುವ ವ್ಯವಸ್ಥೆ ಅನೇಕ ಮಕ್ಕಳ ಪಾಲಿಗೆ ದುಃಸ್ವಪ್ನವಾಗುತ್ತದೆ. ಲಕ್ಷಾಂತರ ರೂಪಾಯಿಯನ್ನು ಸಾಲವಾಗಿ ಪಡೆದ ಪೋಷಕರು ಈ ಪರಿಸ್ಥಿತಿಯಲ್ಲಿ ಮಕ್ಕಳ ಮೇಲೆ ಮತ್ತಷ್ಟು ಒತ್ತಡ ಹೇರುತ್ತಾರೆ.

ಇಂತಹ ಒತ್ತಡವನ್ನು ನಿಭಾಯಿಸಲು ವಿದ್ಯಾರ್ಥಿಗಳಿಗೆ ಸ್ನೇಹಿತರು, ಪೋಷಕರು, ಶಿಕ್ಷಕರು, ಹಿತೈಷಿಗಳ ಸಾಂತ್ವನ, ಬೆಂಬಲ ಬೇಕು. ಆದರೆ ಟ್ಯೂಷನ್ ಪ್ರಪಂಚದ ಉಸಿರು-ಗಟ್ಟಿಸುವ ವೇಗದ ಓಟದಲ್ಲಿ ಇದು ಬಹುತೇಕ ಅಸಾಧ್ಯ. ಇಂತಹ ಒತ್ತಡವನ್ನು ತಡೆಯಲಾಗದೇ ವಿದ್ಯಾರ್ಥಿನಿಯೊಬ್ಬಳು ಊರಿಗೆ ಹಿಂದಿರುಗಲು ಪ್ರಯತ್ನಿಸುತ್ತಾಳೆ. ಊರಿಗೆ ಬಂದರೆ ಮದುವೆ ಮಾಡಿ, ಗಂಡನ ಮನೆಗೆ ಕಳುಹಿಸಬೇಕಾಗುತ್ತದೆ ಎಂಬ ಎಚ್ಚರಿಕೆ ಪೋಷಕರಿಂದ ಬಂದಾಗ ವಿಧಿಯಿಲ್ಲದೆ ಕೋಟಾದಲ್ಲಿಯೇ ಉಳಿಯುವ ಅವಳು, ಮುಂದೆ ಬದುಕಿಗೆ ವಿದಾಯ ಹೇಳುವ ಪ್ರಕರಣವನ್ನು ಅಧ್ಯಯನವೊಂದು ದಾಖಲಿಸಿದೆ.

ಕೋಟಾದಲ್ಲಿನ ಆತ್ಮಹತ್ಯೆಯ ಪ್ರಕರಣಗಳು ಟ್ಯೂಷನ್ ಕೇಂದ್ರಗಳ ಖ್ಯಾತಿಗೆ ಮಸಿ ಬಳಿಯುವ ಸಾಧ್ಯತೆಗಳು ಸ್ಪಷ್ಟವಾಗಿ ಗೋಚರಿಸಲು ಪ್ರಾರಂಭವಾದ ನಂತರ, ಹಲವಾರು ಪ್ರಸಿದ್ಧ ಕೇಂದ್ರಗಳು ಆಪ್ತ ಸಮಾಲೋಚಕರು ಹಾಗೂ ಮನೋವೈದ್ಯರ ಸೇವೆಯನ್ನು ಒದಗಿಸಲು ಪ್ರಾರಂಭಿಸಿವೆ. ಆದರೆ ಎರಡು ಲಕ್ಷ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ಇದು ಏನೇನೂ ಸಾಲದು. ಕೋಟಾ ವೈದ್ಯಕೀಯ ಕಾಲೇಜಿನ ಮನೋರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥರು, 'ಈ ಸಮಸ್ಯೆಯ ನಿರ್ವಹಣೆಗೆ ಹಿಂದಿನ 20 ವರ್ಷಗಳಿಂದ ನಾವು ವೈಜ್ಞಾನಿಕ ಸಲಹೆಗಳನ್ನು ನೀಡುತ್ತ ಬಂದಿದ್ದರೂ ಸರ್ಕಾರ ಅದಕ್ಕೆ ಗಮನ ನೀಡಿಲ್ಲ' ಎನ್ನುತ್ತಾರೆ. 2020ರ ಕೋವಿಡ್ ಸಂದರ್ಭದಲ್ಲಿ ರಾಜಸ್ಥಾನ ಸರ್ಕಾರ ಮೂವರು ಪರಿಣತರ ಸಮಿತಿಯೊಂದನ್ನು ಈ ಸಮಸ್ಯೆಯ ಅಧ್ಯಯನಕ್ಕೆ ನೇಮಿಸಿತ್ತು. ಆ ಸಮಿತಿಯ ವರದಿ ಆಧಾರದ ಮೇಲೆ, ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಡೆಯುವ ಸಲಹೆಗಳನ್ನು ಒಳಗೊಂಡ ಸಮಗ್ರ ಮಸೂದೆಯೊಂದು 2022ರಲ್ಲೇ ಸಿದ್ಧವಾದರೂ ಇದುವರೆವಿಗೂ ಅದನ್ನು ವಿಧಾನಸಭೆಯಲ್ಲಿ ಮಂಡಿಸಿಲ್ಲ. ಈ ಕ್ರಮದ ಹಿಂದೆ ಟ್ಯೂಷನ್ ಕೇಂದ್ರಗಳ ಪ್ರಬಲ ಲಾಬಿ ಇದೆ ಎಂಬ ಅನುಮಾನವಿದೆ.




ಕೋಟಾದಲ್ಲಿ ನೋಂದಣಿಯಾಗಿರುವ ಸುಮಾರು 150 ಟ್ಯೂಷನ್ ಕೇಂದ್ರಗಳಿವೆ. 2,500 ಹಾಸ್ಟೆಲ್, ಪಿ.ಜಿ. ಕೇಂದ್ರಗಳು ಮತ್ತು ವಸತಿಗೃಹಗಳು ಎರಡು ಲಕ್ಷ ವಿದ್ಯಾರ್ಥಿಗಳಿಗೆ, ತಿಂಗಳಿಗೆ ₹ 7,500ರಿಂದ ₹ 30,000 ಬಾಡಿಗೆಯ ಮೇಲೆ ವಸತಿಯೊದಗಿಸುತ್ತವೆ. ಪ್ರತಿವರ್ಷ 15ರಿಂದ 20 ಸಾವಿರ ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಸತಿಗಾಗಿ ಕಾಮಗಾರಿ ನಡೆಯುತ್ತಿದೆ. ಪ್ರತಿವರ್ಷ ಸರಾಸರಿ 50 ಲಕ್ಷ ಪುಸ್ತಕಗಳ ಮಾರಾಟದಿಂದ ₹ 40 ಕೋಟಿಯಿಂದ ₹ 50 ಕೋಟಿಯವರೆಗೆ ಆದಾಯವಿದೆ. ಸರಾಸರಿ ₹ 600 ಬೆಲೆಯ 6 ಲಕ್ಷ ಸಮವಸ್ತ್ರಗಳಿಗೆ ಬೇಡಿಕೆಯಿದೆ. ವಿದ್ಯಾರ್ಥಿಗಳಿಗೆ ಬೆಂಬಲ ನೀಡಲು ಪೋಷಕರೂ ಅವರೊಡನೆ ಉಳಿದುಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವುದರಿಂದ ಒಂದು ಕೊಠಡಿಯ ಫ್ಲ್ಯಾಟ್‌ಗಳಿಗೆ ಅತಿ ಹೆಚ್ಚಿನ ಬೇಡಿಕೆ ಇದೆ. ವಾರ್ಷಿಕ ₹ 5,000 ಕೋಟಿ ಆರ್ಥಿಕತೆಯ ಟ್ಯೂಷನ್ ವ್ಯವಹಾರ ನೇರವಾಗಿ 2 ಲಕ್ಷ ಮತ್ತು ಪರೋಕ್ಷವಾಗಿ 1.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ.

ಇಂತಹ ಲಾಭದಾಯಕ ವ್ಯವಸ್ಥೆಯನ್ನು ಕಟ್ಟುನಿಟ್ಟಾದ ನಿಯಂತ್ರಣ ಕ್ರಮಗಳಿಗೆ ಒಳಪಡಿಸುವುದರ ಬದಲಿಗೆ ಕಣ್ಣೊರೆಸುವ ಹಲವಾರು ಕ್ರಮಗಳನ್ನು ಸರ್ಕಾರ ಪ್ರಕಟಿಸಿದೆ. ಪರಿಣತರ ಸಲಹೆಗಳನ್ನು ಗಮನಿಸದ ಸರ್ಕಾರ, ಆಗಸ್ಟ್ 28ರಂದು ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ! ಮುಂದಿನ ಎರಡು ತಿಂಗಳು ಯಾವುದೇ ಟೆಸ್ಟ್ ನಡೆಸದಂತೆ, ಬುಧವಾರ ಮಧ್ಯಾಹ್ನ ಕಡ್ಡಾಯವಾಗಿ ರಜೆ ನೀಡುವಂತೆ ಟ್ಯೂಷನ್ ಕೇಂದ್ರಗಳಿಗೆ ಆದೇಶ ನೀಡಿದೆ.

ಫ್ಯಾನ್‌ಗೆ ನೇಣು ಹಾಕಿಕೊಳ್ಳಲು ಪ್ರಯತ್ನಿಸಿದರೆ ಇಡೀ ಫ್ಯಾನ್ ಕಳಚಿ ಬೀಳುವಂತೆ ಮಾಡುವ ಸ್ಪ್ರಿಂಗ್‌ಗಳನ್ನು ಫ್ಯಾನ್‌ಗಳಿಗೆ ಅಳವಡಿಸುವಂತೆ, ಮಹಡಿಯಿಂದ ಬೀಳುವವರನ್ನು ತಡೆಯಲು ಬಲೆಗಳನ್ನು ಅಳವಡಿಸುವಂತೆ ಎಲ್ಲ ಹಾಸ್ಟೆಲ್, ವಸತಿಗೃಹಗಳಿಗೆ ಸೂಚನೆ ನೀಡಿದೆ.

ಸರ್ಕಾರ ಮತ್ತು ಕೋಚಿಂಗ್ ಕೇಂದ್ರಗಳು ಲಗುಬಗೆಯಿಂದ ಕೈಗೊಳ್ಳುತ್ತಿರುವ ಈ ಯಾವ ಕ್ರಮಗಳಿಂದಲೂ ಆತ್ಮಹತ್ಯೆಗಳ ಸಂಖ್ಯೆ ಗಮನಾರ್ಹವಾಗಿ ಇಳಿಯುವುದಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಆತ್ಮಹತ್ಯೆಯ ಯೋಚನೆಯಲ್ಲಿರುವ ವಿದ್ಯಾರ್ಥಿಗಳು ಅನೇಕ ಸುಳಿವುಗಳನ್ನು ನೀಡುತ್ತಾರೆ. ಮೌನಕ್ಕೆ ಸರಿದು ಯಾರೊಂದಿಗೂ ಬೆರೆಯದಿರುವುದು, ತರಗತಿಗಳಿಂದ ದೂರ ಉಳಿಯುವುದು, ಬದುಕಿನ ನಿರರ್ಥಕತೆ, ಸಾವಿನ ಬಗ್ಗೆ ಮಾತನಾಡುವುದು, ವೇಷಭೂಷಣ, ಆಹಾರ, ಶುಚಿತ್ವದ ಬಗ್ಗೆ ತೀವ್ರ ನಿರಾಸಕ್ತಿಯಂತಹ ಮುನ್ಸೂಚನೆಗಳನ್ನು ಗುರುತಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಟ್ಯೂಷನ್ ಕೇಂದ್ರಗಳು, ಹಾಸ್ಟೆಲ್, ವಸತಿಗೃಹಗಳ ಸಿಬ್ಬಂದಿಯಲ್ಲಿ ತ್ವರಿತಗತಿಯಲ್ಲಿ ಬೆಳೆಸಿ, ಹಾಗೆ ಗುರುತಿಸಿದ ಮಕ್ಕಳಿಗೆ ಮನೋವೈದ್ಯಕೀಯ ಸೌಲಭ್ಯವನ್ನು ಆದ್ಯತೆಯ ಮೇರೆಗೆ ಒದಗಿಸುವುದು ಈ ಸಮಸ್ಯೆಗೆ ಪರಿಹಾರ ಒದಗಿ-ಸಬಲ್ಲದು ಎಂಬುದು ಪರಿಣತರ ಖಚಿತ ಅಭಿಪ್ರಾಯ.

ಚುರುಮುರಿ



ಬರಕ್ಕಿ-ಡೊಳ್ಳಕ್ಕಿ!

• ತುರುವೇಕೆರೆ ಪ್ರಸಾದ್

'ಅಂತೂ ಇಂತೂ ಕೈ ಸರ್ಕಾರದ್ದು 4 ಗ್ಯಾರಂಟಿ ಈಡೇರಿದಂಗಾಯ್ತು' ಎಂದ ಪರ್ಮೇಶಿ ಪೇಪರ್ ಹಿಡಿದುಕೊಂಡು. 'ಅದೆಂಗಾಗುತ್ತೆ? ಅಕ್ಕಿ ಇನ್ನೂ ಪೂರಾ ಕೊಟ್ಟಿಲ್ದೇ ಇರೋದ್ರಿಂದ ಮೂರೂವರೆ ಆದಂಗಾಯ್ತು' ಎಂದರು ಪದ್ದಮ್ಮ.

'ಅದ್ರೂ ಇವು ಮೂರೂವರೆ ವಜ್ರಗಳು ಇದ್ದಂಗೆ ಕಣೆ' ಎಂದು ಹಳೇ ಪಿಕ್ಚರ್ ನೆನಪು ಮಾಡಿಕೊಂಡ ಪರ್ಮೇಶಿ.

'ಆ ವಜ್ರಗಳು ಯಾರು ಅನ್ನೋದೇ ಹೈಕಮಾಂಡಿಗೆ ಕಂಡ್‌ಹಿಡಿಯೋಕೆ ಆಗಿಲ್ಲ. ಅದಿರ್ಲಿ, ಈಗ ಮಾಮೂಲಿ ಅಕ್ಕಿನೇ ಕೊಡಕ್ಕಾಗ್ತಿಲ್ಲ, ಬರಗಾಲ ಬಂದಿರೋದ್ರಿಂದ ಹೆಚ್ಚುವರಿ ಬರಕ್ಕಿ ಕೊಡ್ಬೇಕಾಗುತ್ತೆ'.

'ದೊಡ್ಡ ಮನುಷ್ಯರು ಉಗ್ರಾಣದಲ್ಲಿ ಇಟ್ಟುಕೊಂಡು ಗುಡಾಣ ತುಂಬಿಸ್ಕೊಳ್ತಾ? ಆ ಡೊಳ್ಳಕ್ಕಿನ ಪತ್ತೆ ಮಾಡಿ ಜನಕ್ಕೆ ಹಂಚುದ್ರಾಯ್ತು'.

'ಸರ್ಕಾರದ ಈ ಮಾಮೂಲಿ ಅಕ್ಕಿ ಕೊಡಲಿಕ್ಕೆ ಆಗದಿದ್ದರೆ ಏನಂತೆ? ಗೌರಿ ಹಬ್ಬ ಬರ್ತಿದೆ. ಹೆಣ್ಣುಮಕ್ಕಳಿಗೆ ಉಡಿ ತುಂಬಿಸೋಕೆ ಮಡಿಲಕ್ಕಿ ಕೊಟ್ಟು ಅಕ್ಕಿ ವಾಗ್ದಾನ ನೆರವೇರಿಸ್ಬಹುದು'.

'ಸೆಂಟ್ರಲ್ ಗೋಡೌನ್‌ನಲ್ಲಿರೋ ಗೋಲ್ಡನ್ ರೈಸ್ ಅಂತೂ ಸಿಕ್ಲಿಲವಲ್ಲ'.

'ಹಳೇದನ್ನ ನಂಬಕ್ಕಾಗಲ್ಲ. ಅದು ಮುಗ್ಗುಲಾಗಿದ್ರೆ ಎಲೆಕ್ಷನ್ ಚಿತ್ರಾನ್ನಕ್ಕೆ ಲಾಯಕ್ಕು. ಛಲವಿದ್ದೋನು ಕುಚ್ಚಲಕ್ಕಿನೂ ತಿಂದು ಬದುಕ್ತಾನೆ. ಜನಕ್ಕೆ ಮುಗ್ಗಲಕ್ಕಿ ಕೊಟ್ರೆ ಮುಂದಿನ ಎಲೆಕ್ಷನ್‌ನಲ್ಲಿ ಮಗ್ಗುಲು ಬದ್ಲಾಯಿಸ್ಬಿಡ್ತಾರೆ'.

'ಅದ್ಯಾವುದೋ ತಮಿಳುನಾಡಿನ ಆನೆ ರೇಷನ್ ಅಂಗಡಿ ಬಾಗಿಲು ಮುರಿದು ಅಕ್ಕಿ ತಿನ್ನಕ್ಕೆ ಅಭ್ಯಾಸ ಮಾಡಿಕೊಂಡಿತ್ತಂತೆ. ಬಿಳಿಯಾನೆಗಳೂ ಅದನ್ನೇ ಶುರು ಮಾಡ್ಕೊಂಡ್ರೆ ದುರ್ಭಿಕ್ಷದಲ್ಲಿ ಅಧಿಕಮಾಸ ಅನ್ನೋ ಹಾಗಾಗುತ್ತೆ'.

'ಅಲ್ಲ ಈ ದಪ್ಪಕ್ಕಿನೇ ಯಾಕೆ ಕೊಡ್ಬೇಕು? ಅವಲಕ್ಕಿ ಕೊಟ್ರಾಗಲ್ವಾ?'

'ಅವ' ಸೇರ್ಕಂಡ್ ಮೇಲೆ ಅದು ಅವಲಕ್ಷಣ'.

'ಸಬ್ಬಕ್ಕಿ, ಸೀಮೆಅಕ್ಕಿ ಕೊಟ್ರೆ?'

'ಯಾಕೆ ಹಪ್ಪಳ, ಸಂಡಿಗೆ ಮಾಡ್ಕೊಂಡು ತಿನ್ನಕ್ಕಾ?'

'ಏನಾಗುತ್ತೋ ಬಿಡುತ್ತೋ? ಸಂಡಿಗೆ ತಿನ್ತಾ ಎಲ್ಲಾ ಮರೆತು ಮಂಡಿಗೆ ಮುರೀಬಹುದಲ್ಲ. ರಾಜಕೀಯದೋರು ತಲೆಸವರಿ ಕೊಡೋ 'ಪಾಲಿಷ್' ಅಕ್ಕಿಗಿಂತ ಇದೇ ವಾಸಿ' ಎಂದರು ಪದ್ದಮ್ಮ. ಪರ್ಮೇಶಿ ತಲೆಯಾಡಿಸಿದ.

ಸಂಗತ

ಚಂದ್ರಯಾನದ ಹೊಸ ಬೆಳಕು

ಆಸಕ್ತಿ ಇದ್ದಲ್ಲಿ, ಅವಕಾಶ ಸಿಕ್ಕಿದಲ್ಲಿ ಸ್ತ್ರೀಶಕ್ತಿಗೆ ಸಾಟಿಯಿಲ್ಲ ಎಂಬುದಕ್ಕೆ ಚಂದ್ರಯಾನ ಯೋಜನೆಯಲ್ಲಿ ಪಾಲ್ಗೊಂಡ ಮಹಿಳಾ ವಿಜ್ಞಾನಿಗಳೇ ನಿದರ್ಶನ

• ಡಾ. ಕೆ.ಎಸ್.ಚೈತ್ರಾ

ಚಂದ್ರನ ದಕ್ಷಿಣ ಧ್ರುವ ತಲುಪಿದ ಮೊದಲ ರಾಷ್ಟ್ರ ಎಂಬ ಹಿರಿಮೆಗೆ ಭಾರತ ಪಾತ್ರವಾಗಲು ಕಾರಣ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ). ನೇರ ಪ್ರಸಾರದಲ್ಲಿ ವೀಕ್ಷಿಸುತ್ತಿದ್ದಾಗ ಅಲ್ಲಿನ ಆಡಳಿತ- ಸಿಬ್ಬಂದಿ ವರ್ಗದಲ್ಲಿ ತಮ್ಮ ಪರಿಶ್ರಮ ಫಲ ಕೊಟ್ಟ ಖುಷಿ ಕಾಣುತ್ತಿತ್ತು. ಹಾಗೆ ಸಂಭ್ರಮಿಸುತ್ತಿದ್ದವರಲ್ಲಿ ಅನೇಕರು ಮಹಿಳೆಯರು!

ನಂತರದ ಸಂದರ್ಶನದಲ್ಲಿ ಇಸ್ರೊದ ಮುಖ್ಯಸ್ಥ ಎಸ್.ಸೋಮನಾಥ್ ಅವರು, 'ಚಂದ್ರಯಾನ– 3ರ ಪರಿಕಲ್ಪನೆ, ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಹೀಗೆ ಎಲ್ಲ ಹಂತದಲ್ಲೂ ಮಹಿಳೆಯರು ಸಕ್ರಿಯರಾಗಿ-ದ್ದರು. ಇಸ್ರೊದ ಒಟ್ಟು ಸಿಬ್ಬಂದಿಯಲ್ಲಿ ಶೇಕಡ 20ರಿಂದ 25ರಷ್ಟು ಮಹಿಳೆಯರಿದ್ದಾರೆ. ಈ ಯೋಜನೆಯಲ್ಲಿ ಕಲ್ಪನಾ ಕಾಳಹಸ್ತಿ, ರೀಮಾ ಘೋಷ್, ರಿತು ಕರಿಧಾಳ್, ನಿಧಿ ಪೋರ್ವಾಲ್ ಅವರಂತಹ ಹಿರಿಯ ಮಹಿಳಾ ವಿಜ್ಞಾನಿಗಳು ಮತ್ತು ಸುಮಾರು ನೂರಕ್ಕೂ ಹೆಚ್ಚು ಮಹಿಳೆಯರು ವಹಿಸಿರುವ ಪಾತ್ರ ಮಹತ್ವದ್ದು' ಎಂದು ವಿವರಿಸಿದರು. ಇಸ್ರೊ ಕೇಂದ್ರಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ, ಮಹಿಳೆಯರ ಈ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಕ್ರಂ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದ ಮೇಲಿಳಿದ ಸ್ಥಳವನ್ನು 'ಶಿವಶಕ್ತಿ' ಪಾಯಿಂಟ್ ಎಂದು ಹೆಸರಿಸಿ, ಸ್ತ್ರೀ- ಪುರುಷ ತತ್ವಗಳನ್ನು ಬಿಂಬಿಸುವ ಈ ಹೆಸರು ಚಂದ್ರಯಾನದಲ್ಲಿ ಶ್ರಮಿಸಿದ ಮಹಿಳಾ ವಿಜ್ಞಾನಿಗಳಿಗೆ ಸಂದ ಗೌರವ ಎಂದಿದ್ದಾರೆ. ಮಹಿಳಾ ವಿಜ್ಞಾನಿಗಳ ಈ ಭಾಗವಹಿಸುವಿಕೆ, ಗೆಲುವು ಮತ್ತು ಗುರುತಿಸುವಿಕೆ ದೊಡ್ಡದೊಂದು ಸುದ್ದಿಯೇ ಎಂದರೆ, ಹೌದು! ಏಕೆಂದರೆ ವಿಜ್ಞಾನ, ತಂತ್ರಜ್ಞಾನ, ಗಣಿತ ಕ್ಷೇತ್ರದಲ್ಲಿ ಭಾರತ ಮಾತ್ರವಲ್ಲ ಮುಂದುವರಿದ ದೇಶಗಳಲ್ಲೂ ಮಹಿಳೆಯರ ಸಂಖ್ಯೆ ಕಡಿಮೆಯೇ.

ಹಾಗೆ ನೋಡಿದರೆ ಪಿಯುಸಿಯ ತನಕ ಓದಿನಲ್ಲಿ ಹುಡುಗಿಯರದ್ದೇ ಮೇಲುಗೈ. ನಂತರವೂ ವಿಜ್ಞಾನ ಕ್ಷೇತ್ರದಲ್ಲಿ ಪದವೀಧರರಾಗುತ್ತಿರುವ ಮಹಿಳೆಯರ ಸಂಖ್ಯೆ ಶೇ 43ರಷ್ಟು, ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು. ಆದರೆ ಸಂಶೋಧನಾ ಕ್ಷೇತ್ರ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಬರೀ ಶೇ 14ರಷ್ಟು! ಅದರಲ್ಲಿಯೂ ವಿಜ್ಞಾನ ಸಂಸ್ಥೆ, ವಿಶ್ವ-ವಿದ್ಯಾಲಯಗಳ ನಿರ್ಣಾಯಕ ಹುದ್ದೆಗಳಲ್ಲಿರುವವರು ತೀರಾ ಕಡಿಮೆ! ಇದಕ್ಕೆ ಹಲವು ಕಾರಣಗಳಿವೆ. ಮದುವೆಯ ನಂತರ ಹೆಚ್ಚಿನ ಬಾರಿ ವೃತ್ತಿ ಮತ್ತು ಕುಟುಂಬ ಎರಡನ್ನೂ ನಿಭಾಯಿಸಬೇಕಾದ ಜವಾಬ್ದಾರಿ ಮಹಿಳೆಯದ್ದೇ. ನಂತರ ಮಗು, ಅದರ ಹೊಣೆ.

ಈ ಎಲ್ಲಾ ಸಂದರ್ಭಗಳಲ್ಲಿ ಆಕೆಗೆ ಕೆಲಮಟ್ಟಿಗಿನ ದೈಹಿಕ ಮತ್ತು ಮಾನಸಿಕ ಬಿಡುವು ಅಗತ್ಯ. ಹಾಗಾಗಿ ಹೆಚ್ಚಿನ ಅಧ್ಯಯನ, ಸಂಶೋಧನೆಯನ್ನು ನಿಲ್ಲಿಸುವ, ಉನ್ನತ ಹುದ್ದೆ ಬಿಡುವ ನಿರ್ಧಾರ ಅನಿವಾರ್ಯವಾಗು-ತ್ತದೆ. ಕೌಟುಂಬಿಕ ಕಾರಣಗಳನ್ನು ನೀಡಿ ಆಗಾಗ್ಗೆ ರಜೆ, ಬೇಗ ಮನೆಗೆ ಹೋಗಬೇಕು ಎನ್ನುವ ಕಟ್ಟುಪಾಡು, ಸೆಮಿನಾರ್- ಫೀಲ್ಡ್ ಸ್ಟಡಿಗೆ ಮನೆಯಲ್ಲಿ ಕಳಿಸುವುದಿಲ್ಲ ಎಂಬ ಅಸಹಾಯಕತೆ, ಹೊರಗೆ ಹೋದಲ್ಲಿ ಮಹಿಳೆಗೆ ಅನಿವಾರ್ಯವಾದ ಮೂಲಸೌಕರ್ಯಗಳ ಕೊರತೆ, ಸುರಕ್ಷತೆಯ ಚಿಂತೆ, ಮುಟ್ಟು, ಬಸಿರು, ಬಾಣಂತನ... ಹೀಗೆ ಮಹಿಳೆಯರಿಗೆ ಇರುವ ನಾನಾ ಅಡ್ಡಿ ಆತಂಕ ಪೂರ್ಣಪ್ರಮಾಣದ ಸಂಶೋಧನೆಗೆ ಪೂರಕವಲ್ಲ ಎನ್ನುವ ಅಭಿಪ್ರಾಯವು ದಟ್ಟವಾಗಿದೆ.

ನಮ್ಮಲ್ಲಿರುವ ಮತ್ತೊಂದು ತಪ್ಪುಕಲ್ಪನೆ, ಭಾವ-ನಾತ್ಮಕವಾಗಿರುವ ಮಹಿಳೆಯರಿಗೆ ಮೂಲ ವಿಜ್ಞಾನದ ವಿಷಯಗಳಲ್ಲಿ ಸಾಮರ್ಥ್ಯ ಸಹಜವಾಗಿಯೇ ಕಡಿಮೆ ಎಂಬುದು. ಜಗತ್ತಿನೆಲ್ಲೆಡೆ ನಡೆದ ಅಧ್ಯಯನಗಳು ಇವೆಲ್ಲವನ್ನೂ ಸುಳ್ಳು ಎಂದೇ ದೃಢಪಡಿಸಿವೆ. ಆಸಕ್ತಿ ಇದ್ದಲ್ಲಿ, ಅವಕಾಶ ಸಿಕ್ಕಿದಲ್ಲಿ ಮಹಿಳೆಯರೂ ಸಮರ್ಥರೇ! ಈ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರ ಬೌದ್ಧಿಕ ಸಾಮರ್ಥ್ಯದ ಜೊತೆಗೆ ಭಾವನಾತ್ಮಕತೆ ಹೊಸ ಆಯಾಮವನ್ನು ನೀಡಬಲ್ಲದು. ಉದಾಹರಣೆಗೆ, ರೊಬಾಟಿಕ್ಸ್ ಸ್ಪೆಷಲಿಸ್ಟ್ ರಿತು ಘೋಷ್, ಪ್ರಜ್ಞಾನ್ ತಯಾರಿಕೆಯಲ್ಲಿ ಸಕ್ರಿಯರಾಗಿದ್ದವರು. ಅವರು, 'ನನಗೆ ಪ್ರಜ್ಞಾನ್ ಮಗುವಿದ್ದಂತೆ. ಆತನೀಗ ಚಂದ್ರನ ಮೇಲೆ ಪುಟ್ಟ ಹೆಜ್ಜೆಗಳನ್ನು ಇಡುತ್ತಿದ್ದಾನೆ. ಮೊದಲ ಬಾರಿ ಪ್ರಜ್ಞಾನ್ ಚಂದ್ರನ ಮೇಲೆ ಕಾಲಿಟ್ಟಾಗ ಒಂದು ಅದ್ಭುತ ಅನುಭವವಾಗಿತ್ತು' ಎಂದಿದ್ದಾರೆ. ಸೂಕ್ಷ್ಮ ಯಂತ್ರವನ್ನು ನಿರ್ಮಿಸುವಾಗ ಬುದ್ಧಿಶಕ್ತಿ, ನಿಖರ ಲೆಕ್ಕಾಚಾರ ಎಲ್ಲವೂ ಬೇಕು. ಅದರೊಂದಿಗೇ ಮಗುವೆಂದು ಭಾವಿಸುವಾಗ ಅವರಿಗಿದ್ದ ಪ್ರೀತಿ ಅರಿವಾಗುತ್ತದೆ!



ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದು ಯಶಸ್ವಿಯಾದ ಮಹಿಳೆಯರ ಮಾದರಿಗಳು ನಮಗಿದ್ದದ್ದು ತೀರಾ ಕಡಿಮೆ. ಆದರೆ ಮೊನ್ನೆ ಇಸ್ರೊ ಕೇಂದ್ರದಲ್ಲಿ ಸಂಭ್ರಮಿಸುತ್ತಿದ್ದ ಮಹಿಳಾ ವಿಜ್ಞಾನಿಗಳು ನಮ್ಮದೇ ಉಡುಪು ಧರಿಸಿದ, ನಮ್ಮದೇ ಮುಖಚಹರೆ ಹೊಂದಿದ, ನಮ್ಮ ನೆಲದಲ್ಲೇ ಕಲಿತ ಬಹು ಪರಿಚಿತ ಮುಖಗಳು. ಆ ದಿನ, ಹೆಸರು ಗೊತ್ತಿಲ್ಲದಿದ್ದರೂ ದೂರದರ್ಶನದಲ್ಲಿ ಕಂಡ ಮಹಿಳೆಯರ ಮುಖಗಳು ಲಕ್ಷಾಂತರ ಹುಡುಗಿಯರಿಗೆ ತಾವೂ ಹಾಗಾಗಬೇಕು, ಆಗಲು ಸಾಧ್ಯ ಎನ್ನುವ ಕನಸನ್ನು ಮೂಡಿಸಿವೆ!

ಮೂಲವಿಜ್ಞಾನವನ್ನು ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಸಮಯದಲ್ಲಿ ಇಸ್ರೊದ ಈ ಸಾಧನೆ ನಿಜಕ್ಕೂ ಸ್ಫೂರ್ತಿದಾಯಕ. ಶಾಲಾ ಕಾಲೇಜುಗಳಲ್ಲಿ ಸುಸಜ್ಜಿತ ಲ್ಯಾಬ್‌ಗಳು, ಪ್ರಾಯೋಗಿಕ ಸಲಕರಣೆಗಳ ಲಭ್ಯತೆ ಜತೆ ಮಹಿಳೆಯರಿಗೆ ಮೂಲವಿಜ್ಞಾನ ವಿಷಯ ಕಲಿಕೆಗೆ ಮತ್ತು ವೃತ್ತಿ ಆಯ್ಕೆಗೆ ಪೂರಕ ವಾತಾವರಣ ಇರಬೇಕು. ಕ್ಷೇತ್ರ ಯಾವುದೇ ಇರಲಿ, ಮಹಿಳೆಗೆ ಕೆಲಸ ಮಾಡಲು ಅನುಕೂಲಕರ ವಾತಾವರಣ ಕಲ್ಪಿಸುವುದು ಸಮಾಜದ ಕರ್ತವ್ಯ. ಹಾಗೆಯೇ ಇರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಮಹಿಳೆಯ ಜವಾಬ್ದಾರಿ. ಈ ದಿಸೆಯಲ್ಲಿಯೂ ಚಂದ್ರಯಾನ– 3 ಹೊಸ ಬೆಳಕನ್ನು ಬೀರಿದೆ!

ವಾಚಕರ ವಾಣಿ

ನಿಯಂತ್ರಣಕ್ಕೆ ಬೇಕು ಬದ್ಧತೆ

ಗಣಪತಿ ಹಬ್ಬ ಸಮೀಪಿಸುತ್ತಿದೆ. ನಗರಗಳಲ್ಲಿ ಕಾಣಸಿಗುತ್ತಿದ್ದ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಅಗ್ಗದ ಬೆಲೆಯ ಗಣಪನ ಮೂರ್ತಿಗಳು ಇಂದು ಸಣ್ಣ ಸಣ್ಣ ಊರುಗಳಲ್ಲೂ ಕಾಣತೊಡಗಿವೆ. ಹಳ್ಳಿಯ ಚೌಕಗಳಲ್ಲಿ ಗಣಪತಿ ಕೂರಿಸುವ ಹುಡುಗರಿಗೆ ಈ ಮೂರ್ತಿಗಳು ಆಕರ್ಷಕವಾಗಿ ಕಾಣುತ್ತವೆ. ಅಗ್ಗದ ಬೆಲೆಗೆ ದೊಡ್ಡದಾದ, ಆಕರ್ಷಕವಾದ ಗಾಢ ಬಣ್ಣದ ಗಣಪನ ಮೂರ್ತಿಗಳು ಸಿಗುತ್ತವೆ ಮತ್ತು ಸಾಗಿಸಲು ಹಗುರವಾಗಿರುತ್ತವೆ. ಅದೇ ಈ ಆಕರ್ಷಣೆಗೆ ಕಾರಣ. ಆದರೆ ಈ ಮೂರ್ತಿಗಳ ತಯಾರಿಕೆಯಲ್ಲಿ ಬಳಸುವ ರಾಸಾಯನಿಕ ಬಣ್ಣಗಳು ಪರಿಸರಕ್ಕೆ ಬಹಳ ಅಪಾಯಕಾರಿಯಾಗಿರುತ್ತವೆ.

ಗಣಪತಿ ಮೂರ್ತಿಗಳನ್ನು ಊರಿನ ಕೆರೆ ಇಲ್ಲವೆ ಕೊಳದಲ್ಲಿ ವಿಸರ್ಜಿಸಲಾಗುತ್ತದೆ. ಆಗ ಈ ರಾಸಾಯನಿಕ ಬಣ್ಣಗಳು ನೀರನ್ನು ಮಲಿನಗೊಳಿಸುತ್ತವೆ. ಅಲ್ಲದೆ ಗಣೇಶನ ಮೂರ್ತಿಗಳು ತಿಂಗಳಾನುಗಟ್ಟಲೆ ಆ ನೀರಿನಲ್ಲಿ ತೇಲು-ತ್ತಿರುತ್ತವೆ. ಇದು ಧಾರ್ಮಿಕ ದೃಷ್ಟಿಯಿಂದ ಗಣೇಶನಿಗೆ ಮಾಡುವ ಅವಮಾನ ಹಾಗೂ ಪರಿಸರದ ಮೇಲೆ ಎಸಗುವ ದೌರ್ಜನ್ಯ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮೂರ್ತಿಗಳನ್ನು ಮಾಡಬಾರದೆಂಬ ನಿಯಮ ಇದೆ. ಆದರೂ ಈ ಮೂರ್ತಿಗಳು ರಾಜಾರೋಷವಾಗಿ ಎಲ್ಲೆಡೆ ಮಾರಾಟವಾಗುತ್ತವೆ. ನಿಯಮಗಳನ್ನು ಅನುಷ್ಠಾನಗೊಳಿಸಲು ಮಾಲಿನ್ಯ ನಿಯಂತ್ರಣ ಮಂಡಳಿಗೆ ಧೈರ್ಯ ಮತ್ತು ಬದ್ಧತೆ ಇದ್ದಂತಿಲ್ಲ. ಪರಿಸರ ಸಂರಕ್ಷಣೆಯು ಇಂದು ಅತ್ಯಂತ ಜರೂರಾಗಿ-ರುವುದರಿಂದ, ಮಂಡಳಿಯು ಯಾವುದೇ ಮುಲಾಜಿಲ್ಲದೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮೂರ್ತಿಗಳ ತಯಾರಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು.

ಸಂತೋಷ ಕೌಲಗಿ, ಮೇಲುಕೋಟೆ

ಹೊಗೆದುರಂತ: ಜೀವ ರಕ್ಷಣೆ ಸಾಧ್ಯ

ಅಗ್ನಿದುರಂತಗಳಿಂದ ಪದೇ ಪದೇ ಸಾವಿನ ಸುದ್ದಿಗಳನ್ನು ನಾವು ಓದುತ್ತಿರುತ್ತೇವೆ. ಹಾವೇರಿಯ ದುರಂತ ಸೇರಿದಂತೆ ಆಗಸ್ಟ್ ತಿಂಗಳಲ್ಲಿ ದೇಶದ ಆರು ಕಡೆ ಪಟಾಕಿ ಗೋದಾಮುಗಳ ಸ್ಫೋಟದಿಂದ ಜನರು ಸಾವಪ್ಪಿದ್ದಾರೆ. ಇದೀಗ ದಕ್ಷಿಣ ಆಫ್ರಿಕಾದ ರಾಜಧಾನಿ ಜೋಹಾನ್ಸ್‌ಬರ್ಗ್‌ನಲ್ಲಿ 74 ನತದೃಷ್ಟರ ಸಾವು ಸಂಭವಿಸಿದೆ. ಇಂಥ ಸಂದರ್ಭ-ಗಳಲ್ಲಿ ಬಹುತೇಕ ಸಾವು ಅಗ್ನಿಯಿಂದಲ್ಲ, ಉಸಿರುಗಟ್ಟಿಸುವ ಹೊಗೆಯಿಂದ ಸಂಭವಿಸುತ್ತದೆ. ಭಯಭೀತರಾದ ಜನ ಅತ್ತಿತ್ತ ಧಾವಿಸುತ್ತ, ಏದುಸಿರು ಬಿಡುತ್ತ ತಮ್ಮ ಶ್ವಾಸಕೋಶಕ್ಕೆ ಇನ್ನಷ್ಟು ಮತ್ತಷ್ಟು ಇಂಗಾಲ (ಕಾರ್ಬನ್ ಡೈಆಕ್ಸೈಡನ್ನು) ತುಂಬಿಕೊಳ್ಳುತ್ತಿರುತ್ತಾರೆ. ಎಚ್ಚರ ತಪ್ಪಿ ಬಿದ್ದು ಕೊನೆಯುಸಿರಿನ ಹಂತಕ್ಕೆ ಬರುತ್ತಾರೆ.

ಇಂಥ ದುರಂತದಿಂದ ಬಚಾವಾಗಲು ಒಂದು ಸರಳ ಕ್ರಮವಿದೆ. ಹೊಗೆ ತುಂಬಿದ ಕೋಣೆಯಲ್ಲಿ ಗಡಿಬಿಡಿಯಿಂದ ಓಡುವ ಬದಲು ನೆಲದ ಮೇಲೆ ಮಲಗಬೇಕು. ಹೊಗೆ ಯಾವಾಗಲೂ ಎತ್ತರದಲ್ಲಿರುತ್ತದೆ. ನೆಲದ ಸಮೀಪದಲ್ಲಿ ಪ್ರಾಣವಾಯು (ಆಮ್ಲಜನಕದ) ಪದರ ಇರುತ್ತದೆ. ಅಲ್ಲೇ ತೆವಳುತ್ತ, ಸಲೀಸಾಗಿ ಉಸಿರಾಡುತ್ತ ದ್ವಾರದ ಕಡೆ ಮೆಲ್ಲಗೆ ಚಲಿಸಬೇಕು. ಹೊಗೆಯ ಮಧ್ಯೆ ಓಡಲೇಬೇಕೆಂದಿದ್ದರೆ ಕೈಗೆ ಸಿಕ್ಕ ಒಂದು ಖಾಲಿ ಚೀಲವನ್ನು ಅಥವಾ ಕಾಗದದ ದೊಡ್ಡ ಲಕೋಟೆಯಾದರೂ ಸರಿ ಮೂಗು, ಬಾಯಿಗೆ ಕವುಚಿಕೊಂಡು ಸಾಗಬೇಕು. ಅದರಲ್ಲಿರುವ ಆಮ್ಲಜನಕ-ದಿಂದ 3–4 ನಿಮಿಷ ಉಸಿರಾಡಬಹುದು. ಅಲ್ಲೂ ಉಸಿರುಗಟ್ಟುವಂತಿದ್ದರೆ ನೆಲಕ್ಕೆ ಬಾಗಿ, ಅದೇ ಚೀಲದಲ್ಲಿ ಮತ್ತಷ್ಟು ಗಾಳಿಯನ್ನು ತುಂಬಿಕೊಂಡು ಅದನ್ನೇ ಮುಖಕ್ಕೆ ಒತ್ತಿಕೊಂಡು ಚಲಿಸಬಹುದು. ಇಂಥ ಆಪತ್ತಿನಲ್ಲಿ ನೆಲಮಟ್ಟದಲ್ಲಿ ಉಸಿರಾಟ ಯಾವತ್ತೂ ಕ್ಷೇಮ.

ನಾಗೇಶ ಹೆಗಡೆ, ಕೆಂಗೇರಿ

ಅನ್ಯರ ನಂಬಿಕೆಗಳ ಮೇಲೆ ಆಕ್ರಮಣ ಸಲ್ಲ

ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್‌ನಲ್ಲಿ ಇತ್ತೀಚೆಗೆ ಬೇರೆ ಬೇರೆಯವರ ನಂಬಿಕೆಗಳ ಬಗ್ಗೆ ಎಂಥೆಂಥವೋ ಹೇಳಿಕೆಗಳು ಕಾಣಿಸಿಕೊಳ್ಳುತ್ತಿವೆ. ಒಮ್ಮೊಮ್ಮೆ ಇಂಥವುಗಳ ಕುರಿತು ಯಾವ ವಿಧವಾದ ತೀರ್ಮಾನ ತೆಗೆದುಕೊಳ್ಳಬೇಕೊ ತಿಳಿಯದಾಗುತ್ತದೆ. ನಾವು ಜನರಿಗೆ ಮಾಹಿತಿಯನ್ನು ತಲುಪಿಸುವುದು ಮುಖ್ಯ. ಆದರೆ, ಅದರ ಕುರಿತು ತೀರ್ಪುಗಾರರಾಗುವುದು ಸರಿಯಲ್ಲ. ಎಲ್ಲಾ ವಿಷಯಗಳ ಕುರಿತು ಯೋಚಿಸುವ ಮುಕ್ತ ವಾತಾವರಣವನ್ನು ಬೆಳೆಸುವುದು ಮಾತ್ರ ನಮ್ಮ ಕರ್ತವ್ಯ ಆಗಬೇಕು. ಆಗ ಮಾತ್ರ ಆರೋಗ್ಯಪೂರ್ಣ ಸಮಾಜವನ್ನು ಜೀವಂತವಾಗಿಡಲು ಸಾಧ್ಯ.

ನಾವು ಎಂಥೆಂಥವೋ ಚಿಂತನೆಯ ಹಂತಗಳನ್ನು ದಾಟಿ ಬಂದಿರುತ್ತೇವೆ. ಯಾರೇ ಆಗಲಿ ಸಾರ್ವಕಾಲಿಕವಾಗಿ ಪರಿಪೂರ್ಣರಾಗಿ ಇರುವುದಿಲ್ಲ. ಜಗತ್ತಿನ ಎಲ್ಲಾ ಮಹನೀಯರು ಈ ಹಂತಗಳನ್ನು ದಾಟಿ ಬಂದವರೇ ಆಗಿರುತ್ತಾರೆ.

ಶೂದ್ರ ಶ್ರೀನಿವಾಸ್, ಬೆಂಗಳೂರು

ಸಂವಿಧಾನದ ಪ್ರಸ್ತಾವನೆ: ಪಠ್ಯಕ್ರಮದ ಭಾಗವಾಗಲಿ

ರಾಜ್ಯದ ಶಾಲೆಗಳಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ದಿನವೂ ಪಠಿಸುವ ಕ್ರಮವನ್ನು ಜಾರಿಗೆ ತರಲು ಸರ್ಕಾರ ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಕಿರಿಯರಿಗೆಂತೋ ಹಿರಿಯರಿಗೂ ಸಂವಿಧಾನದ ಅರಿವು ಅಗತ್ಯವಾಗಿ ಬೇಕೇಬೇಕು. ಆದರೆ ಹಿರಿಯರಿಗೆ ಕಲಿಸುವ ಯೋಜನೆ ಸರ್ಕಾರದ ಮುಂದೆ ಇಲ್ಲ. ಈಗಿನ ನಮ್ಮ ಶಿಕ್ಷಣ ವ್ಯವಸ್ಥೆ-ಯಲ್ಲಿ ಇತಿಹಾಸ ಮತ್ತು ರಾಜ್ಯಶಾಸ್ತ್ರ ಓದುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಹೆಚ್ಚಿನವರು ಸಂವಿಧಾನ ಕುರಿತು ಗಂಭೀರವಾಗಿ ಓದುವುದಿಲ್ಲ. ಅದು ಅಗತ್ಯ ಎಂದು ಅವರಿಗೆ ಅನ್ನಿಸುವುದೂ ಇಲ್ಲ. ಈ ಕಾರಣದಿಂದ, ಶಾಲೆಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಸಂವಿಧಾನದ ಆಶಯಗಳನ್ನು ತಿಳಿಸಬೇಕೆಂಬ ಸರ್ಕಾರದ ಆಲೋಚನೆ ಉತ್ತಮವಾದುದಾಗಿದೆ.

ಆದರೆ, ಸಂವಿಧಾನದ ಪ್ರಸ್ತಾವನೆಯ ಓದನ್ನು ಪಠ್ಯೇತರ ಚಟುವಟಿಕೆಯಾಗಿ ಸರ್ಕಾರ ಪರಿಗಣಿಸುತ್ತದೆಯೋ ಅಥವಾ ಪಠ್ಯದ ಭಾಗವಾಗಿಯೋ ಎಂಬುದು ಸ್ಪಷ್ಟವಿಲ್ಲ. ಪಠ್ಯಕ್ರಮದ ಭಾಗವಾಗಿ ಸಂವಿಧಾನದ ಪ್ರಸ್ತಾವನೆಯ ಓದನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಸರಿಯಾದ ಕ್ರಮವಾಗುತ್ತದೆ. ಪಠ್ಯೇತರ ಚಟುವಟಿಕೆಗೆ ಪರೀಕ್ಷೆ ಮತ್ತು ಅಂಕಗಳ ಹಂಗು ಇರುವುದಿಲ್ಲವಾದ್ದರಿಂದ ಇದನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಕಡಿಮೆ. ಈ ಮೊದಲು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರಾರಂಭದ ಹಂತದಲ್ಲಿ ಕನ್ನಡ ಸಾಹಿತ್ಯವನ್ನು ಪಠ್ಯೇತರವಾಗಿ ಬೋಧಿಸಲಾಗುತ್ತಿತ್ತು. ಆ ಯೋಜನೆ ಮುಂದುವರಿಯಲಿಲ್ಲ. ಹತ್ತನೇ ತರಗತಿಯವರೆಗೆ ಈಗಾಗಲೇ ನಿಗದಿಯಾಗಿರುವ 'ಸಮಾಜ ವಿಜ್ಞಾನ'ದಲ್ಲಿ ಸಂವಿಧಾನದ ಪ್ರಸ್ತಾವನೆಯ ವಿವರವಾದ ಅಧ್ಯಾಯವನ್ನು ಅಳವಡಿಸಿ ಬೋಧಿಸುವುದು ಸರಿಯಾದ ಕ್ರಮವಾಗಿದೆ.

ಚಿನ್ನಗಿರಿಶೆಟ್ಟಿ ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

● ಎಸ್‌. ರವಿಪ್ರಕಾಶ್

ಕರಗಿದ ಚಿನ್ನದಂತೆ ಬೆಳಗುತ್ತಿರುವವನೂ ಅಗ್ನಿಸ್ವರೂಪನೂ ಕತ್ತಲೆ ನಾಶ ಮಾಡುವವನೂ ವಿಶ್ವಸಾಕ್ಷಿಯಾದ ಜ್ಯೋತಿರ್ಮಯಿ ಸೂರ್ಯ, ಭೂಮಿಯ ಸಕಲ ಜೀವರಾಶಿಗಳಿಗೂ ಚೈತನ್ಯದ ಮೂಲ. ಬೆಳಕು, ಶಾಖ, ಶಕ್ತಿಯ ಆಕರವೇ ಸೂರ್ಯ. ಆತನ ಕುರಿತಂತೆ ಸೀಮಿತ ಪ್ರಮಾಣದ ಅಧ್ಯಯನ ಮಾಡುವುದು, ಅದರಿಂದ ಸಿಗುವ ವೈಜ್ಞಾನಿಕ ಮಾಹಿತಿ ಮತ್ತು ಜ್ಞಾನವನ್ನು ಮನುಕುಲಕ್ಕೆ ಹಂಚುವುದು ಇಸ್ರೊದ 'ಆದಿತ್ಯ ಎಲ್‌–1' ಯೋಜನೆಯ ಉದ್ದೇಶ. ಈ ಸಾಹಸಕ್ಕೆ ಕೈ ಹಾಕಿರುವ ನಾಲ್ಕನೇ ದೇಶ ಭಾರತ

'ಆದಿತ್ಯ'ನ ಅನ್ವೇಷಣೆ



ಸೂರ್ಯನ ಅಧ್ಯಯನಕ್ಕಾಗಿ ಭಾರತ ನಿರ್ಮಿಸಿರುವ ಪ್ರಥಮ ಅಂತರಿಕ್ಷ ವೀಕ್ಷಣಾಲಯವೇ 'ಆದಿತ್ಯ ಎಲ್‌–1'. ಇದರ ಪರಿಕಲ್ಪನೆ ಹುಟ್ಟಿದ್ದು 2008ರಲ್ಲಿ. ಆದರೆ ಅದು ಕಲ್ಪನೆಯಾಗಿಯೇ ಉಳಿದಿತ್ತು. ಈ ಯೋಜನೆಗೆ ಮತ್ತೆ ಜೀವ ಸಿಕ್ಕಿದ್ದು 2016–17ರಲ್ಲಿ. ಈ ಯೋಜನೆಗೆ ಆರಂಭಿಕ ಮೊತ್ತವಾಗಿ ₹3 ಕೋಟಿಯನ್ನು ನಿಗದಿಪಡಿಸಲಾಯಿತು. 2019ರಲ್ಲಿ ಈ ಯೋಜನೆಗೆ ₹375 ಕೋಟಿ ಒದಗಿಸಲಾಯಿತು. ಈ ಅಂತರಿಕ್ಷ ವೀಕ್ಷಣಾಲಯವನ್ನು (ಆದಿತ್ಯ ಎಲ್‌–1) 15 ಲಕ್ಷ ಕಿ.ಮೀ ದೂರದಲ್ಲಿರುವ ಲಗ್ರಾಂಜಿಯನ್ ಬಿಂದುವಿನಲ್ಲಿರಿಸಲಾಗುತ್ತದೆ. ಇದು ಯಾವುದೇ ಅಡಚಣೆ ಇಲ್ಲದೇ ನಿರಂತರವಾಗಿ ಸೂರ್ಯನಲ್ಲಿ ನಡೆಯುವ ಸೌರ ಚಟುವಟಿಕೆಗಳನ್ನು ಗಮನಿಸುತ್ತದೆ. ಇದರಲ್ಲಿ ಏಳು ಉಪಕರಣಗಳಿರುತ್ತವೆ. ನಾಲ್ಕು ವಿಶೇಷ ಉಪಕರಣಗಳು ಸೂರ್ಯನ ಪ್ರಭಾಗೋಳ, ವರ್ಣಗೋಳ ಮತ್ತು ಕಿರೀಟದ ಅಧ್ಯಯನ ಮಾಡುತ್ತವೆ. ಉಳಿದ ಮೂರು ಉಪಕರಣಗಳು ಸ್ಥಳೀಯ ಅಯಸ್ಕಾಂತ ಕ್ಷೇತ್ರ ಮತ್ತು ಕಣ ಪ್ರವಾಹದ ವೀಕ್ಷಣೆ ಮಾಡುತ್ತವೆ.

ಇದರಿಂದ ಈವರೆಗೂ ಕಗ್ಗಂಟಾಗಿರುವ ಪ್ರಶ್ನೆಗಳಾದ ಕಿರೀಟದ ಉಷ್ಣತೆ (coronal heating), ಕಿರೀಟದಿಂದ ಹೊಮ್ಮುವ ಶಕ್ತಿಶಾಲಿ ಕಣ ಪ್ರವಾಹ, ಜ್ವಾಲೋನ್ನತಿಗೆ (flare) ಮುಂಚಿನ ಮತ್ತು ನಂತರದ ಚಟುವಟಿಕೆ, ಅಂತರ್‌ ಗ್ರಹ ಮಾಧ್ಯಮದಲ್ಲಿನ ಕಣ ಮತ್ತು ಅಯಸ್ಕಾಂತೀಯ ಕ್ಷೇತ್ರದ ಪಸರಿಸುವಿಕೆ ಮುಂತಾದ ವಿಷಯಗಳ ಬಗ್ಗೆ ಉತ್ತರ ಕಂಡುಕೊಳ್ಳಬಹುದು.



ಏಳು ಉಪಕರಣಗಳು ಯಾವುವು?

(ಪೇಲೋಡ್; ತಯಾರಿಸಿದ ಸಂಸ್ಥೆ)

- **ವಿಇಎಲ್‌ಸಿ**
  ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ, ಬೆಂಗಳೂರು
- **ಎಸ್‌ಯುಐಟಿ**
  ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರೊನಮಿ ಮತ್ತು ಆಸ್ಟ್ರೊಫಿಸಿಕ್ಸ್, ಪುಣೆ
- **ಎಎಸ್‌ಪಿಇಎಕ್ಸ್**
  ಫಿಸಿಕಲ್ ರೀಸರ್ಚ್ ಲ್ಯಾಬೊರೇಟರಿ, ಅಹಮದಾಬಾದ್
- **ಪಿಎಪಿಎ**
  ಸ್ಪೇಸ್ ಫಿಸಿಕ್ಸ್ ಲ್ಯಾಬೊರೇಟರಿ, ವಿಕ್ರಂ ಸಾರಾಭಾಯಿ ಸ್ಪೇಸ್ ಸೆಂಟರ್, ತಿರುವನಂತಪುರ
- **ಸೋಲೆಕ್ಸ್, ಹೆಲ್‌1ಒಎಸ್**
  ಯು.ಆರ್.ರಾವ್ ಸ್ಯಾಟಲೈಟ್ ಸೆಂಟರ್, ಬೆಂಗಳೂರು
- **ಮ್ಯಾಗ್ನೆಟೊಮೀಟರ್**
  ಲ್ಯಾಬೊರೇಟರಿ ಫಾರ್ ಎಲೆಕ್ಟ್ರೊ ಆಪ್ಟಿಕ್ಸ್ ಸಿಸ್ಟಮ್, ಬೆಂಗಳೂರು

ಸೌರ ಮಂಡಲದ ಮಹಾ ನಕ್ಷತ್ರ

ಸೂರ್ಯ, ಭೂಮಿಗೆ ಅತ್ಯಂತ ಸಮೀಪದಲ್ಲಿರುವ ನಕ್ಷತ್ರ. 15 ಕೋಟಿ ಕಿ.ಮೀ ದೂರದಲ್ಲಿದೆ. ಆಕಾಶದಲ್ಲಿ ನಮ್ಮ ದೃಷ್ಟಿಗೆ ನಿಲುಕುವ ದೊಡ್ಡ ಕಾಯ. ಇದರಿಂದ ಬೆಳಕು ಹೊರಬಿದ್ದು, ಭೂಮಿ ತಲುಪಲು 8 ನಿಮಿಷ ಬೇಕಾಗುತ್ತದೆ. ಸೂರ್ಯ ಎಷ್ಟು ದೊಡ್ಡವನು ಎಂದರೆ ಅವನೊಳಗೆ 13 ಲಕ್ಷ ಭೂಮಿಗಳನ್ನು ಕೂಡಿಡಬಹುದು. ವಿಜ್ಞಾನಿಗಳು ಇದನ್ನು ಸಾಮಾನ್ಯ ನಕ್ಷತ್ರ ಎಂದು ಕರೆಯುತ್ತಾರೆ. ಏಕೆಂದರೆ ಇದಕ್ಕಿಂತ ನೂರು ಪಟ್ಟು ದೊಡ್ಡದಿರುವ ನಕ್ಷತ್ರಗಳು ನಮ್ಮ ಗ್ಯಾಲಕ್ಸಿಗಳಲ್ಲಿವೆ. ಆರ್ದ್ರಾ ನಕ್ಷತ್ರ ನಮ್ಮ ಸೂರ್ಯನಿಗಿಂತ 1,400 ಪಟ್ಟು ದೊಡ್ಡದು. ಇಡೀ ಸೂರ್ಯ ಅನಿಲಗಳಿಂದಾಗಿದೆ. ಭೂಮಿಯಂತೆ ಗಟ್ಟಿ ಬಂಡೆಯಲ್ಲ. ಅಲ್ಲಿಯ ಮೇಲ್ಮೈ ತಾಪಮಾನ 5,700 ಕೆಲ್ವಿನ್ ಅಂದರೆ 5,426.85 ಡಿಗ್ರಿ ಸೆಲ್ಸಿಯಸ್ ಇದೆ.
ಇದರ ಗರ್ಭದ ಉಷ್ಣಾಂಶ 1,50,00,000 ಕೆಲ್ವಿನ್ (14,999,726.85 ಡಿಗ್ರಿ ಸೆಲ್ಸಿಯಸ್)!


ಸೂರ್ಯನ ಅಧ್ಯಯನವೇಕೆ?

ಭೂಮಿಯ ಸಕಲ ಜೀವರಾಶಿಗಳಿಗೂ ಚೈತನ್ಯದಾಯಕ ಸೂರ್ಯ ಎನ್ನುವುದೇನೋ ಸರಿ. ಆದರೆ, ಆತನ ಕೋಪ, ತಾಪ, ರೌದ್ರತೆಯ ಫಲ ಅನುಭವಿಸಬೇಕಾದವರೂ ನಾವೇ ಅಲ್ಲವೇ? ಸೂರ್ಯನ ಚಟುವಟಿಕೆಗಳಾದ ಸೌರ ಜ್ವಾಲೆ, ಸೌರ ತಂತು, ಸೌರ ಮಾರುತಗಳು ನೇರವಾಗಿ ಭೂಮಿಯ ಮೇಲೆ ಪರಿಣಾಮ ಬೀರುತ್ತವೆ. ಸೌರ ಕಿರೀಟದಲ್ಲಿರುವ (ಕೊರೋನ) ಪ್ಲಾಸ್ಮಾ ಕಣಗಳು ಸೆಕೆಂಡಿಗೆ 100 ಕಿ.ಮೀಗಳಷ್ಟು ವೇಗದಲ್ಲಿ ಅಡ್ಡಾದಿಡ್ಡಿಯಾಗಿ ಧಾವಿಸುತ್ತಿರುತ್ತವೆ. ಪ್ರಭಾಗೋಳದ ಬಳಿ ಇವನ್ನು ಗುರುತ್ವವು ಹಿಡಿದಿಟ್ಟುಕೊಂಡಿರುತ್ತದೆ. ಇನ್ನೂ ಎತ್ತರದಲ್ಲಿ ಪ್ರಭಾ ವಲಯವು ಕಡಿಮೆ ಆಗುವುದರಿಂದ ಅಯಾಣುಗಳು ದೂರ ದೂರಕ್ಕೆ ಚಿಮ್ಮುತ್ತವೆ. ಹೀಗೆ ಚಿಮ್ಮಿದ ಶಕ್ತಿಶಾಲಿ ಕಣಗಳು ಶಬ್ದದ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಧಾವಿಸುತ್ತವೆ. ಇದನ್ನು ಸೌರ ಮಾರುತ ಎನ್ನಲಾಗುತ್ತದೆ. ವಿಜ್ಞಾನಿ ಯೂಜೆನ್ ಪಾರ್ಕರ್ (1927–2022) ಅವರು ಇದರ ಅಸ್ತಿತ್ವ ಮತ್ತು ವೇಗವನ್ನು ಊಹಿಸಿದ್ದರು. ಸೂರ್ಯನ ಅಯಸ್ಕಾಂತ ಶಕ್ತಿ ಬಹಳ ಹೆಚ್ಚು. ಇದು ಇಡೀ ಸೌರವ್ಯೂಹವನ್ನೇ ಅಂದರೆ ಸೌರಗೋಳದ ಅಂಚಿನವರೆಗೆ ವ್ಯಾಪಿಸಿದೆ. ಅಯಸ್ಕಾಂತ ಶಕ್ತಿಯನ್ನು ಎಲ್ಲೆಡೆ ವರ್ಗಾಯಿಸುವ ಪ್ರಮುಖ ಮಾಧ್ಯಮವೇ ಸೌರ ಮಾರುತ. ಇದರ ಗರಿಷ್ಠ ಚಟುವಟಿಕೆಯ ಅವಧಿಯಲ್ಲಿ ಹೊರ ಚೆಲ್ಲುವ ಶಕ್ತಿಶಾಲಿ ಕಣ ಚಿಮ್ಮುವಿಕೆಗೆ ಕರೋನಲ್ ಮಾಸ್ ಎಜೆಕ್ಷನ್ ಎನ್ನಲಾಗುತ್ತದೆ. ಇವು ಭೂಮಿಯ ಮೇಲೆ ಅಪ್ಪಳಿಸಿದಾಗ ವಿದ್ಯುತ್ ಸಂಪರ್ಕ, ದೂರಸಂಪರ್ಕಗಳಲ್ಲಿ ಏರುಪೇರಾಗಿ, ಅನಾಹುತಗಳು ಆಗುತ್ತವೆ. ಇದನ್ನು ಗಮನಿಸಲೆಂದೇ ಅಂತರಿಕ್ಷ ವೀಕ್ಷಣಾಲಯವನ್ನು ಕಳುಹಿಸಲಾಗುತ್ತದೆ. ಅಮೆರಿಕ, ಜಪಾನ್, ಯೂರೋಪ್ ಇಂತಹ ವೀಕ್ಷಣಾಲಯವನ್ನು ಕಳುಹಿಸಿದ್ದು, ಭಾರತ ಈಗ 'ಆದಿತ್ಯ'ವನ್ನು ಕಳುಹಿಸುತ್ತಿದೆ. ದೇಶದಲ್ಲಿರುವ ವಿದ್ಯುತ್, ದೂರಸಂಪರ್ಕ ವ್ಯವಸ್ಥೆ, ನಭದಲ್ಲಿ ಸುತ್ತು ಹಾಕುತ್ತಿರುವ ಉಪಗ್ರಹಗಳ ರಕ್ಷಣೆಗೆ ಇದು ಸಹಾಯಕ.

ಶತಮಾನಗಳ ಭೂ 'ಭವಿಷ್ಯ'ದ ಮುನ್ಸೂಚನೆ

'ಭೂಮಿಯನ್ನು ನಿರಂತರವಾಗಿ ಬಾಧಿಸುವ ಹವಾಮಾನ ವೈಪರೀತ್ಯ, ಹವಾಮಾನ ಬದಲಾವಣೆಗಳಿಗೂ ಸೂರ್ಯನ ಚಟುವಟಿಕೆಗಳು ಸಂಬಂಧವಿದೆಯೇ? ಬರ, ಪ್ರವಾಹ, ನಿಸರ್ಗ ವಿಕೋಪಕ್ಕೂ ಈ ಚಟುವಟಿಕೆಗಳಿಗೂ ನಂಟು ಇರಬಹುದೇ? ಇದ್ದರೆ ಅದನ್ನು ಮುಂಚಿತವಾಗಿ ತಿಳಿದುಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗಳು ವಿಜ್ಞಾನಿಗಳನ್ನು ಬಹುಕಾಲದಿಂದಲೂ ಕಾಡುತ್ತಿವೆ. ಇದನ್ನು ಕರಾರುವಕ್ಕಾಗಿ ಅಧ್ಯಯನ ಮಾಡಿದರೆ, ಸೂರ್ಯನ ವರ್ತನೆಯ ಭೂತ, ವರ್ತಮಾನ ಮತ್ತು ಭವಿಷ್ಯದ ಕುರಿತು ಮಾಹಿತಿ ಸಂಗ್ರಹಿಸಿಟ್ಟುಕೊಳ್ಳಬಹುದು. ಮುಂದಿನ 10 ಅಥವಾ 100 ವರ್ಷಗಳಲ್ಲಿ ಹವಾಮಾನ ಬದಲಾವಣೆ ಹೇಗಾಗುತ್ತದೆ ಎನ್ನುವುದನ್ನು ತಿಳಿಯಬಹುದು. ಅದರಿಂದ ಸೃಷ್ಟಿಯಾಗುವ ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಮುನ್ಸೂಚನೆ ಪಡೆಯಬಹುದು. ಅದಕ್ಕೆ ತಕ್ಕಂತೆ ಸರ್ಕಾರಗಳು ಪರಿಹಾರ ಯೋಜನೆಗಳನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ. 'ಆದಿತ್ಯ'ನಿಂದ ಬಂದ ಮಾಹಿತಿಯ ದತ್ತಾಂಶದಿಂದ ಹಲವು ದಶಕಗಳು ಮತ್ತು ಶತಮಾನಗಳ ಹವಾಮಾನ ಬದಲಾವಣೆಯನ್ನು ಮುಂಚಿತವಾಗಿಯೇ ಗ್ರಹಿಸಲು ಸಾಧ್ಯ' ಎನ್ನುತ್ತಾರೆ ಸೌರ ಭೌತ ವಿಜ್ಞಾನಿ ದೀಪಂಕರ್ ಬ್ಯಾನರ್ಜಿ.

'ನಮ್ಮ ಅಸ್ತಿತ್ವ ಮತ್ತು ಭೂಮಿಯಲ್ಲಿ ಜೀವಿಗಳು ಇರುವುದೇ ಸೂರ್ಯನಿಂದಾಗಿ. ಎಲ್ಲ ಬಗೆಯ ಶಕ್ತಿಗಳು ಬರುವುದೇ ಸೂರ್ಯನಿಂದ. ಈಗಿನಂತೆಯೇ ಮುಂದೆಯೂ ಸೂರ್ಯ



ವಿಕಿರಣವನ್ನು ಸೂಸುತ್ತದೆಯೊ, ಅದರಲ್ಲಿ ಬದಲಾವಣೆ ಆಗುತ್ತದೆಯೊ ಎಂಬುದನ್ನು ಅರ್ಥೈಸಿಕೊಳ್ಳುವುದು ಮುಖ್ಯವಾಗಿದೆ. ಸೂರ್ಯ ಈಗಿನಂತೆಯೇ ಶಕ್ತಿ ಸೂಸದೇ ಇದ್ದರೆ, ನಮ್ಮ ಹವಾಮಾನದ ಮೇಲೆ ಭಾರೀ ಪ್ರಮಾಣದ ಪರಿಣಾಮ ಬೀರಲಿದೆ. ಅದರಿಂದ ಉಂಟಾಗುವ ಪರಿಣಾಮಗಳನ್ನು ಊಹಿಸಲೂ ಸಾಧ್ಯವಿಲ್ಲ' ಎನ್ನುತ್ತಾರೆ ಅವರು.

ಸೌರ ಅಧ್ಯಯನ ನಡೆಸುತ್ತಿರುವ ಅಂತರಿಕ್ಷ ವೀಕ್ಷಣಾಲಯಗಳು



ಸೋಹೋ ವೀಕ್ಷಣಾಲಯ ಚಿತ್ರ: ನಾಸಾ

- **ಹಿನೋಡೆ:** ಜಪಾನಿನ ಜಾಕ್ಸಾ ಸಂಸ್ಥೆಯು 2006ರಲ್ಲಿ ಉಡಾವಣೆ ಮಾಡಿದ ವೀಕ್ಷಣಾಲಯ
- **ಸೋಹೋ:** ಅಮೆರಿಕದ ನಾಸಾ ಸಂಸ್ಥೆಯು 1995ರಲ್ಲಿ ಉಡಾವಣೆ ಮಾಡಿದೆ. ಸೂರ್ಯನ ವೀಕ್ಷಣೆಯ ಜತೆಗೆ ಸೂರ್ಯನ ಸಮೀಪಿಸುವ ಧೂಮಕೇತುಗಳನ್ನು ಪತ್ತೆ ಮಾಡುತ್ತದೆ. ಈವರೆಗೆ, 4,000ಕ್ಕೂ ಹೆಚ್ಚು ಧೂಮಕೇತುಗಳನ್ನು ಪತ್ತೆ ಮಾಡಿದೆ
- **ಮ್ಯಾಗ್ನೆಟಿಕ್ ಮಲ್ಟಿ ಸ್ಕೇಲ್:** ಇದನ್ನು ಯೂರೋಪಿಯನ್ ಸ್ಪೇಸ್ ಏಜೆನ್ಸಿ 2015ರಲ್ಲಿ ಉಡಾವಣೆ ಮಾಡಿತು. ಅಯಸ್ಕಾಂತ ಕ್ಷೇತ್ರ ಮತ್ತು ರಿಕನೆಕ್ಷನ್ ವಿದ್ಯಮಾನಗಳನ್ನು ಅಧ್ಯಯನ ಮಾಡುತ್ತದೆ
- **ಯೂಲಿಸಿಸ್:** 1990ರಲ್ಲಿ ಯೂರೋಪಿಯನ್ ಸ್ಪೇಸ್ ಏಜೆನ್ಸಿ ಮತ್ತು ನಾಸಾ ಜಂಟಿಯಾಗಿ ಉಡಾವಣೆ ಮಾಡಿವೆ. ಇದು ಸೂರ್ಯಗೋಳದ ಉತ್ತರ ಧ್ರುವವನ್ನು ವೀಕ್ಷಣೆ ಮಾಡುತ್ತದೆ
- **ಸ್ಟೀರಿಯೋ ಎ ಮತ್ತು ಬಿ:** ಈ ಜೋಡಿ ನೌಕೆಗಳನ್ನು ನಾಸಾ 2006ರಲ್ಲಿ ಉಡಾವಣೆ ಮಾಡಿತು. ಸೂರ್ಯನನ್ನು ಬೇರೆ ಬೇರೆ ಕೋನಗಳಿಂದ ವೀಕ್ಷಿಸಿ ಅದರ ಮೂರು ಆಯಾಮದ ಚಿತ್ರಗಳನ್ನು ಒದಗಿಸಿವೆ
- **ಸೋಲಾರ್ ಡೈನಮಿಕ್ ಅಬ್ಸರ್ವೇಟರಿ:** ನಾಸಾ 2010ರಲ್ಲಿ ಈ ವೀಕ್ಷಣಾಲಯವನ್ನು ಉಡಾವಣೆ ಮಾಡಿದೆ. ಇದು ಅಯಸ್ಕಾಂತ ಕ್ಷೇತ್ರವನ್ನು ದಾಖಲು ಮಾಡುತ್ತಿದೆ
- **ಪಾರ್ಕರ್ ವೀಕ್ಷಣಾಲಯ:** 2018ರಲ್ಲಿ ನಾಸಾ ಇದನ್ನು ಉಡಾವಣೆ ಮಾಡಿದ್ದು ಸೂರ್ಯನ ಕಿರೀಟವನ್ನು ಪಾರ್ಕರ್ ಹಾದು ಹೋಗುವಂತೆ ವಿನ್ಯಾಸ ಮಾಡಲಾಗಿದೆ
- **ಸೋಲಾರ್ ಆರ್ಬೈಟರ್:** ನಾಸಾ 2020 ರಲ್ಲಿ ಉಡಾವಣೆ ಮಾಡಿದ್ದು, ಈ ವೀಕ್ಷಣಾಲಯ ಸೂರ್ಯನನ್ನು ದೀರ್ಘವೃತ್ತ ಕಕ್ಷೆಯಲ್ಲಿ ಸುತ್ತುತ್ತಿದೆ

(ಅಮೆರಿಕ, ಯೂರೋಪ್, ಜಪಾನ್‌ನ ಬಾಹ್ಯಾಕಾಶ ಸಂಸ್ಥೆಗಳು. ನಾಲ್ಕನೇ ದೇಶ ಭಾರತ)

ಆಧಾರ: ಇಸ್ರೊ ಮತ್ತು ನವಕರ್ನಾಟಕ ಪ್ರಕಾಶನದ ಖಗೋಳದರ್ಶನ ಕೃತಿ

ಸೆ.6ಕ್ಕೆ 'ಲೂಸಿಯಾ' ಮರು ಬಿಡುಗಡೆ

ನೀನಾಸಂ ಸತೀಶ್ ಹಾಗೂ ನಿರ್ದೇಶಕ ಪವನ್ ಕುಮಾರ್ ಅವರ ಸಿನಿ ಜರ್ನಿಗೆ ದೊಡ್ಡ ತಿರುವು ನೀಡಿದ ಸಿನಿಮಾ 'ಲೂಸಿಯಾ'. ಈ ಸಿನಿಮಾ ಬಿಡುಗಡೆಯಾಗಿ 10 ವರ್ಷ ಕಳೆದಿದ್ದು, ಈ ಸಂದರ್ಭದಲ್ಲೇ ಸಿನಿಮಾವನ್ನು ಮರು ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ.

ಸೆ.6ರಂದು ಸಿನಿಮಾ ಮರು ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಪವನ್ ತಿಳಿಸಿದ್ದಾರೆ. 10ನೇ ವರ್ಷದ ಸಂಭ್ರಮವನ್ನು ಪವನ್, ಸತೀಶ್ ಹಾಗೂ ನಟಿ ಶ್ರುತಿ ಹರಿಹರನ್ ಅವರು ಶುಕ್ರವಾರ(ಸೆ.1) ಜೊತೆಯಾಗಿ ಆಚರಿಸಿದರು. 'ಸಿನಿಮಾ ಕೇವಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಮರು ಬಿಡುಗಡೆ ಆಗಲಿದ್ದು, ರಾಜ್ಯದಾದ್ಯಂತ ಸುಮಾರು 12–15 ಪರದೆಗಳಲ್ಲಿ ಪ್ರದರ್ಶನವಿರಲಿದೆ. ಅಭಿಮಾನಿಗಳಿಗೆ ಮತ್ತೊಮ್ಮೆ ಈ ಸಿನಿಮಾವನ್ನು ನೋಡುವ ಅವಕಾಶವಿದು. ಬೇಡಿಕೆ ಬಂದರೆ ಏಕಪರದೆ ಚಿತ್ರಮಂದಿರಗಳಲ್ಲೂ ಸಿನಿಮಾ ರಿರಿಲೀಸ್ ಮಾಡಲಿದ್ದೇವೆ.



ಪವನ್, ಸತೀಶ್ ಹಾಗೂ ಶ್ರುತಿ

ಇದು ವಿತರಕರಿಗೆ ಬಿಟ್ಟಿದ್ದು. ಕಳೆದ 10 ವರ್ಷದಲ್ಲಿ ಹಲವು ಬದಲಾವಣೆಗಳಾಗಿವೆ. ನಮ್ಮ ವೈಯಕ್ತಿಕ ಬದುಕು, ಸಿನಿಮಾ ಬದುಕಿನ ಗ್ರಾಫ್‌ನಲ್ಲಿ ಏರಿಳಿತಗಳೂ ಆಗಿವೆ' ಎಂದು ನೆನಪಿಸಿಕೊಳ್ಳುತ್ತಾರೆ ಪವನ್.

'10 ವರ್ಷ ಕಳೆದರೂ, ಇಂದಿಗೂ ನನ್ನನ್ನು 'ಲೂಸಿಯಾ' ಸಿನಿಮಾದಿಂದಲೇ ಗುರುತಿಸುವಾಗ ಖುಷಿ ಆಗುತ್ತದೆ. ಅಂದು ಆ ಸಿನಿಮಾ ರಿಲೀಸ್ ಮಾಡಿದರೆ ಸಾಕು ಎನ್ನುವಂತಹ ಸ್ಥಿತಿ ಇತ್ತು. ಇಂದು ರಿರಿಲೀಸ್! ಇದನ್ನು ಅಂದು ಊಹಿಸಿಯೂ ಇರಲಿಲ್ಲ' ಎನ್ನುತ್ತಾರೆ ಪವನ್. ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್ ವಿತರಣೆ ಮಾಡುತ್ತಿದೆ.

ಸಿನಿ ಬಿಟ್ಸ್


'ಶಾಖಾಹಾರಿ'ಯಾದ ರಂಗಾಯಣ ರಘು

ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಶಾಖಾಹಾರಿ' ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಕೀಳಂಬಿ ಮೀಡಿಯಾ ಲ್ಯಾಬ್' ಮೂಲಕ ರಾಜೇಶ್ ಕೀಳಂಬಿ ಹಾಗೂ ರಂಜಿನಿ ಪ್ರಸನ್ನ ಜೊತೆಗೂಡಿ ನಿರ್ಮಿಸಿರುವ ಚಿತ್ರಕ್ಕೆ ಸಂದೀಪ್ ಸುಂಕದ್ ಆ್ಯಕ್ಷನ್–ಕಟ್ ಹೇಳಿದ್ದಾರೆ.

ಹೋಟೆಲ್ ಬಾಣಸಿಗನಾಗಿ ರಂಗಾಯಣ ರಘು ಕಾಣಿಸಿಕೊಂಡಿದ್ದು, ನಿರ್ದೇಶಕ ಯೋಗರಾಜ್ ಭಟ್ ಬೆಂಕಿಯ ಮೂಲಕ ವಿಶಿಷ್ಟ ರೀತಿಯಲ್ಲಿ ಶೀರ್ಷಿಕೆ ಅನಾವರಣಗೊಳಿಸಿ ಶುಭ ಕೋರಿದರು.

'ತೀರ್ಥಹಳ್ಳಿಯ ಊರೊಂದರಲ್ಲಿ ನಡೆಯುವ ನಿಗೂಢ ಘಟನೆಯ ಸುತ್ತ ಸಾಗುವ ಕಥೆ ಇದಾಗಿದ್ದು, ಎಸ್.ಐ ಆಗಿ ಗೋಪಾಲಕೃಷ್ಣ ದೇಶಪಾಂಡೆ ಮತ್ತು ಸುಜಯ್ ಶಾಸ್ತ್ರಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಹರಿಣಿ, ಪ್ರತಿಮಾ ನಾಯಕ್ ಮತ್ತಿತರು ಚಿತ್ರದಲ್ಲಿದ್ದಾರೆ. ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ ಸಂದೀಪ್.

ವಿಶ್ವಜಿತ್ ರಾವ್ ಛಾಯಾಗ್ರಹಣ, ಶಶಾಂಕ್ ನಾರಾಯಣ ಸಂಕಲನ, ಮಯೂರ್ ಅಂಬೆಕಲ್ಲು ಸಂಗೀತ ಚಿತ್ರಕ್ಕಿದೆ. ಸಂಪೂರ್ಣ ಮಲೆನಾಡಿನಲ್ಲೇ ಈ ಚಿತ್ರದ ಚಿತ್ರೀಕರಣ ನಡೆದಿದೆ.



ರಂಗಾಯಣ ರಘು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5429


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸ್ವರ್ಗ ಇಲ್ಲಿಯೇ ಇದೆಯಲ್ಲಾ! (4)
3. ತೋರಿಕೆಗಾಗಿ ನಗುವಿಕೆ (4)
5. ಒನಪು ತೋರಿದಾಗ ಬಂದಿರುವ ಸ್ಮರಣೆ (3)
6. ಗುಪ್ತ ನಿಧಿಯಿದು (3)
8. ಕುಲದಲ್ಲೇ ನುಸುಳಿರುವ ಕ್ಷೇಮ (3)
9. ಹಿತವಲ್ಲದ್ದು ಇದು (3)
10. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12. ವನದಲ್ಲಿಯೇ ಎಲ್ಲವನ್ನು ತ್ಯಜಿಸುವಿಕೆ (3)
14. ಯಂತ್ರ ನಡುವಿದ್ದರೆ ಈ ಹಿಡಿತ! (4)
15. ಚಾರನ ಕೆಟ್ಟ ನಡುವಳಿಕೆ (4)

ಮೇಲಿಂದ ಕೆಳಕ್ಕೆ

1. ಹಾಲು ಕರೆಯುವ ಹಸು (4)
2. ಮದಿಸಿದ ಗಜ (3)
3. ಚರುಪು ನೀಡಿದಾಗಲೇ ಉಕ್ಕಿದ ಉತ್ಸಾಹ! (3)
4. ಪ್ರಾಚೀನ ಕಾಲದ ವಿದ್ಯಾಭ್ಯಾಸ ಕೇಂದ್ರ (4)
7. ಪರ್ವ ಕಾಲದಲ್ಲಿ ಏರಿದ ಬೆಟ್ಟ (3)
8. ಅಷ್ಟದಿಕ್ಪಾಲಕರಲ್ಲಿ ಈತ ಬಲು ಶ್ರೀಮಂತ (3)
9. ಸ್ಮರಣ ಶಕ್ತಿ ಚನ್ನಾಗಿರುವವನು (4)
11. ಕರದಲ್ಲಿರುವ ದೇಹ (4)
12. ನೀರಿನ ಅಧಿದೇವತೆ (3)
13. ನನಗದು ಬೇಕು ಎಂದಾಗ ಕೈಯಲ್ಲಿನ ಹಣ (3)



5428ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪತ್ತಲ 3.ಭವಿಷ್ಯ
5.ಕ್ಷೇತ್ರ 6.ಅಧಮ
7.ಮಹಾರಾಜ 8.ಸತ್ಯವಾನ
10.ತವಂಬಜಾಂ
11.ಚಾಡಿಕೋರ
13.ತವರ 14.ಭಾರ
15.ಅಗಸೆ 17.ಸ್ವಭಾವ
ಮೇಲಿಂದ ಕೆಳಕ್ಕೆ:
1.ಲಾಭ 2.ಪತ್ರ
4.ವಿರಹಾ
5.ಕ್ಷೇಮಸಮಾಚಾರ
6.ಅಜಗಜಾಂತರ 7.ಮಥಿತ
9.ನಶ್ವರ 12.ಕೋಡಗ
14.ಭಾವ 16.ಸೆಲೆ

ಸುಡೊಕು 5815

		1			7		3	
	7		2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

ಸುಡೊಕು 5814

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ತೃತೀಯ ಗಂ. 20-50 ನಕ್ಷತ್ರ: ಉತ್ತರಾಭಾದ್ರ ಗಂ. 12-31 ಯೋಗ: ಶೂಲ ಗಂ. 09-22 ಕರಣ: ವಣಿಜ ಗಂ. 10-16, ಸಿಂಹ ಮಾಸದ 16 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 1. ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-23 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 16 ಸಫರ್
ದಿನ ಭವಿಷ್ಯ : ರಾಘವೇಂದ್ರಸ್ವಾಮಿಗಳ ಉತ್ತರಾರಾಧನೆ, ತೀಜ್ರಿ (ಸಿಂಧಿ)
ಅದೃಷ್ಟ ಸಂಖ್ಯೆ : 6, 12

ಮೇಷ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ನಿಮ್ಮ ಸಂಬಂಧಿಕರಿಂದ ಅಥವಾ ಸ್ನೇಹಿತರಿಂದ ನೆರವೇರಲಿದೆ. ನಿರುದ್ಯೋಗಿಗಳು ಒಂದು ಸ್ಥಿರವಾದ ಉದ್ಯೋಗ ಪಡೆಯುವ ಸಾಧ್ಯತೆ ಇರಲಿದೆ.

ವೃಷಭ: ಜೇನುಹುಳಗಳಂಥ ಕೀಟಗಳಿಂದ ಅಥವಾ ಇತರೆ ಜಂತುಗಳ ಕಚ್ಚುವಿಕೆ ಸಂಭವಿಸಬಹುದು ಜಾಗ್ರತರಾಗಿರಿ. ಪದವಿ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಹೆಚ್ಚಿನ ಪರಿಶ್ರಮ ಪಡಬೇಕಾಗುತ್ತದೆ. ಶೀತಬಾಧೆ ಎದುರಾಗಬಹುದು.

ಮಿಥುನ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜತೆ ಲಾಭವೂ ದೊರಕಲಿದೆ. ದಿನಸಿ ವರ್ತಕರ ಆರ್ಥಿಕತೆಯಲ್ಲಿ ದುರ್ಬಲವಾಗಬಹುದು, ಎಚ್ಚರವಹಿಸಿ. ಕೊಡು ಕೊಳ್ಳುವಿಕೆ ವ್ಯವಹಾರ ಹೆಚ್ಚಲಿದೆ.

ಕರ್ಕಾಟಕ: ಅಭಿವೃದ್ಧಿಗೆ ಬೇಕಾದ ಅದ್ಭುತ ಅವಕಾಶವು ದೇವರ ಆಶೀರ್ವಾದದಿಂದ ಸಿಗಲಿದೆ. ಹೊಸದಾಗಿ ಉದ್ಯೋಗಕ್ಕೆ ಸೇರಲು ಹೆಚ್ಚಿನ ಸಿದ್ಧತೆ ನಡೆಸಿಕೊಳ್ಳಿರಿ. ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಇರುವುದು.

ಸಿಂಹ: ಯಾವುದೇ ಗುತ್ತಿಗೆ ನೀಡುವ ಮೊದಲು ಎಲ್ಲ ದಾಖಲೆ ಪತ್ರಗಳಲ್ಲಿ ಸೂಕ್ತ ಸಹಿ ಪಡೆದುಕೊಳ್ಳಲು ಮರೆಯದಿರಿ. ಕೆಲಸ-ಕಾರ್ಯವನ್ನು ಜಾಣ್ಮೆಯಿಂದ ಸೂಕ್ಷ್ಮವಾಗಿ ನಿರ್ವಹಿಸುವಂಥ ಬುದ್ಧಿವಂತಿಕೆ ತೋರುವಿರಿ.

ಕನ್ಯಾ: ಧೀಮಂತರ ಹಾಗೂ ಪ್ರಭಾವಿ ವ್ಯಕ್ತಿಯ ಸಹಕಾರದಿಂದ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ನೆರವೇರಿಸಿಕೊಳ್ಳುವಿರಿ. ಹೊಸ ಮನೆಯ ನಿರ್ಮಾಣದ ಕೆಲಸ ಪೂರೈಸಿಕೊಳ್ಳುವ ಬಗ್ಗೆ ನಿಮ್ಮ ಹೆಚ್ಚಿನ ಗಮನವಿರಲಿ.

ತುಲಾ: ಯಾವುದೇ ಪರಿಸ್ಥಿತಿಯಲ್ಲಿಯೂ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡುವುದು ಅಭ್ಯಾಸವಾಗಿರಲಿ. ನೀವು ಹಣಕಾಸಿನ ವಿಷಯದಲ್ಲಿ ಜಾಗರೂಕತೆ ವಹಿಸಬೇಕಾಗುವುದು. ಆರೋಗ್ಯಸುಸ್ಥಿತಿಯಲ್ಲಿರುವುದು.

ವೃಶ್ಚಿಕ: ಕೌಟುಂಬಿಕ ಸಮಸ್ಯೆಗಳಿಗೆ ಎದುರುತ್ತರ ನೀಡದಿರುವುದು ಅತ್ಯುನ್ನತ ಪರಿಹಾರವೆಂದು ಅನುಭವಕ್ಕೆ ಬರುತ್ತದೆ. ಹಣಕಾಸು ನಿರ್ವಹಣೆಯಲ್ಲಿರುವ ಕುಶಲಮತಿ ಸಹಾಯಕ್ಕೆ ಬರಲಿದೆ. ಅನಿರೀಕ್ಷಿತ ಕೆಲಸಗಳಿಂದ ಸಂತಸ.

ಧನು: ನಿಮ್ಮ ಯೋಜನೆಗಳು ಅರ್ಧದಲ್ಲಿಯೇ ನಿಂತಿರುವುದರಿಂದ ಆಗಿದ್ದ ನಿರಾಸೆಯು ನಿಮ್ಮ ಆತ್ಮವಿಶ್ವಾಸದಿಂದ ಈ ದಿನ ಪುನಃ ಸಕಾರಾತ್ಮಕ ತಿರುವು ಪಡೆದುಕೊಳ್ಳಲಿದೆ. ಅದು ನಿಮ್ಮಲ್ಲಿ ಹೆಚ್ಚಿನ ಸಂತೋಷ ಮೂಡಿಸುವುದು.

ಮಕರ: ದೃಷ್ಟಿಕೋನ ವಿಶಾಲವಾಗಿರುವುದರಿಂದ ವ್ಯವಹಾರ ಸುಗಮವಾಗಿ ನಡೆಯುವುದು. ಬಡಗಿ ಕೆಲಸಮಾಡುವವರಿಗೆ ಇಂದು ಸುಯೋಗದ ದಿನ. ಮಕ್ಕಳ ಜತೆ ದೂರದ ಪ್ರವಾಸದ ಸಾಧ್ಯತೆ ಕಂಡುಬರುವುದು.

ಕುಂಭ: ತಾಯಿಗೆ ಕಣ್ಣಿನ ದೋಷ ಕಾಣಿಸಿಕೊಂಡಲ್ಲಿ ತಕ್ಷಣದಲ್ಲಿ ವೈದ್ಯರನ್ನು ಭೇಟಿಮಾಡಿ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿಬರುತ್ತದೆ. ಆರ್ಥಿಕ ವ್ಯಯವೂ ಸಹ ಅನಿವಾರ್ಯವಾಗುವುದು.

ಮೀನ: ಸೋಲನ್ನು ಬಯಸುವವರ ಸಂಖ್ಯೆ ಇಳಿಮುಖವನ್ನು ಹೊಂದುವುದು. ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ವಸ್ತ್ರ ವಿನ್ಯಾಸಗಾರರಿಗೆ ವಿಶೇಷವಾದ ಪರಿಣತಿಯು ಅಗತ್ಯವಾಗುವುದು.


ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-8460
ಪುತ್ತೂರು	₹8000-9200
ತುರುವೇಕೆರೆ	₹8400-8400

ಸುಧಾ, ಮಯೂರ ಓದಿರಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,253
ಇಂದಿನ ಅಂತ್ಯ	19,435
▲	182
ದಿನದ ಗರಿಷ್ಠ	19,458

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1740(1760)
ಸೋಯಾ (ರಿಫೈನ್ಡ್)	₹925(920)
ಸೂರ್ಯಕಾಂತಿ (ರಿಫೈನ್ಡ್)	₹925(920)
ಪಾಮೋಲಿನ್	₹854(848)

ವಿನಿಮಯ ದರ

$ ಡಾಲರ್	82.62
£ ಪೌಂಡ್	104.90
€ ಯುರೊ	89.77
¥ ಯೆನ್ (100ಕ್ಕೆ)	57

ಅದಾನಿ ಸಮೂಹ ಕಂಪನಿಗಳ ಷೇರು ಮೌಲ್ಯ ಹೆಚ್ಚಳ

ನವದೆಹಲಿ / ಮುಂಬೈ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಷೇರುಗಳು ಶುಕ್ರವಾರದ ವಹಿವಾಟಿನಲ್ಲಿ ಚೇತರಿಕೆ ಕಂಡುಕೊಂಡವು. ಕಂಪನಿಗಳ ಒಟ್ಟು ಬಂಡವಾಳ ಮೌಲ್ಯ ₹13,500 ಕೋಟಿಯಷ್ಟು ಏರಿಕೆ ಕಂಡಿತು.

ಪಾರದರ್ಶಕ ಅಲ್ಲದ (opaque), ಮಾರಿಷಸ್ ಮೂಲದ ಫಂಡ್‌ಗಳ ಮೂಲಕ ಅದಾನಿ ಸಮೂಹದ ಕಂಪನಿಗಳಲ್ಲಿ ₹8,269 ಕೋಟಿ ಹೂಡಿಕೆ ಮಾಡಲಾಗಿದೆ ಎಂದು ತನಿಖಾ ಪತ್ರಕರ್ತರ ಸಂಘಟನೆಯಾದ 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಯೋಜನೆ' (ಒಸಿಸಿಆರ್‌ಪಿ) ಆರೋಪ ಮಾಡಿದ್ದರಿಂದ 9 ಕಂಪನಿಯ ಷೇರುಗಳ ಮೌಲ್ಯ ಗುರುವಾರ ಇಳಿಕೆ ಕಂಡಿತ್ತು.

ಶುಕ್ರವಾರದ ವಹಿವಾಟಿನಲ್ಲಿ ಅದಾನಿ ಪವರ್ ಶೇ 2.77ರಷ್ಟು, ಅದಾನಿ ಗ್ರೀನ್ ಎನರ್ಜಿ ಶೇ 2.32, ಅದಾನಿ ಎನರ್ಜಿ ಸಲ್ಯೂಷನ್ಸ್ (ಶೇ 1.62), ಅದಾನಿ ಎಂಟರ್‌ಪ್ರೈಸಸ್ (ಶೇ 1.29), ಅಂಬುಜಾ ಸಿಮೆಂಟ್ಸ್, ಅದಾನಿ ಪೋರ್ಟ್ಸ್, ಎನ್‌ಡಿಟಿವಿ ಷೇರು ಮೌಲ್ಯ ಹೆಚ್ಚಾಗಿದೆ.

ಅದಾನಿ ವಿಲ್ಮರ್ ಷೇರು ಶೇ 1.97, ಅದಾನಿ ಟೋಟಲ್ ಗ್ಯಾಸ್ ಮತ್ತು ಎಸಿಸಿ ಷೇರುಗಳ ಮೌಲ್ಯ ಇಳಿಕೆ ಕಂಡಿತು.

ಸೆನ್ಸೆಕ್ಸ್, ನಿಫ್ಟಿ ಶೇ 1ರವರೆಗೆ ಏರಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 556 ಅಂಶ ಏರಿಕೆ ಕಂಡಿತು. ಎರಡು ತಿಂಗಳಿನಲ್ಲಿ ಸೆನ್ಸೆಕ್ಸ್‌ನ ಗರಿಷ್ಠ ಏರಿಕೆ ಇದಾಗಿದೆ. ಎನ್‌ಎಸ್‌ಇ ನಿಫ್ಟಿ 19,400ರ ಮಟ್ಟ ದಾಟಿತು.

ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶದಲ್ಲಿ ಜಿಡಿಪಿ ಬೆಳವಣಿಗೆ ಮತ್ತು ತಯಾರಿಕಾ ವಲಯದ ಬೆಳವಣಿಗೆ ಸಕಾರಾತ್ಮಕ ಆಗಿರುವುದು ಷೇರುಪೇಟೆಗಳ ವಹಿವಾಟಿನ ಮೇಲೆ ಪ್ರಭಾವ ಬೀರಿತು.

ವಿದ್ಯುತ್, ಲೋಹ ಮತ್ತು ತೈಲ ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿ ನಡೆಸಿದ್ದರಿಂದಾಗಿ ಸೂಚ್ಯಂಕಗಳು ಏರಿಕೆ ಕಾಣುವಂತಾಯಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 1.26ರಷ್ಟು ಏರಿಕೆ ಕಂಡು ಬ್ಯಾರಲ್‌ಗೆ 87.92 ಡಾಲರ್‌ಗೆ ತಲುಪಿತು.

'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಗೆ ಚಾಲನೆ



ಗುರುಗ್ರಾಮ (ಪಿಟಿಐ): ಜಿಎಸ್‌ಟಿ ಇನ್ವಾಯ್ಸ್ ಅಪ್ಲೋಡ್ ಮಾಡಿದವರಿಗೆ ಬಹುಮಾನ ನೀಡುವ 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಗೆ ಕೇಂದ್ರ ಸರ್ಕಾರವು ಶುಕ್ರವಾರ ಚಾಲನೆ ನೀಡಿದೆ.

ಆರಂಭಿಕ ಹಂತದಲ್ಲಿ ಅಸ್ಸಾಂ, ಗುಜರಾತ್, ಹರಿಯಾಣ ರಾಜ್ಯದಲ್ಲಿ ಹಾಗೂ ಪುದುಚೇರಿ, ದಮನ್ ಮತ್ತು ದೀವ್, ದಾದ್ರಾ ಮತ್ತು ನಗರ್ ಹವೇಲಿ ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಗೆ ಚಾಲನೆ ನೀಡಲಾಗಿದೆ.

ಗ್ರಾಹಕರು ವರ್ತಕರಲ್ಲಿ ಜಿಎಸ್‌ಟಿ ಇನ್ವಾಯ್ಸ್ ಕೇಳಿ ಪಡೆಯುವುದನ್ನು ಉತ್ತೇಜಿಸುವುದು ಈ ಯೋಜನೆಯ ಉದ್ದೇಶ. ಉತ್ಪನ್ನವೊಂದನ್ನು ಖರೀದಿಸಿದಾಗ ಅಥವಾ ಸೇವೆಯೊಂದನ್ನು ಪಡೆದಾಗ ಜಿಎಸ್‌ಟಿ ಇನ್ವಾಯ್ಸ್ ಪಡೆಯುವುದನ್ನು ಉತ್ತೇಜಿಸುವ ಈ ಯೋಜನೆಯ ಅಡಿಯಲ್ಲಿ, ₹10 ಲಕ್ಷದಿಂದ ₹1 ಕೋಟಿವರೆಗೆ ನಗದು ಬಹುಮಾನ ನೀಡಲಾಗುತ್ತದೆ.

ತಗ್ಗಿದ ವಂಚನೆ, ಹೆಚ್ಚಾದ ತೆರಿಗೆ ನಿಯಮ ಅನುಸರಣೆ: ಹಣಕಾಸು ಸಚಿವಾಲಯ

ಜಿಎಸ್‌ಟಿ ₹1.59 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಆಗಸ್ಟ್‌ನಲ್ಲಿ ₹1.59 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಸಂಗ್ರಹ ಆಗಿದ್ದ ವರಮಾನಕ್ಕೆ ಹೋಲಿಸಿದರೆ (₹1.43 ಲಕ್ಷ ಕೋಟಿ) ಶೇ 11ರಷ್ಟು ಏರಿಕೆ ಆಗಿದೆ.

ನಿಯಮಗಳ ಅನುಸರಣೆಯಲ್ಲಿ ಸುಧಾರಣೆ ಮತ್ತು ತೆರಿಗೆ ವಂಚನೆ ತಗ್ಗಿರುವುದೇ ವರಮಾನ ಸಂಗ್ರಹ ಹೆಚ್ಚಳಕ್ಕೆ ಕಾರಣ ಎಂದು ಸರ್ಕಾರ ಹೇಳಿದೆ.


2023ರ ಆಗಸ್ಟ್‌ನಲ್ಲಿ ಸಂಗ್ರಹ ಆಗಿರುವ ಒಟ್ಟು ತೆರಿಗೆಯಲ್ಲಿ ಕೇಂದ್ರ ಜಿಎಸ್‌ಟಿ ₹28,328 ಕೋಟಿ, ರಾಜ್ಯ ಜಿಎಸ್‌ಟಿ ₹35,794 ಕೋಟಿ, ಸಮಗ್ರ ಜಿಎಸ್‌ಟಿ ₹83,251 ಕೋಟಿ ಹಾಗೂ ಸೆಸ್ ₹11,695 ಕೋಟಿ ಒಳಗೊಂಡಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸರಕುಗಳ ಆಮದು ಮೂಲಕ ಸಂಗ್ರಹ ಆಗಿರುವ ವರಮಾನವು ಶೇ 3ರಷ್ಟು ಹೆಚ್ಚಾಗಿದೆ. ದೇಶಿ ವಹಿವಾಟಿನ ಮೂಲಕ ಬಂದಿರುವ ವರಮಾನ ಶೇ 14ರಷ್ಟು ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ.

ತೆರಿಗೆ ದರಗಳಲ್ಲಿ ಯಾವುದೇ ಬದಲಾವಣೆ ಮಾಡದೇ ಇದ್ದರೂ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಜಿಎಸ್‌ಟಿ ಸಂಗ್ರಹವು ಸಾಂಕೇತಿಕ ಜಿಡಿಪಿಗಿಂತಲೂ (ನಾಮಿನಲ್ ಜಿಡಿಪಿ) ಹೆಚ್ಚಾಗಿದೆ ಎಂದು ರೆವಿನ್ಯೂ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಹಬ್ಬದ ಋತು ಬರುತ್ತಿರುವುದರಿಂದಾಗಿ ಮುಂಬರುವ ತಿಂಗಳುಗಳಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಕೆಪಿಎಂಜಿ ಸಂಸ್ಥೆಯ ಪರೋಕ್ಷ ತೆರಿಗೆಗಳ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಅಭಿಷೇಕ್ ಜೈನ್ ಅಭಿಪ್ರಾಯಪಟ್ಟಿದ್ದಾರೆ.

ವರಮಾನ ಸಂಗ್ರಹ ವಿವರ (₹ ಲಕ್ಷ ಕೋಟಿಗಳಲ್ಲಿ)



ರಾಜ್ಯದ ಸಂಗ್ರಹ ₹11,116 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಆಗಸ್ಟ್ ತಿಂಗಳಲ್ಲಿ ಕರ್ನಾಟಕದಲ್ಲಿ ₹11,116 ಕೋಟಿ ವರಮಾನ ಸಂಗ್ರಹವಾಗಿದೆ.

ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ₹9,583 ಕೋಟಿ ವರಮಾನ ಸಂಗ್ರಹವಾಗಿತ್ತು. ಈ ವರ್ಷ ಶೇ 16ರಷ್ಟು ಹೆಚ್ಚಳ ಆಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

ವಿಮಾನ ಇಂಧನ ದರ ಶೇ 14 ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಿಮಾನ ಇಂಧನ (ಎಟಿಎಫ್) ದರವನ್ನು ಶುಕ್ರವಾರ ಶೇ 14ರಷ್ಟು ಹೆಚ್ಚಿಸಿವೆ.

ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರಿಗೆ ₹13,911ರಷ್ಟು ಹೆಚ್ಚಾಗಿದ್ದು, ₹1.12 ಲಕ್ಷಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್‌ಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಹೊಸ ವಹಿವಾಟುಗಳಿಗೆ ಬೇಡಿಕೆ; 3 ತಿಂಗಳ ಗರಿಷ್ಠ ಮಟ್ಟಕ್ಕೆ ಪಿಎಂಐ

ಏರಿಕೆ ಕಂಡ ತಯಾರಿಕಾ ಚಟುವಟಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ತಯಾರಿಕಾ ವಲಯದ ಚಟುವಟಿಕೆಯು ಆಗಸ್ಟ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಶುಕ್ರವಾರ ಹೇಳಿದೆ.

ತಯಾರಿಕಾ ವಲಯದ ಬೆಳವಣಿಗೆಯನ್ನು ಸೂಚಿಸುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಜುಲೈನಲ್ಲಿ 57.7ರಷ್ಟು ಇದ್ದಿದ್ದು ಆಗಸ್ಟ್‌ನಲ್ಲಿ 58.6ಕ್ಕೆ ಏರಿಕೆ ಕಂಡಿದೆ. ಮೇ ತಿಂಗಳ ಬಳಿಕ ಆಗಿರುವ ಗರಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ ಎಂದು ಹೇಳಿದೆ.


ಆಗಸ್ಟ್ ತಿಂಗಳ ಬೆಳವಣಿಗೆಯು ದೇಶದ ತಯಾರಿಕಾ ವಲಯದ ಸಕಾರಾತ್ಮಕ ಚಿತ್ರಣವನ್ನು ತೋರಿಸುತ್ತಿದೆ. ತಯಾರಿಕೆ ಹೆಚ್ಚಾಗುತ್ತಿರುವುದು ಮತ್ತು ಹೊಸ ವಹಿವಾಟುಗಳಿಗೆ ಬೇಡಿಕೆಯು ತ್ವರಿತವಾಗಿ ಏರಿಕೆ ಕಾಣುತ್ತಿದೆ. ಇದು ಎರಡನೇ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಲಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಕಂಪನಿಗಳು ಜಾಗತಿಕ ಮಾರುಕಟ್ಟೆಯತ್ತ ಹೆಚ್ಚಿನ ಗಮನ ಹರಿಸಿವೆ. ಅಂತರರಾಷ್ಟ್ರೀಯ ಮಾರಾಟವು ಬಹಳ ವೇಗವಾಗಿ ಹೆಚ್ಚಾಗುತ್ತಿದೆ. ರಫ್ತು ಮಾಡುವ ನಿಟ್ಟಿನಲ್ಲಿ ಕಂಪನಿಗಳು ಯೋಜನೆ ರೂಪಿಸುವ ಮೂಲಕ ಮುಂದಿನ ಕೆಲವು ತಿಂಗಳುಗಳವರೆಗೆ ತಯಾರಿಕೆಯು ಏರುಮುಖವಾಗಿಯೇ ಇರುವಂತೆ ನೋಡಿಕೊಳ್ಳಬೇಕಿದೆ ಎಂದು ಅವರು ಸಲಹೆ ನೀಡಿದ್ದಾರೆ.

ಆಗಸ್ಟ್‌ನಲ್ಲಿ ಉದ್ಯೋಗ ಸೃಷ್ಟಿಯು ಏಪ್ರಿಲ್ ತಿಂಗಳ ನಂತರ ಕನಿಷ್ಠ ಮಟ್ಟದಲ್ಲಿ ದಾಖಲಾಗಿದೆ. ಹೀಗಿದ್ದರೂ ಉದ್ಯೋಗ ಸೃಷ್ಟಿಯು ಸತತ ಐದನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಹಣದುಬ್ಬರದ ಆತಂಕದಿಂದಾಗಿ ಮುಂದಿನ 12 ತಿಂಗಳುಗಳಿಗೆ ವಹಿವಾಟು ನಡೆಸುವ ವಿಶ್ವಾಸವು ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಚಿಲ್ಲರೆ ಹಣದುಬ್ಬರವು ಜುಲೈನಲ್ಲಿ 15 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ.

ತಯಾರಿಕಾ ವೆಚ್ಚವು ಆಗಸ್ಟ್‌ನಲ್ಲಿ ವೇಗದಲ್ಲಿ ಹೆಚ್ಚಾಗಿದೆ. ಹೀಗಿದ್ದರೂ ಎಲ್ಲ ವೆಚ್ಚವನ್ನೂ ಗ್ರಾಹಕರಿಗೆ ವರ್ಗಾಯಿಸಲಾಗಿಲ್ಲ ಎಂದು ಸಂಸ್ಥೆಯು ಹೇಳಿದೆ.

ತಯಾರಿಕಾ ವಲಯದ ಬೆಳವಣಿಗೆ ಸೂಚ್ಯಂಕ



ಮುಖ್ಯಾಂಶಗಳು

- ಸತತ 26ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ
- ರಫ್ತು ಬೇಡಿಕೆಯು 10 ತಿಂಗಳಲ್ಲಿಯೇ ವೇಗದ ಬೆಳವಣಿಗೆ ಕಂಡಿದೆ

ಜಿಡಿಪಿ ಬೆಳವಣಿಗೆ ಶೇ 6.7ರಷ್ಟು: ಮೂಡಿಸ್ ನಿರೀಕ್ಷೆ

ನವದೆಹಲಿ (ಪಿಟಿಐ): ಮೂಡಿಸ್ ಇನ್‌ವೆಸ್ಟರ್ಸ್ ಸರ್ವಿಸಸ್ ಕಂಪನಿಯು ಭಾರತದ ಜಿಡಿಪಿ ಬೆಳವಣಿಗೆ ಮುನ್ನೋಟವನ್ನು ಪರಿಷ್ಕರಿಸಿದೆ. 2023ನೇ ಕ್ಯಾಲೆಂಡರ್ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

ಈ ಮೊದಲು ಜಿಡಿಪಿಯು ಶೇ 5.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿತ್ತು. ಸೇವೆಗಳು ಉತ್ತಮ ಬೆಳವಣಿಗೆ ಕಂಡಿರುವುದು ಹಾಗೂ ಬಂಡವಾಳ ವೆಚ್ಚ ಹೆಚ್ಚಾಗಿರುವ ಕಾರಣಗಳಿಂದಾಗಿ ಏಪ್ರಿಲ್–ಜೂನ್ ಅವಧಿಯಲ್ಲಿ ಜಿಡಿಪಿಯು ಶೇ 7.8ರಷ್ಟು ಬೆಳವಣಿಗೆ ಕಂಡಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಜಿಡಿಪಿ ಮುನ್ನೋಟವನ್ನು ಪರಿಷ್ಕರಣೆ ಮಾಡಲಾಗಿದೆ ಎಂದು ಅದು ತಿಳಿಸಿದೆ.

ಏರ್ ಇಂಡಿಯಾ– ವಿಸ್ತಾರಾ ವಿಲೀನಕ್ಕೆ ಸಿಸಿಐ ಒಪ್ಪಿಗೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಮತ್ತು ವಿಸ್ತಾರಾ ಕಂಪನಿಗಳ ವಿಲೀನಕ್ಕೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಷರತ್ತುಬದ್ಧ ಒಪ್ಪಿಗೆಯನ್ನು ನೀಡಿದೆ.

ಈ ಕುರಿತು ಸಿಸಿಐ 'ಎಕ್ಸ್'ನಲ್ಲಿ ಶುಕ್ರವಾರ ಪೋಸ್ಟ್ ಮಾಡಿದೆ.

ಟಾಟಾ ಸಮೂಹವು ತನ್ನ ವಿಮಾನಯಾನ ವಹಿವಾಟನ್ನು ಬಲಗೊಳಿಸುವ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆ ಇದಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	620
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಕಾರ್ಕಳ	
ಹೊಸತು	30000-45000
ಹಳತು	40000-48500
ಹೊಸನಗರ	
ಚಾಲಿ	36289-37319
ಕೆಂಪುಗೋಟು	32000-35399
ರಾಶಿ	45699-48421
ಕುಮಟ	
ಚಿಪ್ಪು	32569-35019
ಕೋಕ	20189-33019
ಹಳೆಚಾಲಿ	40209-41299
ಹೊಸಚಾಲಿ	38019-41009
ಶಿವಮೊಗ್ಗ	
ಬೆಟ್ಟೆ	46569-55069
ಗೊರಬಲು	16300-36199
ರಾಶಿ	40039-48599
ಸಿದ್ದಾಪುರ	
ಬಿಳಿಗೋಟು	33109-35709
ಕೋಕ	30309-34899
ಚಾಲಿ	37899-41899
ಕೆಂಪುಗೋಟು	30880-36469
ರಾಶಿ	43099-48509
ತಟ್ಟಿಬೆಟ್ಟೆ	40019-46859
ಶಿರಸಿ	
ಬೆಟ್ಟೆ	37980-46999
ಬಿಳಿಗೋಟು	28009-37236
ಚಾಲಿ	37509-42808
ರಾಶಿ	42299-49089
ಯಲ್ಲಾಪುರ	
ಬಿಳಿಗೋಟು	28612-37820
ಚಾಲಿ	37079-42601
ಕೋಕ	22312-33118
ಕೆಂಪುಗೋಟು	29800-38199
ರಾಶಿ	47889-54930
ತಟ್ಟಿಬೆಟ್ಟೆ	40615-47599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13300	13200	154.50ಸೆಂಟ್ಸ್
ಎಸಿ	---	6600	6700	
ಆರ್‌ಪಿ	---	10100	10150	ಲಂಡನ್
ಆರ್‌ಸಿ	---	238	5900	2489ಡಾಲರ್ಸ್

ವಿವೇಕ್ ರಾಮಸ್ವಾಮಿಯನ್ನು ಕೊಂಡಾಡಿದ ಟ್ರಂಪ್

ನ್ಯೂಯಾರ್ಕ್ (ಪಿಟಿಐ): ಅಧ್ಯಕ್ಷೀಯ ಚುನಾವಣೆ ಕುರಿತಂತೆ ಕಳೆದ ವಾರ ನಡೆದ ಮೊದಲ ಪ್ರಾಥಮಿಕ ಚರ್ಚೆಯಲ್ಲಿ ಗಮನಸೆಳೆದ ಭಾರತ ಮೂಲದ ಅಮೆರಿಕನ್, 38ರ ಹರೆಯದ ವಿವೇಕ್ ರಾಮಸ್ವಾಮಿ ಅವರನ್ನು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಂಡಾಡಿದ್ದಾರೆ. ವಿವೇಕ್ ಒಬ್ಬ ಬುದ್ಧಿವಂತ, ಯುವ ನಾಯಕ (ಯಂಗ್, ಸ್ಮಾರ್ಟ್) ಎಂದು ಬಣ್ಣಿಸಿದ್ದಾರೆ.

ಮಂಗಳವಾರ ಗ್ಲೆನ್ ಬೆಕ್ ಅವರ ಕಾರ್ಯಕ್ರಮದಲ್ಲಿ ವಿವೇಕ್ ರಾಮಸ್ವಾಮಿ ಅವರನ್ನು ಉಪಾಧ್ಯಕ್ಷರಾಗಿ ಪರಿಗಣಿಸುತ್ತೀರಾ ಎಂದು ಕೇಳಲಾದ ಪ್ರಶ್ನೆಗೆ ಟ್ರಂಪ್ ಈ ಉತ್ತರ ನೀಡಿದ್ದಾರೆ.

'ಅವರು ಬಹಳ ಒಳ್ಳೆಯವರು ಎಂದು ನಾನು ಭಾವಿಸುತ್ತೇನೆ. ಅವರು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಬುದ್ಧಿವಂತ, ಯುವಕ, ಉತ್ಸಾಹಿ, ಪ್ರತಿಭಾನ್ವಿತ. ಆದರೆ, ಅವರು ಸ್ವಲ್ಪ ಜಾಗ್ರತೆಯಾಗಿರಬೇಕು' ಎಂದೂ ಟ್ರಂಪ್ ಸಲಹೆ ನೀಡಿದರು.

2024ರ ಚುನಾವಣೆಗೆ ಅಧ್ಯಕ್ಷೀಯ ನಾಮನಿರ್ದೇಶನಕ್ಕೆ ಸ್ಪರ್ಧಿಸುತ್ತಿರುವ ರಿಪಬ್ಲಿಕನ್ ಅಭ್ಯರ್ಥಿಗಳ ಪೈಕಿ ಟ್ರಂಪ್ ಮುಂಚೂಣಿಯಲ್ಲಿದ್ದಾರೆ. ಆಗಸ್ಟ್ 23ರಂದು ನಡೆದ ಮೊದಲ ರಿಪಬ್ಲಿಕನ್ ಅಧ್ಯಕ್ಷೀಯ ಪ್ರಾಥಮಿಕ ಚರ್ಚೆಯ ನಂತರ ರಾಮಸ್ವಾಮಿ ಮಾಧ್ಯಮಗಳ ಗಮನ ಸೆಳೆದಿದ್ದಾರೆ.

ಜಿ20 ಶೃಂಗದಲ್ಲಿ ಷಿ ಭಾಗಿ: ಬೈಡನ್ ವಿಶ್ವಾಸ

ವಾಷಿಂಗ್ಟನ್ (ಪಿಟಿಐ): 'ನವದೆಹಲಿಯಲ್ಲಿ ಮುಂದಿನವಾರ ನಡೆಯಲಿರುವ ಜಿ 20 ಶೃಂಗಸಭೆಯಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಪಾಲ್ಗೊಳ್ಳಲಿದ್ದಾರೆ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಗುರುವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಷಿ ಅವರು ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆಯೇ ಇಲ್ಲವೇ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಬೈಡನ್ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

'ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಷಿ ಜಿನ್‌ಪಿಂಗ್ ಅವರು ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಕಡಿಮೆ' ಎಂದು ಇತ್ತೀಚೆಗೆ ಕೆಲವು ಮಾಧ್ಯಮಗಳು ವರದಿ ಮಾಡಿದ್ದವು.

ಬೈಡನ್ ಸೇರಿದಂತೆ ವಿಶ್ವದ 12ಕ್ಕೂ ಹೆಚ್ಚು ರಾಷ್ಟ್ರಗಳ ನಾಯಕರು ಶೃಂಗಸಭೆಯಲ್ಲಿ ಭಾಗವಹಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಭೆಯ ಆತಿಥ್ಯ ವಹಿಸಲಿದ್ದಾರೆ.

ಈ ಮಧ್ಯೆ, 'ಈ ಬಾರಿಯ ಜಿ 20 ಶೃಂಗಸಭೆಯಲ್ಲಿ ಷಿ ಅವರು ಭಾಗವಹಿಸುತ್ತಿಲ್ಲ. ಭಾರತಕ್ಕೆ ಮಹತ್ವದ ಸ್ಥಾನ ಬಿಟ್ಟು ಕೊಡಲು ಚೀನಾಗೆ ಇಷ್ಟವಿಲ್ಲ ಎಂಬುದಕ್ಕೆ ಇದು ನಿದರ್ಶನ. ಷಿ ಅವರ ನಿರ್ಧಾರವು ಬಹುಮುಖೀಯ ಪರಿಣಾಮಗಳಿಗೆ ದಾರಿ ಮಾಡಿಕೊಡಬಹುದು' ಎಂದು ಸೌತ್ ಏಷ್ಯಾ ಇನಿಶಿಯೇಟಿವ್ಸ್ ಆ್ಯಟ್ ದ ಏಷ್ಯಾ ಸೊಸೈಟಿ ಪಾಲಿಸಿ ಇನ್‌ಸ್ಟಿಟ್ಯೂಟ್‌ನ (ಎಎಸ್‌ಪಿಐ) ನಿರ್ದೇಶಕ ಫರ್ವಾ ಆಮೆರ್ ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೊಬೆಲ್ ಆಹ್ವಾನ ನಿಯಮ ಬದಲು: ರಷ್ಯಾಕ್ಕೆ ಆಹ್ವಾನ

ಸ್ಟಾಕ್‌ಹೋಂ (ಎಪಿ): ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಯನ್ನು ನಿರ್ವಹಿಸುವ ದ ನೊಬೆಲ್ ಫೌಂಡೇಷನ್, ತನ್ನ ಆಹ್ವಾನ ನಿಯಮವನ್ನು ರದ್ದುಗೊಳಿಸಿದೆ.

ರಷ್ಯಾ, ಬೆಲಾರಸ್ ಮತ್ತು ಇರಾನ್ ಹಾಗೂ ಈ ಹಿಂದೆ ನಿಷೇಧಿಸಲಾಗಿದ್ದ ಬಲಪಂಥೀಯ ಸ್ವೀಡಿಷ್ ಪಕ್ಷದ ನಾಯಕರನ್ನೂ ಆಹ್ವಾನಿಸಿದೆ.

'ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವವರ ಧ್ವನಿಯನ್ನು ತಗ್ಗಿಸಲಾಗುತ್ತಿದೆ ಎಂಬ ಜಾಗತಿಕ ಪ್ರವೃತ್ತಿಯಿದೆ. ಅದನ್ನು ಎದುರಿಸಲು ನಾವೀಗ ನೊಬೆಲ್ ಪ್ರಶಸ್ತಿಯ ಆಹ್ವಾನದ ಸ್ವರೂಪವನ್ನು ವಿಸ್ತರಿಸುತ್ತಿದ್ದೇವೆ' ಎಂದು ದ ನೊಬೆಲ್ ಫೌಂಡೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ವಿದರ್ ಹೆಲ್ಗೆಸೆನ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ, ಉಕ್ರೇನ್ ಯುದ್ಧದ ಕಾರಣದಿಂದ ರಷ್ಯಾ, ಬೆಲಾರಸ್ ಮತ್ತು ಇರಾನ್‌ನ ರಾಜತಾಂತ್ರಿಕ ರಾಯಭಾರಿಗಳಿಗೆ ನೊಬೆಲ್ ಪ್ರಶಸ್ತಿ ಪ್ರದಾನ ಸಮಾರಂಭ, ಔತಣಕೂಟಗಳಿಗೆ ನಿರ್ಬಂಧ ವಿಧಿಸಲಾಗಿತ್ತು.

ಸಿಂಗಪುರ: ಅಧ್ಯಕ್ಷರ ಆಯ್ಕೆಗೆ ಮತದಾನ

ಸಿಂಗಪುರ (ಪಿಟಿಐ): ಸಿಂಗಪುರದ ಅಧ್ಯಕ್ಷರ ಆಯ್ಕೆಗಾಗಿ ಶುಕ್ರವಾರ ಮತದಾನ ನಡೆದಿದ್ದು, ತ್ರಿಕೋನ ಸ್ಪರ್ಧೆಯಲ್ಲಿ ಭಾರತ ಮೂಲದ ಧರ್ಮನ್ ಷಣ್ಮುಗರತ್ನಂ ಡ ಇದ್ದಾರೆ.

ಸಿಂಗಪುರದ ಹೂಡಿಕೆ ಸಂಸ್ಥೆಯೊಂದರ ಮಾಜಿ ಮುಖ್ಯಸ್ಥರಾದ ಎನ್ ಕೊಕ್ ಸೊಂಗ್ ಮತ್ತು ವಿಮಾ ಸಂಸ್ಥೆಯೊಂದರ ಮಾಜಿ ಮುಖ್ಯಸ್ಥ ತನ್ ಕಿನ್ ಲಿಯಾನ್ ಅವರೂ ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿದ್ದಾರೆ.

ಅಂದಾಜು 27 ಲಕ್ಷ ಮಂದಿ ಮತ ಹಕ್ಕು ಚಲಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮತದಾನದ ಅಂಗವಾಗಿ ಸರ್ಕಾರವು ಶುಕ್ರವಾರ ರಜೆ ಘೋಷಿಸಿತ್ತು. ಅಧ್ಯಕ್ಷೆ ಹಲೀಮಾ ಯಾಕೋಬ್ ಆರು ವರ್ಷಗಳ ಅಧಿಕಾರಾವಧಿ ಇದೇ 13ರಂದು ಕೊನೆಗೊಳ್ಳಲಿದೆ.

ಆಭರಣ ಮಳಿಗೆ ದರೋಡೆ: 16 ಮಂದಿ ಬಂಧನ

ವಾಷಿಂಗ್ಟನ್ (ಪಿಟಿಐ): ಕಳೆದ ಒಂದು ವರ್ಷದಲ್ಲಿ ಅಮೆರಿಕದ ನಾಲ್ಕು ರಾಜ್ಯಗಳಲ್ಲಿರುವ ಭಾರತ ಸೇರಿದಂತೆ ಏಷ್ಯಾ ಮೂಲದ ಆಭರಣಗಳ ಮಳಿಗೆಗಳನ್ನು ಗುರಿಯಾಗಿಸಿಕೊಂಡು ದರೋಡೆ ಮಾಡಿದ್ದ ಪ್ರಮುಖ ಅಪರಾಧಿ ಗುಂಪೊಂದರ 16 ಮಂದಿ ಸದಸ್ಯರನ್ನು ಬಂಧಿಸಲಾಗಿದೆ.

'ಕಾನೂನು ಜಾರಿ ಸಂಸ್ಥೆಯು ಗುಂಪಿನ 8 ಶಂಕಿತ ಸದಸ್ಯರನ್ನು ಬುಧವಾರ ಬಂಧಿಸಿದೆ. ಉಳಿದ 8 ಮಂದಿಯನ್ನು ಇದಕ್ಕೂ ಮುನ್ನವೇ ಬಂಧಿಸಲಾಗಿತ್ತು' ಎಂದು ಕೊಲಂಬಿಯಾ ಜಿಲ್ಲೆಯ ಅಮೆರಿಕ ಅಟಾರ್ನಿ ಕಚೇರಿಯ ಪ್ರಕಟಣೆ ತಿಳಿಸಿದೆ.

'2022ರ ಜನವರಿ 7ರಿಂದ 2023ರ ಜ. 27ರವರೆಗೆ ನ್ಯೂಜೆರ್ಸಿ, ಪೆನ್ಸಿಲ್ವೇನಿಯಾ, ವರ್ಜಿನಿಯಾ ಮತ್ತು ಫ್ಲಾರಿಡಾಗಳಲ್ಲಿ ನಡೆದಿದ್ದ ದರೋಡೆಗಳಿಗೆ ಆರೋಪಿಗಳು ಸಂಚು ರೂಪಿಸಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ನಮೂದಿಸಲಾಗಿದೆ. 'ದಕ್ಷಿಣ ಏಷ್ಯಾಕ್ಕೆ ಸೇರಿದ 9 ಆಭರಣ ಮಳಿಗೆಗಳಲ್ಲಿ ಈ ಗುಂಪಿನಿಂದ ದರೋಡೆ ನಡೆದಿದೆ. ಕನಿಷ್ಠ ನಾಲ್ಕು ಮಳಿಗೆಗಳಿಗೆ ಭಾರತ ಮೂಲದವರು ಮಾಲೀಕರಾಗಿದ್ದಾರೆ' ಎಂದು ಹೇಳಲಾಗಿದೆ.

ಮುಂಬೈ ಧಾರಣೆ

ಶೇಂಗಾ

1–9–2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750(1770)
ಒಂದು ವಾರದ ಡೆಲಿವರಿ	1745(1775)
ಸೋಯಾ ಕಚ್ಚಾ	876(872)
ಪಾಮ್ ವಾರದ ಡೆಲಿವರಿ	852(846)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59300 (59,200)
ಬೆಳ್ಳಿ ಕೆ.ಜಿ 74800 (74700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಏಷ್ಯಾಕಪ್ ಕ್ರಿಕೆಟ್ ಟೂರ್ನಿ • ಭಾರತ– ಪಾಕ್ ಹಣಾಹಣಿ ಇಂದು • ವಿರಾಟ್, ಬೂಮ್ರಾ ಮೇಲೆ ಕಣ್ಣು • ಇಶಾನ್ ಕಿಶನ್‌ಗೆ ಕೀಪಿಂಗ್ ಹೊಣೆ?

ದ್ವೀಪರಾಷ್ಟ್ರದಲ್ಲಿ ಕ್ರಿಕೆಟ್‌ಪ್ರೇಮಿಗಳ ಉತ್ಸಾಹ

ಪ್ರಜಾವಾಣಿ ವಾರ್ತೆ

ಪಲೇಕೆಲೆ: ಭಾರತ ಮತ್ತು ಪಾಕಿಸ್ತಾನ ನಡುವಣ ಕ್ರಿಕೆಟ್ ಪಂದ್ಯವೆಂದರೆ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳ ಕಣ್ಮನಗಳಲ್ಲಿ ಉತ್ಸಾಹ, ಉನ್ಮಾದಗಳು ಪುಟಿದೇಳುತ್ತವೆ.

ಅಂತಹ ಅಭಿಮಾನಿಗಳಿಗೆ ಈಗ ಹಬ್ಬವೋ ಹಬ್ಬ. ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ನಡೆಯುವ ಪಂದ್ಯದಲ್ಲಿ ಈ ಎರಡೂ ನೆರೆಹೊರೆಯ ರಾಷ್ಟ್ರಗಳ ತಂಡಗಳು ಮುಖಾಮುಖಿಯಾಗಲಿವೆ. ಅಕ್ಟೋಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪೂರ್ವಾಭ್ಯಾಸದ ವೇದಿಕೆಯಾಗಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಉಭಯ ತಂಡಗಳ ಹಣಾಹಣಿಯೇ ಹೈಲೈಟ್.

ಎ ಗುಂಪಿನಲ್ಲಿರುವ ಈ ತಂಡಗಳು ಇದೇ ಟೂರ್ನಿಯಲ್ಲಿ ಮೂರು ಬಾರಿ ಮುಖಾಮುಖಿಯಾಗುವ ಸಾಧ್ಯತೆ ಇದೆ. ಅಲ್ಲದೇ ಅಕ್ಟೋ-ಬರ್‌ನಲ್ಲಿ ವಿಶ್ವಕಪ್ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ಹಣಾಹಣಿ ನಡೆಸಲಿವೆ.

ಕಳೆದ ಟಿ20 ವಿಶ್ವಕಪ್ ಟೂರ್ನಿಯು ಆಸ್ಟ್ರೇಲಿಯಾದಲ್ಲಿ ನಡೆದಾಗ ಪಾಕ್ ತಂಡಕ್ಕೆ ಭಾರತವು ಸೋಲಿನ ಕಹಿಯುಣಿಸಿತ್ತು. ಆ ಪಂದ್ಯದಲ್ಲಿ ವಿರಾಟ್ ಕೊಹ್ಲಿಯ ಅಬ್ಬರಕ್ಕೆ ಪಾಕ್ ತಂಡದ ಘಟಾನುಘಟಿ ಬೌಲರ್‌ಗಳು ಸುಸ್ತಾಗಿ ಹೋಗಿದ್ದರು. ಉತ್ತಮ ಲಯದಲ್ಲಿರುವ ವಿರಾಟ್ ಅವರನ್ನು ಕಟ್ಟಿಹಾಕುವುದೇ ಈಗಲೂ ಆ ಬೌಲರ್‌ಗಳಿಗೆ ಸವಾಲಾಗಲಿದೆ.

ಶಾಹೀನ್ ಆಫ್ರಿದಿ, ನಸೀಂ ಶಹಾ ಮತ್ತು ಹ್ಯಾರಿಸ್ ರವೂಫ್ ಅವರು ತಮ್ಮ ಬೌಲಿಂಗ್‌ನಲ್ಲಿ ಹೊಸ ತಂತ್ರಗಾರಿಕೆ ಅನುಸರಿಸುವುದು ಅನಿವಾರ್ಯವಾಗಿದೆ. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ಇದು ಪ್ರತಿಷ್ಠೆಯ ಟೂರ್ನಿ ಆಗಿದೆ. ಏಷ್ಯಾ ಕಪ್ ಗೆದ್ದರೆ ಅವರ ಮತ್ತು ತಂಡದ ಆತ್ಮವಿಶ್ವಾಸವು ಹೆಚ್ಚಲಿದೆ. ಅದರಿಂದ ಮುಂಬರುವ ವಿಶ್ವಕಪ್ ಟೂರ್ನಿಯಲ್ಲಿ ತಂಡದ ಸಾಮರ್ಥ್ಯ ಹೆಚ್ಚಬಹುದು. ಸುಮಾರು ಒಂದು ದಶಕದಿಂದ ಭಾರತ ತಂಡವು ಐಸಿಸಿ ಟ್ರೋಫಿ ಗೆಲುವಿನ ಬರ ಅನುಭವಿಸುತ್ತಿದೆ. ಅದನ್ನು ನೀಗಿಸಲು ಈಗ ಗೆಲುವೊಂದೇ ದಾರಿ.

ಯುವ ಬ್ಯಾಟರ್ ಶುಭಮನ್ ಗಿಲ್, ತಿಲಕ್ ವರ್ಮಾ, 'ಮಿಸ್ಟರ್ 360 ಡಿಗ್ರಿ' ಖ್ಯಾತಿಯ ಸೂರ್ಯಕುಮಾರ್ ಯಾದವ್ ಅವರಿಗೆ ತಮ್ಮ ಛಾಪು ಮೂಡಿಸಲು ಇದು ಸಕಾಲ. ಕೆ.ಎಲ್. ರಾಹುಲ್ ಗೈರುಹಾಜರಿಯಲ್ಲಿ ಶ್ರೇಯಸ್ ಅಯ್ಯರ್ ಸ್ಥಾನ ಪಡೆಯುವ ಸಾಧ್ಯತೆ ಇದೆ. ವಿಕೆಟ್‌ಕೀಪಿಂಗ್ ಹೊಣೆಯು ಇಶಾನ್ ಕಿಶನ್ ಅವರಿಗೆ ಲಭಿಸಬಹುದು.

ಬೂಮ್ರಾ ಮೇಲೆ ಕಣ್ಣು: ಸುಮಾರು ಒಂದು ವರ್ಷದ ನಂತರ ಏಕದಿನ ಕ್ರಿಕೆಟ್ ಮಾದರಿಗೆ ಮರಳುತ್ತಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿವೆ. ಗಾಯದಿಂದಾಗಿ ಕ್ರಿಕೆಟ್‌ನಿಂದ ದೂರವುಳಿದಿದ್ದ ಅವರು ಈಚೆಗೆ ಐರ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಆಡಿದ್ದರು. ಫಿಟ್ ಕೂಡ ಆಗಿದ್ದಾರೆ. ಏಷ್ಯಾ ಕಪ್ ಟೂರ್ನಿಯಲ್ಲಿ ಅವರು ಉತ್ತಮವಾಗಿ ಆಡಿ ವಿಶ್ವಕಪ್ ಟೂರ್ನಿಗೆ ಫಿಟ್ ಆಗಿ ಉಳಿಯುವರು ಎಂಬ ಭರವಸೆ ತಂಡದಲ್ಲಿದೆ. ಅವರೊಂದಿಗೆ ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ ಬೌಲಿಂಗ್ ಹೊಣೆ ನಿಭಾಯಿಸಲಿದ್ದಾರೆ.

ಪಾಕ್ ತಂಡದ ನಾಯಕ ಮತ್ತು ಉತ್ತಮ ಲಯದಲ್ಲಿರುವ ಬ್ಯಾಟರ್ ಬಾಬರ್ ಆಜಂ, ಮೊಹಮ್ಮದ್ ರಿಜ್ವಾನ್, ಇಫ್ತಿಕಾರ್ ಅಹಮದ್ ಹಾಗೂ ಜಮಾನ್ ಅವರನ್ನು ನಿಯಂತ್ರಿಸುವ ಹೊಣೆ ಈ ಮೂವರು ವೇಗಿಗಳ ಮೇಲಿದೆ. ರವೀಂದ್ರ ಜಡೇಜ ಅವರೊಂದಿಗೆ ಕುಲದೀಪ್ ಯಾದವ್ ಸ್ಪಿನ್ ವಿಭಾಗವನ್ನು ನಿರ್ವಹಿಸುವ ಸಾಧ್ಯತೆ ಇದೆ.

ಇದೇ ಟೂರ್ನಿಯ ಮೊದಲ ಪಂದ್ಯದಲ್ಲಿ ನೇಪಾಳ ವಿರುದ್ಧ ಪಾಕ್ ತಂಡವು ಗೆದ್ದಿತ್ತು. ಬಾಬರ್ ಮತ್ತು ಇಫ್ತಿಕಾರ್ ಅದರಲ್ಲಿ ಶತಕ ಬಾರಿಸಿದ್ದರು.



ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರೀತ್ ಬೂಮ್ರಾ –ಪಿಟಿಐ ಚಿತ್ರ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ (ಉಪನಾಯಕ), ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಪ್ರಸಿದ್ಧ ಕೃಷ್ಣ, ಸಂಜು ಸ್ಯಾಮ್ಸನ್ (ಮೀಸಲು ಆಟಗಾರ)

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಅಬ್ದುಲ್ಲಾ ಶಫೀಕ್, ಫಖಾರ್ ಜಮಾನ್, ಇಮಾಮ್ ಉಲ್ ಹಕ್, ಸಲ್ಮಾನ್ ಅಲಿ ಆಘಾ, ಇಫ್ತಿಕಾರ್ ಅಹಮದ್, ಮೊಹಮ್ಮದ್ ರಿಜ್ವಾನ್, ಮೊಹಮ್ಮದ್ ಹ್ಯಾರಿಸ್, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಉಸಾಮ ಮೀರ್, ಫಾಹೀಂ ಅಶ್ರಫ್, ಹ್ಯಾರಿಸ್ ರವೂಫ್, ಮೊಹಮ್ಮದ್ ವಾಸೀಂ ಜೂನಿಯರ್, ನಸೀಂ ಶಹಾ, ಶಾಹೀನ್ ಆಫ್ರಿದಿ, ಸಾದ್ ಶಕೀಲ್, ತಯ್ಯಬ್ ತಾಹೀರ್ (ಮೀಸಲು ಆಟಗಾರ)

ಪಂದ್ಯ ಆರಂಭ: ಮಧ್ಯಾಹ್ನ 3

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಭಾರತದ ಏಷ್ಯಾಕಪ್ ವಿಜಯ

ವರ್ಷ	ನಾಯಕ
1983-84	ಸುನಿಲ್‌ಗಾವಸ್ಕರ್
1988-89	ದಿಲೀಪ್‌ವೆಂಗಸರ್ಕಾರ್
1990-91	ಮೊಹಮ್ಮದ್‌ಅಜರುದ್ದೀನ್
1994-95	ಮೊಹಮ್ಮದ್‌ಅಜರುದ್ದೀನ್
2010	ಮಹೇಂದ್ರಸಿಂಗ್‌ಧೋನಿ
2018	ರೋಹಿತ್‌ಶರ್ಮಾ

ಉಭಯ ತಂಡಗಳ ಬಲಾಬಲ (ಏಷ್ಯಾಕಪ್)

ಪಂದ್ಯ	ಭಾರತ ಜಯ	ಪಾಕ್ ಜಯ	ಫಲಿತಾಂಶವಿಲ್ಲ
13	7	5	1

ನಾಯಕತ್ವದ ಬಲಾಬಲ

	ಪಂದ್ಯ	ಜಯ	ಸೋಲು	ಟೈ
ರೋಹಿತ್ ಶರ್ಮಾ	27	20	7	
ಬಾಬರ್ ಆಜಂ	30	21	8	1

4–1ರಿಂದ ಭಾರತ ಮುಂದು

ಕ್ರಿಕೆಟ್ ಲೋಕದ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡವು ರಾಜತಾಂತ್ರಿಕ ಕಾರಣಗಳಿಂದಾಗಿ ತಟಸ್ಥ ತಾಣಗಳಲ್ಲಿ ಮುಖಾಮುಖಿಯಾಗುತ್ತಿವೆ. ಅದರಲ್ಲೂ ಐಸಿಸಿ ಮತ್ತು ಎಸಿಸಿ ಟ್ರೋಫಿ ಟೂರ್ನಿಗಳಲ್ಲಿ ಸೆಣಸಾಡುತ್ತಿವೆ. ದ್ವಿಪಕ್ಷೀಯ ಸರಣಿಗಳಲ್ಲಿ ಆಡುತ್ತಿಲ್ಲ.

ಪ್ರಮುಖ ಏಕದಿನ ಕ್ರಿಕೆಟ್ ಟೂರ್ನಿಗಳಲ್ಲಿ ಮುಖಾಮುಖಿಯಾಗಿರುವ ಕಳೆದ ಐದು ಪಂದ್ಯಗಳ ಪೈಕಿ ಭಾರತವು 4–1ರಿಂದ ಮುನ್ನಡೆ ಸಾಧಿಸಿದೆ.

2017ರಲ್ಲಿ ನಡೆದಿದ್ದ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಎರಡು ಬಾರಿ ಮುಖಾಮುಖಿಯಾಗಿದ್ದವು. ಅದರಲ್ಲಿ ಒಂದು ಪಂದ್ಯದಲ್ಲಿ ಭಾರತ ಹಾಗೂ ಇನ್ನೊಂದರಲ್ಲಿ ಪಾಕ್ ಗೆದ್ದಿತ್ತು.

2018ರ ಏಷ್ಯಾಕಪ್ ಟೂರ್ನಿಯಲ್ಲಿ ಉಭಯ ತಂಡಗಳು ಸೆಣಸಿದ ಎರಡೂ ಪಂದ್ಯಗಳಲ್ಲಿ ಭಾರತವೇ ಮೇಲುಗೈ ಸಾಧಿಸಿತ್ತು. 2019ರ ವಿಶ್ವಕಪ್ ಟೂರ್ನಿಯಲ್ಲಿಯೂ ಒಂದು ಪಂದ್ಯದಲ್ಲಿ ಎದುರುಬದುರಾಗಿದ್ದವು. ಭಾರತ ತಂಡ ಜಯಿಸಿತ್ತು.

ಏಷ್ಯಾ ಕಪ್ 2023

ತಟಸ್ಥ ತಾಣದಲ್ಲಿ ಪಾಕ್ ಆತಿಥ್ಯ!

ಈ ಬಾರಿಯ ಏಷ್ಯಾಕಪ್ ಟೂರ್ನಿಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಆತಿಥ್ಯ ವಹಿಸಿದೆ. ಆದರೆ ಭಾರತ ತಂಡವು ಪಾಕ್ ದೇಶಕ್ಕೆ ತೆರಳಿ ಆಡಲು ನಿರಾಕರಿಸಿತ್ತು.

ಕಳೆದ ಒಂದು ದಶಕಕ್ಕಿಂತಲೂ ಹೆಚ್ಚು ಅವಧಿಯಿಂದ ಉಭಯ ದೇಶಗಳ ತಂಡಗಳು ತವರಿನಂಗಳಗಳಲ್ಲಿ ಹಣಾಹಣಿ ನಡೆಸಿಲ್ಲ. ರಾಜತಾಂತ್ರಿಕ ಬಿಕ್ಕಟ್ಟು ಅದಕ್ಕೆ ಕಾರಣ. ಈ ಸಲವೂ ಭಾರತವು ಪಾಕ್ ದೇಶಕ್ಕೆ ಹೋಗಲು ನಿರಾಕರಿಸಿದಾಗ, ಬಿಸಿಸಿಐ ಆತಿಥ್ಯದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವುದಿಲ್ಲ ಎಂದು ಪಾಕ್ ಕೂಡ ಬೆದರಿಕೆ ಹಾಕಿತ್ತು. ಆದರೆ ಬಿಸಿಸಿಐ ಮಣಿದಿರಲಿಲ್ಲ.

ಅಂತಿಮವಾಗಿ ರಾಜೀ ಸೂತ್ರಕ್ಕೆ ಬಂದ ಉಭಯ ಮಂಡಳಿಗಳು ತಟಸ್ಥ ತಾಣದಲ್ಲಿ ಆಡಲು ಸಿದ್ಧವಾದವು. ಆದ್ದರಿಂದ ಟೂರ್ನಿಯ ಕೇವಲ ನಾಲ್ಕು ಪಂದ್ಯಗಳು ಪಾಕ್‌ನಲ್ಲಿ ನಡೆದವು. ಉಳಿದದ್ದು ಶ್ರೀಲಂಕಾದಲ್ಲಿ ಆಯೋಜನೆಗೊಂಡಿವೆ. ಭಾರತವು ಶ್ರೀಲಂಕಾದ ತಾಣಗಳಲ್ಲಿ ಆಡಲಿದೆ.



ಶಾಹೀನ್ ಆಫ್ರಿದಿ –ಎಎಫ್‌ಪಿ ಚಿತ್ರ

ಕೊಹ್ಲಿಗೆ ಅಪ್ಪಳಿಸಿದ ಸಿರಾಜ್ ಬೌನ್ಸರ್

ಶುಕ್ರವಾರ ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ ಗೆ ವೇಗಿ ಮೊಹಮ್ಮದ್ ಸಿರಾಜ್ ಅವರ ಬೌನ್ಸರ್ ಅಪ್ಪಳಿಸಿತು. ಅದೃಷ್ಟವಶಾತ್ ಕೊಹ್ಲಿಗೆ ಇದರಿಂದ ಹೆಚ್ಚು ಪೆಟ್ಟಾಗಲಿಲ್ಲ.

ಕೆಲವೇ ನಿಮಿಷಗಳಲ್ಲಿ ಕೊಹ್ಲಿ ತಮಗೆ ಏನೂ ಆಗಿಲ್ಲ ಎಂದು ಕೈ ಹೆಬ್ಬೆರಳು ಎತ್ತಿ ತೋರಿದರು. ಮತ್ತೆ ಅಭ್ಯಾಸ ಮುಂದುವರಿಸಿದರು.

ಸ್ವಿಜರ್ಲೆಂಡ್‌ನಲ್ಲಿ ತರಬೇತಿ: ನೀರಜ್ ಪ್ರಸ್ತಾವಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ವಿಶ್ವ ಮತ್ತು ಒಲಿಂಪಿಕ್ ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ ಅವರಿಗೆ ಸ್ವಿಜರ್ಲೆಂಡ್‌ನಲ್ಲಿ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳುವುದಕ್ಕೆ ತಗಲುವ ಖರ್ಚು ಭರಿಸಲು ಕ್ರೀಡಾ ಸಚಿವಾಲಯದ ಮಿಷನ್ ಒಲಿಂಪಿಕ್ ಸೆಲ್ ಶುಕ್ರವಾರ ಅನುಮತಿ ನೀಡಿದೆ. ಇತರ ಕೆಲವು ಕ್ರೀಡಾಪಟುಗಳ ಪ್ರಸ್ತಾವಗಳಿಗೂ ಸಮ್ಮತಿ ನೀಡಲಾಗಿದೆ.

ಈ ತಿಂಗಳ ಕೊನೆಯಲ್ಲಿ ಅಮೆರಿಕದ ಯುಜೀನ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ಮೊದಲು 12 ದಿನಗಳ ಶಿಬಿರದಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಚೋಪ್ರಾ ಮನವಿ ಮಾಡಿದ್ದರು. ಈ ಶಿಬಿರ ಶುಕ್ರವಾರ ಆರಂಭವಾಗಿದ್ದು, ಈ ತಿಂಗಳ 12ರವರೆಗೆ ನಡೆಯಲಿದೆ. ಇದಕ್ಕೆ ಕೇಂದ್ರವು ₹5.89 ಲಕ್ಷ ಭರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬುಡಾಪೆಸ್ಟ್ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ (9:15.31 ಸೆ.) ಸ್ಥಾಪಿಸಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದ ಪಾರುಲ್ ಚೌಧರಿ ಅವರನ್ನು 'ಟಾಪ್ಸ್' ಪ್ರಮುಖ ಅಥ್ಲೀಟುಗಳ ಗುಂಪಿಗೆ ಸೇರ್ಪಡೆ ಮಾಡಲಾಗಿದೆ. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು, ಸಲಕರಣೆಗಳ ಖರೀದಿ ಮತ್ತು ಕ್ರಿಸ್ ಫೀಫರ್ ಅವರನ್ನು ಪ್ಯಾರಿಸ್ ಒಲಿಂಪಿಕ್ಸ್ ವರೆಗೆ ಪರ್ಸನಲ್ ಕೋಚ್ ಆಗಿ ಸೇವೆ ಪಡೆದುಕೊಳ್ಳುವುದಕ್ಕೆ ಹಿರಿಯ ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಅವರಿಗೆ ಹಣಕಾಸು ನೆರವು ನೀಡಲಾಗಿದೆ. ವಿಶ್ವದ ಎರಡನೇ ಕ್ರಮಾಂಕದ ಬ್ಯಾಡ್ಮಿಂಟನ್ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ಜೊತೆ ಚೀನಾ ಓಪನ್ ಟೂರ್ನಿ (ಸೆ. 5 ರಿಂದ 10)ಗೆ ಹೋಗಲು ಮಸಾಜರ್ ನಿಶಾಂತ್ ನಾಗ್ಪುರಿ ಅವರಿಗೆ ಅನುಮತಿ ನೀಡಲಾಗಿದೆ.

ಡೈಮಂಡ್ ಲೀಗ್‌ನ ಜ್ಯೂರಿಚ್ ಲೆಗ್: ಶ್ರೀಶಂಕರ್‌ಗೆ 5ನೇ ಸ್ಥಾನ

ನೀರಜ್‌ಗೆ ಎರಡನೇ ಸ್ಥಾನ

ಜ್ಯೂರಿಚ್ (ಪಿಟಿಐ): ವಿಶ್ವ ಜಾವೆಲಿನ್ ನೂತನ ಚಾಂಪಿಯನ್ ನೀರಜ್ ಚೋಪ್ರಾ ಅವರು ಗುರುವಾರ ನಡೆದ ಡೈಮಂಡ್ ಲೀಗ್ ಕೂಟದಲ್ಲಿ 85.71 ಮೀ. ದೂರ ಎಸೆದು ಎರಡನೇ ಸ್ಥಾನ ಪಡೆದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಪಡೆದಿದ್ದ ಚೆಕ್ ರಿಪಬ್ಲಿಕ್‌ನ ಯಾಕುಬ್ ವಾದ್ಲೆಚ್ (85.86 ಮೀ.) ಅಗ್ರಸ್ಥಾನ ಪಡೆದರು.

ಹಾಲಿ ಒಲಿಂಪಿಕ್ ಚಾಂಪಿಯನ್ ಸಹ ಆಗಿರುವ ನೀರಜ್, ಗುರುವಾರ ಆರು ಯತ್ನಗಳ ಪೈಕಿ ಅಂತಿಮ ಯತ್ನದಲ್ಲಿ ಈ ಸಾಧನೆ ಮಾಡಿದರು. ಅವರು ಮೂರು (2,3 ಮತ್ತು 5ನೇ) ಯತ್ನಗಳಲ್ಲಿ ಫೌಲ್ ಆದರು. ಉಳಿದ ಮೂರು ಯತ್ನಗಳಲ್ಲಿ ಜಾವೆಲಿನ್‌ಅನ್ನು ಕ್ರಮವಾಗಿ 80.79 ಮೀ., 85.22 ಮೀ., 85.71 ಮೀ. ದೂರಕ್ಕೆ ಎಸೆದರು.

'ಇಲ್ಲಿನ ಪ್ರದರ್ಶನದ ಬಗ್ಗೆ ಸಂತೃಪ್ತಿ ಇದೆ. ವಿಶ್ವ ಚಾಂಪಿಯನ್‌ಷಿಪ್ ನಂತರ ಎಲ್ಲರಿಗೂ ಆಯಾಸ ಆಗಿತ್ತು. ಬುಡಾಪೆಸ್ಟ್‌ನಲ್ಲಿ ನಾವು 100 ಪ್ರತಿಶತ ಪ್ರಯತ್ನ ಹಾಕಿದ್ದೆವು. ಹಾಗಾಗಿ ಇಲ್ಲಿ ಆರೋಗ್ಯ ಕಾಪಾಡುವ ಕಡೆಯೂ ಲಕ್ಷ್ಯ ಕೊಡಬೇಕಾಗಿತ್ತು. ಈಗ ಯುಜೀನ್ (ಮುಂದಿನ ಡೈಮಂಡ್ ಲೀಗ್ ಲೆಗ್) ಕಡೆ ನನ್ನ ಗಮನ ಇದೆ. ಮುಂದೆ ಹಾಂಗ್‌ಝೌ ಏಷ್ಯನ್ ಗೇಮ್ಸ್ ಕಡೆ ಗಮನ ಕೇಂದ್ರೀಕರಿಸುವೆ' ಎಂದು 25 ವರ್ಷದ ನೀರಜ್ ಹೇಳಿದರು. ಆಗಸ್ಟ್ 28ರಂದು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಅಥ್ಲೀಟ್ ಎನಿಸಿ ಇತಿಹಾಸ ಸ್ಥಾಪಿಸಿದ್ದರು.

ಗುರುವಾರಕ್ಕೆ ಮುಂಚೆ ಅವರು ಈ ಋತುವಿನಲ್ಲಿ ಒಮ್ಮೆಯೂ ಸೋತಿರಲಿಲ್ಲ. ಈಗ ಮೂರು ಕೂಟಗಳಿಂದ 23 ಪಾಯಿಂಟ್ಸ್ ಕಲೆಹಾಕಿರುವ ಅವರು ಮೂರನೇ ಸ್ಥಾನದೊಡನೆ ಅಮೆರಿಕದ ಯುಜೀನ್ ಡೈಮಂಡ್ ಲೀಗ್ ಲೆಗ್‌ನಲ್ಲಿ ಭಾಗವಹಿಸುವ ಅರ್ಹತೆ ಪಡೆದಿದ್ದಾರೆ.

ಜುಲೈ 21ರಂದು ನಡೆದ ಡೈಮಂಡ್ ಲೀಗ್ ಕೂಟದ ಮೊನಾಕೊ ಲೆಗ್‌ನಲ್ಲಿ ಗಾಯಾಳಾಗಿ ಭಾಗವಹಿಸದ ಕಾರಣ ಅವರು ಮೂರನೇ ಸ್ಥಾನಕ್ಕೆ ಸರಿದರು. ಡೈಮಂಡ್ ಲೀಗ್‌ನ ಎಲ್ಲ ಲೆಗ್‌ಗಳಲ್ಲಿ ಭಾಗವಹಿಸಿರುವ ಯಾಕೂಬ್ ವಾದ್ಲೆಚ್ (29 ಪಾಯಿಂಟ್ಸ್) ಮತ್ತು ಜರ್ಮನಿಯ ಜೂಲಿಯನ್ ವೆಬರ್ (25 ಪಾಯಿಂಟ್ಸ್) ಮೊದಲ ಎರಡು ಸ್ಥಾನ ಪಡೆದಿದ್ದಾರೆ. ಚೋಪ್ರಾ ಹೋದ ವರ್ಷ ಡೈಮಂಡ್ ಲೀಗ್ ಪ್ರಶಸ್ತಿ ಪಡೆದಿದ್ದರು.

ಈ ವರ್ಷ ಭಾರತದ ಸೂಪರ್‌ಸ್ಟಾರ್ ಅಥ್ಲೀಟ್, ದೋಹಾದಲ್ಲಿ (ಮೇ 5) ಮತ್ತು ಲುಸಾನ್‌ನಲ್ಲಿ (ಜೂನ್ 30) ವಿಜೇತರಾಗಿದ್ದಾರೆ. ಇದರ ಜೊತೆಗೆ ಬುಡಾಪೆಸ್ಟ್‌ನಲ್ಲಿ ಚಾರಿತ್ರಿಕ ಚಿನ್ನ ಗೆದ್ದಿದ್ದಾರೆ.



ನೀರಜ್ ಚೋಪ್ರಾ –ಸಾಯ್ ಮೀಡಿಯಾ 'ಎಕ್ಸ್' ಚಿತ್ರ

'ಚಿನ್ನ ಉಳಿಸುವ ಗುರಿ'

'ಪ್ಯಾರಿಸ್‌ನಲ್ಲಿ ಮುಂದಿನ ವರ್ಷ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಮತ್ತು 2025ರಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಉಳಿಸಿಕೊಳ್ಳಲು ನನ್ನಿಂದಾಗುವ ಎಲ್ಲ ಪ್ರಯತ್ನ ಹಾಕುತ್ತೇನೆ' ಎಂದು ಜಾವೆಲಿನ್‌ನ ಸೂಪರ್‌ಸ್ಟಾರ್ ನೀರಜ್ ಚೋಪ್ರಾ ಹೇಳಿದ್ದಾರೆ.

ಕಳೆದ ಭಾನುವಾರ ವಿಶ್ವ ಚಾಂಪಿಯನ್‌ಷಿಪ್ ಜಾವೆಲಿನ್ ಪ್ರಶಸ್ತಿ ಗೆಲ್ಲುವ ಮೂಲಕ ನೀರಜ್ ಅವರು ವಿಶ್ವ ಮತ್ತು ಒಲಿಂಪಿಕ್ ಚಿನ್ನ ಗೆದ್ದ ವಿಶ್ವದ ಮೂರನೇ ಜಾವೆಲಿನ್ ಥ್ರೋವರ್ ಎನಿಸಿದ್ದರು. ಅವರಿಗಿಂತ ಮೊದಲು ಜೆಕ್ ದಂತಕತೆ ಜಾನ್ ಜೆಲೆನ್‌ಸ್ಕಿ ಮತ್ತು ನಾರ್ವೆಯ ಆ್ಯಂಡ್ರಿಯಾಸ್ ತೊರ್ಕಿಲ್ಡ್‌ಸೆನ್ ಈ ಹಿರಿಮೆಗೆ ಪಾತ್ರರಾಗಿದ್ದರು.

ಚೋಪ್ರಾ ಅವರು ಬಹುಮಾನವಾಗಿ ₹4.96 ಲಕ್ಷ ($6000) ಪಡೆದರೆ, ಚೆಕ್ ರಿಪಬ್ಲಿಕ್‌ನ ವಾದ್ಲೆಚ್ ಅವರು ₹9.92 ಲಕ್ಷ ನಗದು ಬಹುಮಾನ ಜೇಬಿಗಿಳಿಸಿದರು.

ಡೈಮಂಡ್ ಲೀಗ್‌ನ ಲೆಗ್‌ಗಳಲ್ಲಿ ಬೇರೆ ಬೇರೆ ನಗದು ಬಹುಮಾನಗಳು ಇರುತ್ತವೆ. ಯುಜೀನ್ ಲೆಗ್‌ನಲ್ಲಿ ವಿಜೇತ ಸ್ಪರ್ಧಿ ಸುಮಾರು ₹25 ಲಕ್ಷ ಮತ್ತು ರನ್ನರ್ ಆದ ಸ್ಪರ್ಧಿ 9.92 ಲಕ್ಷ ಹಾಗೂ ಮೂರನೇ ಸ್ಥಾನ ಪಡೆದ ಸ್ಪರ್ಧಿ ₹5.78 ಲಕ್ಷ ಜೇಬಿಗೆ ಇಳಿಸಲಿದ್ದಾರೆ.

ಶ್ರೀಶಂಕರ್‌ಗೆ 5ನೇ ಸ್ಥಾನ: ಪುರುಷರ ಲಾಂಗ್‌ಜಂಪ್‌ನಲ್ಲಿ ಭಾರತದ ಮುರಳಿ ಶ್ರೀಶಂಕರ್ ಐದನೇ ಸ್ಥಾನ ಪಡೆದರು. ಅವರು ಮೊದಲ ಸುತ್ತಿನಲ್ಲಿ 7.99 ಮೀ. ಜಿಗಿದಿದ್ದು ಅದೇ ಉತ್ತಮ ಯತ್ನವಾಯಿತು. ಅವರು ಒಟ್ಟಾರೆ ಮೂರನೇ ಸ್ಥಾನದೊಡನೆ (14 ಪಾಯಿಂಟ್ಸ್) ಡೈಮಂಡ್ ಲೀಗ್ ಫೈನಲ್‌ಗೆ ಅರ್ಹತೆ ಪಡೆದರು.

ಮೊದಲ ಸುತ್ತಿನ ನಂತರ ಲೀಡ್‌ನಲ್ಲಿದ್ದ ಶ್ರೀಶಂಕರ್ ಅವರಿಗೆ ನಂತರದ ಯತ್ನಗಳಲ್ಲಿ ತಮ್ಮ ಸಾಧನೆಯನ್ನು ಸುಧಾರಿಸಲು ಸಾಧ್ಯವಾಗಲಿಲ್ಲ. ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಮಿಲ್ಟಿಯಾಡಿಸ್ ತೆಟೊಂಗ್ಲು (ಗ್ರೀಸ್) ಅವರು ಆರನೇ ಮತ್ತು ಅಂತಿಮ ಯತ್ನದಲ್ಲಿ 8.20 ಮೀ. ಜಿಗಿದು ಸ್ವರ್ಣ ಗೆದ್ದರು.

ದೋಷಾರೋಪ ನಿಗದಿ: ಕುಸ್ತಿಪಟುಗಳ ಮನವಿ

ನವದೆಹಲಿ: ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ನ ಮಾಜಿ ಮುಖ್ಯಸ್ಥ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದೋಷಾರೋಪ ನಿಗದಿಪಡಿಸಬೇಕು ಎಂದು 6 ಮಹಿಳಾ ಕುಸ್ತಿಪಟುಗಳು ಶುಕ್ರವಾರ ದೆಹಲಿ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಲೈಂಗಿಕ ದೌರ್ಜನ್ಯ ಪ್ರಕರಣದ ವಿಚಾರಣೆ ವೇಳೆ ಮಹಿಳಾ ಕುಸ್ತಿಪಟುಗಳು ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಅವರ ಎದುರು ಈ ಮನವಿ ಸಲ್ಲಿಸಿದರು.

'ಪ್ರಥಮ ಮಾಹಿತಿ ವರದಿಯಲ್ಲಿನ (ಎಫ್‌ಐಆರ್) ಆರೋಪಗಳು ಚಾರ್ಜ್‌ಶೀಟ್‌ನಲ್ಲೂ ನಮೂದಾಗಿದ್ದು, ಆಪಾದಿತ ವ್ಯಕ್ತಿಗಳ ವಿರುದ್ಧ ದೋಷಾರೋಪಣೆ ನಿಗದಿ ಮಾಡುವ ಅಗತ್ಯವಿದೆ' ಎಂದು ವಕೀಲೆ ರಬೆಕ್ಕಾ ಜಾನ್ ಮನವಿ ಮಾಡಿದರು.

'ಮೇಲ್ವಿಚಾರಣಾ ಸಮಿತಿಯನ್ನು ಲೈಂಗಿಕ ದೌರ್ಜನ್ಯ ನಿಯಂತ್ರಣ ಕಾಯ್ದೆಯ ಪ್ರಕಾರ ರಚನೆ ಮಾಡಿಲ್ಲ. ಅದರ ವರದಿಯನ್ನು ತಿರಸ್ಕರಿಸಬೇಕು. ಏಕೆಂದರೆ ಈ ಸಮಿತಿಯು ಕೇವಲ ಕಣ್ಣೊರೆಸುವ ತಂತ್ರ ಮಾತ್ರ. ಸೂಕ್ತ ತನಿಖೆ ನಡೆಸದೇ ಸಾಮಾನ್ಯ ಶಿಫಾರಸುಗಳನ್ನು ಸಮಿತಿ ನೀಡಿದೆ' ಎಂದು ವಕೀಲರು ಅಭಿಪ್ರಾಯಪಟ್ಟರು.

ಬಾಕ್ಸರ್ ಎಂ.ಸಿ ಮೇರಿ ಕೋಮ್ ಮೇಲ್ವಿಚಾರಣಾ ಸಮಿತಿಯ ನೇತೃತ್ವ ವಹಿಸಿದ್ದಾರೆ. ಮಹಿಳಾ ಕುಸ್ತಿಪಟುಗಳ ವಾದ ಆಲಿಸಿದ ಕೋರ್ಟ್ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 16ಕ್ಕೆ ಮುಂದೂಡಿತು. ಸಿಂಗ್ ಮತ್ತು ತೋಮರ್‌ಗೆ ನ್ಯಾಯಾಲಯ ಜುಲೈ 20ರಂದು ಜಾಮೀನು ಮಂಜೂರು ಮಾಡಿತ್ತು.

ಮೂರನೇ ಸುತ್ತಿಗೆ ಅಲ್ಕರಾಜ್

ಅಮೆರಿಕ ಓಪನ್ ಟೆನಿಸ್: ಮೆಡ್ವೆಡೇವ್, ಜಬೇರ್‌ಗೆ ಜಯ

ನ್ಯೂಯಾರ್ಕ್ (ಎಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಗುರುವಾರ ತಮ್ಮ ಪಂದ್ಯ ಆಡಿದ ನಂತರ ಬೇರೆ ಪಂದ್ಯಗಳನ್ನು ನೋಡುತ್ತ ಕುಳಿತರು. ಅಮೆರಿಕ ಓಪನ್ ಸಿಂಗಲ್ಸ್ 'ಡ್ರಾ'ದಲ್ಲಿ ನೊವಾಕ್ ಜೊಕೊವಿಚ್ ಅವರಿಗಿಂತ ತಮ್ಮ ಭಾಗದ ಹಾದಿ ಕಠಿಣವಾಗುತ್ತಿರುವುದನ್ನು ಅಗ್ರ ಶ್ರೇಯಾಂಕದ ಸ್ಪೇನ್ ಆಟಗಾರ ಗಮನಿಸುತ್ತಿದ್ದು, ಉಳಿದವರಿಗಿಂತ ಭಿನ್ನವಾಗಿ ಕಂಡರು.

ಅಗ್ರ ಶ್ರೇಯಾಂಕದ ಅಲ್ಕರಾಜ್, ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ 6–3, 6–1, 7–6 (4) ರಿಂದ ಲಾಯ್ಡ್ ಹ್ಯಾರಿಸ್ (ದಕ್ಷಿಣ ಆಫ್ರಿಕಾ) ಅವರನ್ನು ಸೋಲಿಸಿ ಮೂರನೇ ಸುತ್ತಿಗೆ ಮುನ್ನಡೆದಿದ್ದಾರೆ. 'ಡ್ರಾ'ದಲ್ಲಿ ತಮ್ಮ ಕಡೆಯ ಅರ್ಧದಲ್ಲಿರುವ ಶ್ರೇಯಾಂಕ ಆಟಗಾರರು ಕಣದಲ್ಲಿ ಉಳಿದಿದ್ದಾರೆ. ಆದರೆ ಕೆಳ ಅರ್ಧದಲ್ಲಿ (ಜೊಕೊವಿಚ್ ಅವರ ಭಾಗ) ಕೆಲವು ಖ್ಯಾತನಾಮರು ಹೊರಬಿದ್ದಿದ್ದಾರೆ. ನಾಲ್ಕನೇ ಶ್ರೇಯಾಂಕದ ಹೋಲ್ಗರ್ ರೂನ್, ಐದನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್, ಏಳನೇ ಶ್ರೇಯಾಂಕದ ಸಿಸಿಪಸ್ ಪ್ರಮುಖರು. 9ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಮತ್ತು 10ನೇ ಶ್ರೇಯಾಂಕದ ಫ್ರಾನ್ಸಿಸ್ ಟಿಫೊ ಮಾತ್ರ ಉಳಿದುಕೊಂಡಿದ್ದಾರೆ.

ಆದರೆ ಮೇಲಿನ ಡ್ರಾದಲ್ಲಿ ಮೂರನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್, ಆರನೇ ಶ್ರೇಯಾಂಕದ ಯಾನಿಕ್ ಸಿನ್ನರ್, ಎಂಟನೇ ಶ್ರೇಯಾಂಕದ ರುಬ್ಲೇವ್, 12ನೇ ಶ್ರೇಯಾಂಕದ ಜ್ವರೇವ್ ಉಳಿದುಕೊಂಡಿದ್ದಾರೆ.

'ಡ್ರಾ'ದ ಮೇಲಿನ ಅರ್ಧ ಅಥವಾ ಕೆಳಅರ್ಧ ಮುಖ್ಯವಲ್ಲ. ನಾನು ಎಲ್ಲ ಪಂದ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ' ಎಂದು ಅಲ್ಕರಾಜ್ ಹೇಳಿದ್ದಾರೆ. ಅವರ ಮುಂದಿನ ಎದುರಾಳಿ 26ನೇ ಶ್ರೇಯಾಂಕದ ಡಾನ್ ಇವಾನ್ಸ್ (ಬ್ರಿಟನ್).

3ನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ (ರಷ್ಯಾ) ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಒ'ಕಾನೆಲ್ ಅವರ ಸವಾಲನ್ನು 6–2, 6–2, 6–7 (6), 6–2 ರಿಂದ ಪ್ರಯಾಸದಿಂದ ಬದಿಗೊತ್ತಿ ಮೂರನೇ ಸುತ್ತನ್ನು ತಲುಪಿದರು.

ಜಬೇರ್ ಮುನ್ನಡೆ: ಜ್ವರದಿಂದ ಬಳಲುತ್ತಿದ್ದರೂ ಛಲ ಬಿಡದ ಐದನೇ ಶ್ರೇಯಾಂಕದ ಆಟಗಾರ್ತಿ ಓನ್ಸ್ ಜಬೇರ್ ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಹದಿಹರೆಯದ ಆಟಗಾರ್ತಿ ಲಿಂಡಾ ನೊಸ್ಕೊವಾ ಅವರನ್ನು 7–6 (7), 4–6, 6–3 ರಿಂದ ಸೋಲಿಸಿದರು.

ಅಮೆರಿಕದ ಅಗ್ರ ಆಟಗಾರ್ತಿ ಜೆಸ್ಸಿಕಾ ಪೆಗುಲಾ ಮತ್ತೊಂದು ಪಂದ್ಯದಲ್ಲಿ 6–3, 6–1 ರಿಂದ ರುಮೇನಿಯಾದ ಪೆಟ್ರೀಷಿಯಾ ಮರಿಯಾ ಟಿಗ್ ಅವರ ಮೇಲೆ ನಿರಾಯಾಸ ಜಯ ಪಡೆದರು.

ಇಸ್ನರ್ ನಿರ್ಗಮನ: ಅಮೆರಿಕದ ಆಟಗಾರ, ಆರು ಅಡಿ ಹತ್ತು ಇಂಚು ಎತ್ತರದ ಅಜಾನಬಾಹು ಜಾನ್ ಇಸ್ನರ್ ಸಿಂಗಲ್ಸ್, ಡಬಲ್ಸ್ ಎರಡರಲ್ಲೂ ಸೋಲುಂಡರು. ಈ ಟೂರ್ನಿ ನಂತರ ನಿವೃತ್ತಿಯಾಗುವುದಾಗಿ ಅವರು ಈಗಾಗಲೇ ಘೋಷಿಸಿದ್ದಾರೆ.

ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಅಮೆರಿಕದ ಮೈಕೆಲ್ ಮ್ಮೋ ಎರಡನೇ ಸುತ್ತಿನಲ್ಲಿ 3–6, 4–6, 7–6 (3), 6–4, 7–6 (10–7) ರಿಂದ 38 ವರ್ಷದ ಇಸ್ನರ್ ಅವರನ್ನು ಸೋಲಿಸಿದರು.

ರೋಹನ್– ಮ್ಯಾಥ್ಯೂ ಜೋಡಿ ಮುನ್ನಡೆ

ಪುರುಷರ ಡಬಲ್ಸ್‌ನಲ್ಲಿ ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯಾ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಎರಡನೇ ಸುತ್ತಿನಲ್ಲಿ 6–3, 6–3ರಿಂದ ಕಜಕಿಸ್ತಾನದ ಆಂಡ್ರೆ ಗೊಲುಬೆವ್ ಮತ್ತು ರಷ್ಯಾದ ರೋಮನ್ ಸಫಿಯುಲಿನ್ ಜೋಡಿಯನ್ನು ಮಣಿಸಿ, ಮುನ್ನಡೆದರು. ರೋಹನ್ ಜೋಡಿಯು ಮೂರನೇ ಸುತ್ತಿನಲ್ಲಿ ಇಂಗ್ಲೆಂಡ್‌ನ ಜೂಲಿಯನ್ ಕ್ಯಾಶ್ ಮತ್ತು ಹೆನ್ರಿ ಪ್ಯಾಟನ್ ಜೋಡಿಯ ಸವಾಲನ್ನು ಎದುರಿಸುವರು.

ಯೂಕಿ ಬಾಂಬ್ರಿ ಮತ್ತು ಸಾಕೇತ್ ಮೈನೇನಿ ಅವರು ಮೊದಲ ಸುತ್ತಿನಲ್ಲಿ ಹೊರಬಿದ್ದರು. 9ನೇ ಶ್ರೇಯಾಂಕದ ಹ್ಯೂಗೊ ನಿಸ್– ಯಾನ್ ಜಿಲೆನ್‌ಸ್ಕಿ (ಪೋಲೆಂಡ್) ಜೋಡಿ 83 ನಿಮಿಷ ನಡೆದ ಪಂದ್ಯದಲ್ಲಿ ಬಾಂಬ್ರಿ ಮತ್ತು ಜೊತೆಗಾರ ಮಾರ್ಸಿಲೊ ಡೆಮೊಲಿನರ್ ಅವರನ್ನು 6–3, 7–5ರಿಂದ ಸೋಲಿಸಿತು.

ಮೈನೇನಿ ಮತ್ತು ರಷ್ಯಾದ ಜೊತೆಗಾರ ಅಲೆಕ್ಸ್ ಕರಾತ್ಸೆ ಅವರು ಮೊದಲ ಸೆಟ್ ಪಡೆದರೂ ಅಂತಿಮವಾಗಿ ಸರ್ಬಿಯಾದ ಲಾಸ್ಲೊ ಡ್ಯರೆ ಮತ್ತು ಸ್ವಿಜರ್ಲೆಂಡ್‌ನ ಮಾರ್ಕ್ ಆಂಡ್ರಿಯ ಹುಸ್ಲರ್ ಜೋಡಿ ಎದುರು 6–7, 6–3, 6–2ರಲ್ಲಿ ಸೋತರು.


ಕಾರ್ಲೋಸ್ ಅಲ್ಕರಾಜ್

ಸಬ್ ಜೂನಿಯರ್ ಫುಟ್‌ಬಾಲ್ ತಂಡಕ್ಕೆ ದರ್ಶ್ ಶುಕ್ಲಾ ನೇತೃತ್ವ

ಬೆಂಗಳೂರು: ದರ್ಶ್ ಶುಕ್ಲಾ ಅವರು ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ಸೆ.3 ರಿಂದ 13ರ ವರೆಗೆ ನಡೆಯಲಿರುವ ರಾಷ್ಟ್ರೀಯ ಸಬ್ ಜೂನಿಯರ್ (13 ವರ್ಷದೊಳಗಿನವರು) ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡ ಹೀಗಿದೆ: ದರ್ಶ್ ಶುಕ್ಲಾ (ನಾಯಕ), ಶಾನ್ ಚೌಧರಿ, ಮೊಹಮ್ಮದ್ ರಯಾನ್ ಸಿದ್ದೀಕ್, ಎಲ್.ಕೆ.ಯುವನ್, ಶ್ರೇಯಸ್ ನಿಂಗನಗೌಡ ಪಾಟೀಲ್, ಯೊಹಾನ್ ಜಾರ್ಜ್, ವಿಜೇತ್ ಸುಮನ್, ಜಿ.ಕಚರಿ, ಲಿಯಾಮ್ ಟೆರೆನ್ಸ್ ಫೆರ್ನಾಂಡಿಸ್, ಹಿಮಾಗ್ನ ಸನ್ಯಾಲ್, ರಿತ್ವಿಕ್ ಟಿ., ರಿದಿತ್ ಮಹೇಶ್ವರಿ, ಕೆ.ಜೊಯೆಲ್ ಅಬ್ರಹಾಂ, ಹವೀಶ್ ಪಿ.ಸಿ., ಪಿ.ಅಖಿಲೇಶ್, ರೋ ಹನ್ ಎಂ.ಎಂ., ಬಿ.ಜೆ.ಲಕ್ಷಿತ್, ಅರ್ವಿನ್ ಪಿ.ಸಿ., ಎನ್.ರೂನಿಶ್ ಕುಮಾರ್, ವಿರಾಜ್ ಅರೋರಾ, ಯಥಾರ್ಥ್ ಮಿಶ್ರಾ, ಶಿವಾಂಶ್ ಪಾಟೀಲ್. ಅರೋಕ್ಯನಾಥ್ (ಮುಖ್ಯ ಕೋಚ್), ಆರ್.ಸನತ್ ಕುಮಾರ್ (ಸಹಾಯಕ ಕೋಚ್), ಅಹ್ಮದ್ ಮುಜ್ತಬಾ (ಮ್ಯಾನೇಜರ್).

ಕರ್ನಾಟಕವು ಸೆ.5 ರಂದು ಉತ್ತರ ಪ್ರದೇಶ ವಿರುದ್ಧ ಪೈಪೋಟಿ ನಡೆಸಲಿದೆ.

ಪುಣೆ ರೇಸ್

ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ಇದಾರ್ ಗೋಲ್ಡ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜೆರುಸಲೆಮ್ 4, ಆಲ್ಫಾ ಡೊಮಿನೊ 3, ವಿಲ್ಲಿ ವೊಂಕಾ 1
2ನೇ ರೇಸ್: ದಿ ಜನರಲ್ 1, ಡೆಮೊಕ್ರಸಿ 3, ಬಬ್ಲಿ ಬಾಯ್ 2
3ನೇ ರೇಸ್: ದಿ ಗಾಡ್‌ಫಾದರ್ 1, ಆಕ್ಸಲ್‌ರಾಡ್ 5, ಚೆನೆವಿಕ್ಸ್ ಟ್ರೆಂಚ್ 3
4ನೇ ರೇಸ್: ಐರಿಷ್ ಗೋಲ್ಡ್ 5, ಫೈಟಾನ್ 4, ಐರಿಷ್ ಮೋರ್ 10
5ನೇ ರೇಸ್: ಕಿಂಗ್ಸ್ ರಾನ್ಸಮ್ 1, ಡಿಫ್ 2, ಡೇಂಜರಸ್ 4
6ನೇ ರೇಸ್: ಪ್ರೈಡ್ಸ್ ಏಂಜೆಲ್ 7, ಗೋಲ್ಡನ್ ನೀಲ್ 3, ಇನ್‌ಕಂಟೆನ್ಷನ್ 5
7ನೇ ರೇಸ್: ಚೀಫ್ಟನ್ 1, ಗ್ಯಾಲಪಿಂಗ್ ಗ್ಲೋರಿ 6, ಮಾರ್ಲ್‌ಬೋರೊ ಮ್ಯಾನ್ 2

ಉತ್ತಮ ಬೆಟ್: ದಿ ಗಾಡ್‌ಫಾದರ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಚೆಸ್: ಆನಂದ್ ಆಧಿಪತ್ಯ ಕೊನೆಗೊಳಿಸಿದ ಗುಕೇಶ್

ಚೆನ್ನೈ (ಪಿಟಿಐ): ದೇಶದ ಅಗ್ರಮಾನ್ಯ ಆಟಗಾರ ಎಂಬ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರ 37 ವರ್ಷಗಳ ದೀರ್ಘ ಕಾಲದ ಆಧಿಪತ್ಯ ಅಂತ್ಯಗೊಂಡಿತು. ಹದಿಹರೆಯದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರು ಶುಕ್ರವಾರ ಅಧಿಕೃತವಾಗಿ ಆ ಸ್ಥಾನಕ್ಕೇರಿದ್ದಾರೆ.



ಡಿ.ಗುಕೇಶ್

1986ರ ಜುಲೈ 1 ರಿಂದ ಆನಂದ್ ಅವರು ದೇಶದ ನಂಬರ್ ವನ್ ಆಟಗಾರರಾಗಿದ್ದರು. ಚೆನ್ನೈನ ಗುಕೇಶ್ ಅವರು ಬಾಕುವಿನಲ್ಲಿ (ಅಜರ್‌ಬೈಜಾನ್) ನಡೆದ ವಿಶ್ವಕಪ್ ಚೆಸ್ ಟೂರ್ನಿಯ ವೇಳೆ ರ್‍ಯಾಂಕಿಂಗ್‌ನಲ್ಲಿ ಆನಂದ್ ಅವರನ್ನು ಹಿಂದೆಹಾಕಿದ್ದರು. ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಸೋತಿದ್ದರು. ಸೆಪ್ಟೆಂಬರ್ ತಿಂಗಳ ಫಿಡೆ ಕ್ರಮಾಂಕ ಪಟ್ಟಿ ಪ್ರಕಟವಾಗಿದ್ದು ಅದರಲ್ಲಿ 17 ವರ್ಷದ ಗುಕೇಶ್ ಅವರು 2758 ರೇಟಿಂಗ್‌ನೊಡನೆ ಎಂಟನೇ ಸ್ಥಾನಕ್ಕೆ ಏರಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್ (2754) ಈಗ 9ನೇ ಸ್ಥಾನದಲ್ಲಿದ್ದಾರೆ. ಆಗಸ್ಟ್ ತಿಂಗಳ ರೇಟಿಂಗ್ ಪಟ್ಟಿಯಲ್ಲಿ ಗುಕೇಶ್ 11ನೇ ಸ್ಥಾನದಲ್ಲಿದ್ದರು. ಆಗ ಅವರ ಬಳಿ 2751 ಪಾಯಿಂಟ್ಸ್ ಇತ್ತು.

ಚೆಸ್ ವಿಶ್ವಕಪ್ ಫೈನಲ್ ತಲುಪಿ ಮನೆಮಾತಾದ ಇನ್ನೊಬ್ಬ ಪ್ರತಿಭಾವಂತ ಆರ್.ಪ್ರಜ್ಞಾನಂದ (2727) ಅವರೂ ಬಡ್ತಿ ಪಡೆದಿದ್ದು 19ನೇ ಸ್ಥಾನಕ್ಕೇರಿದ್ದಾರೆ. ಅವರು ಭಾರತದ ಆಟಗಾರರ ಪೈಕಿ ಮೂರನೇ ಸ್ಥಾನದಲ್ಲಿದ್ದಾರೆ.

ಭಾರತದ ಐವರು ಆಟಗಾರರು ಅಗ್ರ 30ರೊಳಗೆ ಸ್ಥಾನ ಪಡೆದಿದ್ದಾರೆ. ಗುಕೇಶ್, ಆನಂದ್, ಪ್ರಗ್ಗು ಜೊತೆ ವಿದಿತ್ ಗುಜರಾತಿ (27ನೇ) ಮತ್ತು ಅರ್ಜುನ್ ಎರಿಗೇಶಿ (29) ಅವರು ಇತರ ಇಬ್ಬರು. ಅನುಭವಿ ಆಟಗಾರ ಪಿ.ಹರಿಕೃಷ್ಣ 31ನೇ ಸ್ಥಾನದಲ್ಲಿದ್ದಾರೆ. ನಿಹಾಲ್ ಸರೀನ್ 43ನೇ ಸ್ಥಾನಕ್ಕೇರಿದ್ದಾರೆ. ಕಳೆದ ತಿಂಗಳು 51ನೇ ಸ್ಥಾನದಲ್ಲಿದ್ದರು.

ಪ್ರಗ್ಗುಗೆ ಸನ್ಮಾನ

ನವದೆಹಲಿ (ಪಿಟಿಐ): ಭಾರತ ಚೆಸ್ ತಂಡವು ಈ ತಿಂಗಳ 23ರಂದು ಚೀನಾದ ಹಾಂಗ್ ಝೌನಲ್ಲಿ ಆರಂಭವಾಗುವ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆಲ್ಲುವ ಉತ್ತಮ ಅವಕಾಶ ಹೊಂದಿದೆ ಎಂದು ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಹೇಳಿದರು.

ವಿಶ್ವಕಪ್‌ನಲ್ಲಿ ಬೆಳ್ಳಿಯ ಪದಕ ಗೆದ್ದ ಪ್ರಜ್ಞಾನಂದ ಅವರನ್ನು ಕ್ರೀಡಾ ಸಚಿವ ಅನುರಾಗ್ ಠಾಕೂರ್ ತಮ್ಮ ನಿವಾಸದಲ್ಲಿ ಶುಕ್ರವಾರ ಸನ್ಮಾನಿಸಿದರು.

ಚೆಸ್: ದಿವ್ಯಾ ಯಶಸ್ಸಿನ ಓಟ

ಕೋಲ್ಕತ್ತ (ಪಿಟಿಐ): ಭಾರತದ ವಿಮೆನ್ ಗ್ರ್ಯಾಂಡ್‌ಮಾಸ್ಟರ್ ದಿವ್ಯಾ ದೇಶಮುಖ್ ಟಾಟಾ ಸ್ಟೀಲ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಆಡಿದ ಮೂರೂ ಪಂದ್ಯಗಳಲ್ಲಿ ಜಯಶಾಲಿಯಾಗಿದ್ದಾರೆ. ಅವರು ಒಟ್ಟಾರೆ ಐದೂವರೆ ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ.

ಚೀನಾ ಜು ವೆನ್‌ಜುನ್ (4 ಪಾಯಿಂಟ್ಸ್) 2ನೇ ಸ್ಥಾನದಲ್ಲಿದ್ದಾರೆ. ರಷ್ಯಾದ ಆಟಗಾರ್ತಿ ಪೊಲಿನಾ ಶುವಲೋವಾ 3ನೇ ಸ್ಥಾನದಲ್ಲಿದ್ದಾರೆ.

ದಿನದ ತಮ್ಮ ಮೂರನೇ ಪಂದ್ಯದಲ್ಲಿ ದಿವ್ಯಾ, ವಂತಿಕಾ ಅಗರವಾಲ್ ವಿರುದ್ಧ ಜಯಗಳಿಸಿದರು.

ಭಾರತದ ಅಗ್ರಮಾನ್ಯ ಆಟಗಾರ್ತಿಯಾಗಿರುವ ಗ್ರ್ಯಾಂಡ್‌ಮಾಸ್ಟರ್ ಕೊನೇರು ಹಂಪಿ, ಜಾರ್ಜಿಯಾದ ನಿನೊ ಬಾಟ್ಸಿಯಾಶ್ವಿಲಿ ಅವರನ್ನು ಸೋಲಿಸುವ ಮೂಲಕ ಕೊನೆಗೂ ತಮ್ಮ ಮೊದಲ ಜಯ ದಾಖಲಿಸಿದರು. ದ್ರೋಣವಲ್ಲಿ ಹಾರಿಕಾ ಅವರು ಚೀನಾದ ವೆನ್‌ಜುನ್ ಅವರ ಎದುರು ಡ್ರಾ ಸಾಧಿಸಿದರು.

ಎಎಸ್‌ಸಿ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–1 ರಿಂದ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು

ಎಎಸ್‌ಸಿ ತಂಡದ ಟೋಂಗ್ಬ್ರಾಮ್ ಕೃಷ್ಣಕಾಂತ ಸಿಂಗ್, ಜಶಾನ್ ದೀಪ್ ಸಿಂಗ್, ಜಾಕೋಬ್ ವನ್ಲಾಲ್‌ಬೆಲಾ, ಶಂಶೇರ್ ಸಿಂಗ್ ತಲಾ ಒಂದು ಗೋಲು ಗಳಿಸಿದರೆ, ಚಿಕ್ಕಮಗಳೂರು ತಂಡದ ಪರವಾಗಿ ಏಕೈಕ ಗೋಲನ್ನು ಇಲೆನ್ಸ್ ಶರ್ಮಾ (80ನೇ) ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 1–0 ಯಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿಯನ್ನು ಮಣಿಸಿತು.

3ನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಕಲೈವಣನ್, ದೇಶ್ನಾಗೆ ಪ್ರಶಸ್ತಿ

ಬೆಳಗಾವಿ: ಎಂ. ಕಲೈವಣನ್ ಮತ್ತು ದೇಶ್ನಾ ಎಂ. ವಂಶಿಕಾ ಅವರು ಬೆಳಗಾವಿ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ 3ನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಶುಕ್ರವಾರ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಕಲೈವಣನ್ ಅವರು 12-10, 11-9, 11-6, 10-12, 11-6ರಿಂದ ಅನಿರ್ಬನ್ ರಾಯ್ ಚೌಧರಿ ಮಣಿಸಿದರು. ಸೆಮಿಫೈನಲ್‌ನಲ್ಲಿ ಕಲೈವಣನ್ ಅವರು ಅನುಜ್ ಮಹಿಪಾಲ್ ಅವರನ್ನು, ಅನಿರ್ಬನ್ ಅವರು ಸುರಮಿತ್ ಸಮದ್ದಾರ್ ಅವರನ್ನು ಸೋಲಿಸಿದ್ದರು.

ಮಹಿಳೆಯರ ಫೈನಲ್ ಪಂದ್ಯದಲ್ಲಿ ದೇಶ್ನಾ ಅವರು 11-6, 11-9, 11-6, 11-7 ರಿಂದ ಖುಷಿ ಅವರನ್ನು ಪರಾಭವಗೊಳಿಸಿದರು. ಸೆಮಿಫೈನಲ್‌ನಲ್ಲಿ ದೇಶ್ನಾ ಅವರು ತೃಪ್ತಿ ಪುರೋಹಿತ್ ಅವರನ್ನು, ಖುಷಿ ಅವರು ಅನರ್ಘ್ಯ ಮಂಜುನಾಥ್ ಅವರನ್ನು ಮಣಿಸಿದ್ದರು.

17 ವರ್ಷದೊಳಗಿನ ಬಾಲಕರ ಫೈನಲ್ ಪಂದ್ಯದಲ್ಲಿ ತೆಶುಬ್ ದಿನೇಶ್ ಅವರು 5-11, 11-6, 19-17, 11-13, 11-9 ರಿಂದ ಅಭಿನವ್ ಕೆ. ಮೂರ್ತಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಸೆಮಿಫೈನಲ್‌ನಲ್ಲಿ ತೆಶುಬ್ ಅವರು ಬಿ.ಆರ್. ಗೌರವ್ ಅವರನ್ನು, ಅಭಿನವ್ ಅವರು ವರುಣ್ ಬಿ. ಕಶ್ಯಪ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ಸಾನ್ವಿ ವಿಶಾಲ್ ಮಾಂಡೇಕರ್ ಅವರು 11-7, 16-18, 11-7, 12-14, 11-4 ರಿಂದ ನೀತಿ ಅಗರ್‌ವಾಲ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಸೆಮಿಫೈನಲ್‌ನಲ್ಲಿ ನೀತಿ ಅವರು ಪ್ರೇಕ್ಷಾ ಟಿ. ತಿಲಾವತ್ ಅವರನ್ನು, ಸಾನ್ವಿ ಅವರು ಹಿಮಾಂಶಿ ಚೌಧರಿ ಅವರನ್ನು ಮಣಿಸಿದ್ದರು.



ಪ್ರಶಸ್ತಿಯೊಂದಿಗೆ ಸಾನ್ವಿ ವಿಶಾಲ್ ಮಾಂಡೇಕರ್, ತೆಶುಬ್ ದಿನೇಶ್, ಕಲೈವಣನ್



ಪ್ರಶಸ್ತಿಯೊಂದಿಗೆ ದೇಶ್ನಾ ವಂಶಿಕಾ

ಫುಟ್‌ಬಾಲ್: ಬಾಲಕಿಯರ ಟ್ರಯಲ್ಸ್‌ಗೆ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು 2023-24ರ ಹೀರೊ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ಗಾಗಿ 15 ವರ್ಷದೊಳಗಿನ ಬಾಲಕಿಯರ ಟ್ರಯಲ್ಸ್‌ಗೆ ಆಹ್ವಾನ ನೀಡಿದೆ.

ಆಟಗಾರರು 2007 ಜನವರಿ 1ರಿಂದ 2009 ಡಿಸೆಂಬರ್ 31ರ ಅವಧಿಯಲ್ಲಿ ಜನಿಸಿರಬೇಕು. ಅವರು ಸ್ಥಳೀಯ ಜಿಲ್ಲಾ ಲೀಗ್‌ನಲ್ಲಿ ಅಥವಾ ರಾಜ್ಯ ಮಟ್ಟದಲ್ಲಿ ಶಾಲೆಗಾಗಿ (ಪ್ರಮಾಣಪತ್ರ ಸಲ್ಲಿಸಬೇಕು) ಅಥವಾ ಹಿಂದೆ ಕೆ.ಎಸ್.ಎಫ್.ಎ ಮಹಿಳಾ ಲೀಗ್‌ಗಳ ಯಾವುದೇ ವಿಭಾಗದಲ್ಲಿ ಆಡಿರಬೇಕು.

ಕರ್ನಾಟಕದ ಸ್ಥಳೀಯ ಪುರಸಭೆಗಳು ನೀಡುವ ಡಿಜಿಟಲ್ ಜನನ ಪ್ರಮಾಣ ಪತ್ರಗಳು ಮಾತ್ರ ಪರಿಗಣಿಸಲಾಗುತ್ತದೆ. ಹೆಸರು ಮತ್ತು ಇತರ ಮಾಹಿತಿಯಲ್ಲಿ ವ್ಯತ್ಯಾಸಗಳಿದ್ದರೆ ಪ್ರಮಾಣಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ. ಈ ಷರತ್ತುಗಳನ್ನು ಪೂರೈಸುವ ಆಟಗಾರರು ದಾಖಲೆಗಳೊಂದಿಗೆ ceoksfa@gmail.com ಗೆ ಸೆ.2ರೊಳಗೆ ಇಮೇಲ್ ಕಳುಹಿಸಬಹುದು ಎಂದು ಕೆಎಸ್‌ಎಫ್‌ಎ ತಿಳಿಸಿದೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331









ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

40X60, 30X40 Available Sale Both or East Face in Banashankari 6th Stage. Call: MANOJ 9731410616

BANASHANKARI 6TH Stage 1st Block 60x100 West Facing 11,000/= Sft Commercial/ Residential/ Banks/ Hotels. 98456-09477

General

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

SALE 6000 SQFT Land Near by Silicon Son City, Bangalore. CONTACT: 9841071137

Kengeri

40X60 SITE for Sale, East Facing, Basaveshwaranagara Layout, Kommaghatta Village, Kengeri Hobli, 3650/-psft. 9449673151

Kanakapura Road

40X60 EAST Facing Site Sale, Nitesh Rio (Adjacent to Vakil Garden City). Kanakapura Road. 9901244511.

REAL ESTATE SELLING

Sites

BANASHANKARI 6TH STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

Anjanapura

SALE BDA 40x60 Anjanapura 2nd A Block North facing Good location, near Kanakapura Road, also 30x40 East facing. 9620041313, 9945373839

SITE FOR Sale Anjanapura 30x40 N/F 7th Block Near BDA Complex, Central Park Genuine Buyers: 9880776950

SITE FOR SALE Banashankari 6th stage 10th Block BDA ACTION SITE, 30×40 North Facing Near 100 ft Road. 90% Cheque Payment Owner Call: 9880676999

Banashankari

SALE BSK 6th stage 10 Block 30x40 North facing 80 Lakh also 30x40 East facing 9th Block 65 and 20x30, 48 lakh Negotiable 9945373839, 9620041313

SALE BDA Old House 40x60 SF Khatriguppe Water Tank 40ft Road Banashankari 3rd Stage: 9845969165

SITE FOR Sale, Banashankari 6th Stage 11th Block 30×38 East Facing BBMP A Khatha. Price, 85 Lakhs. Contact: 90356 99974

Kempegowda Layout

KEMPEGOWDA LAYOUT 30x40 S/F 5th-block "C"Sector#991, 6500/-sqft negotiable,30x40N/F 2nd-block "I"sector. Call:99802397848/ 8792207829

50X80 BDA SITE SALE NPKL, 4TH BLOCK F-SECTOR, NEAR MYSORE ROAD, 60FT ROAD 6000/- PSFT NEGOTIABLE : 9886782564

Mallathalli

SITE FOR Sale NGEF Layout, Mallathahalli, East Facing. Call: 9972720488/ 9880448478.

Nagarabhavi

SITE FOR SALE NAGARABHAVI D Group Layout, BDA Khatha 30x50 West Facing. Good Location. 8105688602.

Vidyaranyapura

SITE SALE 30×40 East Facing MS Palya Near Sambhram College, 30×40 South Facing Kothnoor Near Legacy School Contact: 9036493656

Rajarajeshwari Nagar

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

Tumkur Road

30'X45' FT. W/F at Ravi Kirloskar Layout, Adj. Prestige Jindal City, Only genuine buyers, No brokers. Contact:- 9900177430.

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

TWO 35X30 Corner Site Sale. Visveshwaraiah Layout, Podar International School. Rate 4,200/- negotiable -9731652042, 8105251219

"30X40 WEST facing site for sale Vishveshwaraih Layout 2nd Block Site No.2343, 50% white. 9035289492"

AVAILABLE VISWESAVARAIAH Layout 4th Block 30X40 EF 6250/- Negotiable Good Location Near 80ft Road: 9901156708

***30X40 N/F** Site for sale* VISHVESHWARAIAH LAYOUT 8th Block Rs.10500/Sqt Negotiable, Direct Owner meeting. Call.9591013777

Frazer Town

SALE 2,100 Sq.Ft 4,100 Sq.Ft Prime Commercial Properties On Wheelers Road, Frazer Town Call: 9980525450

Arkavathi Layout

***ARKHAVATHY 2ND** Block* Lake view 40x60 BDA SITE FOR SALE. Contact: 9945079777

Hassan

ARSIKERE-40×60 CORNER Site Sale, Near Government General Hospital, Ward #14, Shivananda Colony. Contact: 9739443843.

House

Kengeri

FOR-SALE HOUSE with Flooring Marble, All TeakWood with Lift, Ground+3 Floor BDA approved plan 30x43.5 Land Gated community Layout Aprameya Vrinda Layout, KENGERI to Uttarahalli Main Road, Near Metro Railway Station Kengeri, BANGALORE-60 Call: 9379593795.

Banashankari

BANASHANKARI 6TH Stage 5 BHK House Sale, 3rd Block, 2.70 Cr (Nego) Call: 9972720488/ 9880448478.

Nagarabhavi

***35X40 W/F** G+4 floor* Rental-income Buildingsale Annapurneshwarinagar BBMP 'A' Katha, Rs.2.60cr Negotiable. Call:9591013777

"SALE: 30X40 4BHK Duplex House with Lift, 'D'.Group Layout, Nagarabhavi near Arun Ice-cream. 9844520548"

***30X40 S/F** G+2 Individual* New-Buildingsale Nagarabhavi 'D'group layout BBMP'A'katha.Rs.2.25cr Negotiable.Call:9591013777

Sunkadakatte

HOUSE FOR sale Ground+ 2Floor, in 30x40 Site, Sunkadakatte, Hegganahalli Cross, Bangalore-91. Contact: 9164955866.

Vijayanagar

35 ×51 B D A site With 2'5 floor Building for sale At vijayanagar 7th main. 9242197954. Brokers excuse.

1428 SQ.FT, South 17x84, G+3 Building 6 House 1 Shop, Pipeline, Vijayanagar, Borewell, 1.65 Lakh/- Rental Income 80K: 9448673482

Sanjaynagar

SALE STILT-FLOOR Parking-Plus 3-floors Each Consisting of a 3 BHK House With Lift and`Solar Vinayaka Layout Bhoopsandra Call:6361859856

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Farm House/ Land/ Resorts

Out-Station

LAND FOR Sale: 1) Dry Land 1 Acre 17 Guntas 2) Wet Land 3 Acres Location: Averahalli Village, Virupakshipura Hobli, Channapatna Taluk. To contact : 9742801409 / 9880509555

Agricultural Land Converted

General

12 ACRE AGRICULTURAL LAND, 2000 ARECA NUT AND 400 COCONUT FOR SALE. PIRIYAPATNA TALUK. CONTACT: 8971585440

Flat

Bannerghatta Road

3-BHK FLAT SALE. Damden Zephyr, Duplex Semi Furnished 1725 sqft. @ Gottigere. Big Car Park, Amenities, 90 Lac. Negotiable. 9945226412.

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Malleshwaram

MALLESWARAM SOUTHWEST corner 2340 sft property with three floor building for sale. 8cr. Brokers excuse. For details contact. 6363161053

Rajajinagar

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

Uttarahalli

2BHK FLAT Sale (out of 5), near park, east, A khatha, furnished. Poornapragna Layout. 9986056995.

Commercial Building

Jayanagar

***JAYANAGAR 9TH** Block* Commercial PG Building 40x70 Corner 5floors,Rental income 7.20 lakhs, Price:10.50cr. Contact.9945079777

Koramangala

BRAND NEW Commercial property for Sale/ Rent in prime location at Koramangala. Contact: 9845122028/ 8548832516

Commerical

Vijayanagar

SALE FOR 1700 Sqft Commercial Property, Vijayanagar North East Facing, Present Rent 1lack 70,000: 7975463324

Anjanapura

BDA SITE FOR SALE.ANJANAPURA 40X60.COMMERCIAL. 80FEET ROAD DEVELOPED AREA.IMMEDIATE CONSTRUCTION AREA BUYERS CONTACT: 9945835569

REAL ESTATE BUYING

Sites

Anjanapura

WANTED BDA SITES, ANY MEASUREMENT Anjanapura, Banashankari 6th Stage, JP.Nagar 8th/ 9th Phase, NarayanaNagar, Vishveshwaraiya Layout. Contact: 9845298419

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 Phase Immediate Settlement. genuine Sellers Contact: 9902038118, 9449060605

Banashankari

WANTED BDA Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

BDASITES WANTED Arkavathy,Anjanapura, Banashankari 6th-Stage,Kempegowda Vishweswaraiah Any BDA Layout, Contact: 9845062822, 8660751654

Intl Airport Road

WANTED LANDS n Sites, Near ITC, Tulips Garden, Aishwarya Residency, Rashi Orchards, Florence, Down Town Park, Utopia, Shettygere, Airport County. N.Reddy: 9844085115

Vidyaranyapura

WANTED SITES NEAR SAMBARAM COLLEGE VADERAHALLI MUNESHWARA BADAVANE BANGALORE NORTH ONLY SELLER CONTACT: 8296895858

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact. SAPTHAGIRI. 9900268073, 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BUILDERS ESSENTIAL

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Wanted

Commercial


WANTED- OPEN land for Gas Station on main road in Bangalore city limit for rent /lease for 20 years at prime location, minimum space required 65x65 sqft. Contact 9845582152

Accommodation Available

Commercial

FOR RENT, Commercial Building & Space, Bangalore-Mysore Highway, with Exit, Suitable for Hotel: 8884808899/ 8073052299

Industrial And Factory



FOR RENT: 13000 sq ft Newly constructed 1st, 2nd floor with 50HP power each, 3rd fabricated closed structure with Lift 1500 kg capacity at Peenya 1st stage, near TVS Cross. Call: 9448398678, 9886577211

Flats

FOR RENT 3 BHK Fully Furnished Flat at Coral Shobha Suburbia behind Jakkur Air Strip, close to Hebbal-Flyover, Ready for Occupation.Contact Srinivas-9900966333

JOB OPPORTUNITIES

General

WANTED GRAPHIC DESIGNER Computer Typt Male & Female Supervisor @ Jayanagar 9th Block Mob: 9845934508

REQUIRED
- **Customer Support Executive** Female with Good Communication Skills B.com with 1year Exp preferred
- **Delivery Boys** SSLC/ PUC With or Without Vehicle

Send your CV through Email: admin@sameekshaent.in
81478 28433
Sameeksha (I) Pvt Ltd

Teachers/ Professors

WANTED
Wanted One SOCIAL SCIENCE TEACHER for State Board High School on Sarjapur Main Road with BEd qualification. Interested Teachers Call:
9113563816
Resume to Email: vvrschool2003@gmail.com

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

PERSONAL

Change of Name

CHANGE OF NAME
I, **DEEPTHI,** R/at.# 3, Deepthi Nivas, 8th Cross, L.B.S. Nagar, Vimanapura, Bangalore- 560017 have changed my name to **DEEPTHI SURESH** vide affidavit dated 01/09/2023 before Notary Bhagya Kumari N, Bangalore. Henceforth I shall be called **DEEPTHI SURESH** only

PUBLIC NOTICE

IN THE HIGH COURT OF JUDICATURE AT MADRAS
(Ordinary Original Civil Jurisdiction)
O.P.No. 40 of 2022
In the matter of Sec. 11 (6) of Arbitration and Conciliation Act 1996
and
In the matter of construction agreement dated 28-9-2017 between Saby Chacko and The Yercaud and the sale agreement dated 23-9-2017 between Saby Chacko and P.Lakshmi Priya forming part and parcel of the construction agreement
Saby Chacko,
Son of M.S.Chacko, Maliyackal House, East –Kaloor PO, Thodupuzha 685608, Idukki district, Kerala State - Petitioner
Versus
P.Lakshmi Priya and others - Respondents
Respondent no.4
Rajesh Sharma, S/o. Mohan Lal Sharma, House no.D 801, Mantri Pride Apartment, Mountain Road, Jayanagar 1st Block, Bangalore-16
COURT NOTICE TO 4TH RESPONDENT
The petitioner has filed the above application to appoint an arbitrator in respect of the matter mentioned above. This petition is posted for your appearance on **11-9-2023** and hence you are required to appear before the **Madras High Court** on that date at **10 AM** either in person or through advocate. Failing compliance, you will be set exparte and necessary proceedings taken.
//By Court order//
Chennai 25-8-2023
K.Shakespeare
V.Gopinath
K.Raghuraman
97, Law Chambers, High Court Buildings Chennai-600104.

IN THE HIGH COURT OF JUDICATURE AT MADRAS
(Ordinary Original Civil Jurisdiction)
O.P.No. 38 of 2022
In the matter of Sec. 11 (6) of Arbitration and Conciliation Act 1996
and
In the matter of construction agreement dated 1-11-2017 between Mrs Yamini Murugan and The Yercaud and the sale agreement dated 23.09.2017 between Mrs Yamini Murugan and P.Lakshmi Priya forming part and parcel of the construction agreement
Mrs Yamini Murugan,
W/o. M. Murugan, No.2, 6th Cross, Maravaneri, Salem-636 007. - Petitioner
Versus
P.Lakshmi Priya and others - Respondents
Respondent no.4
Rajesh Sharma, S/o. Mohan Lal Sharma, House no.D 801, Mantri Pride Apartment, Mountain Road, Jayanagar 1st Block, Bangalore-16
COURT NOTICE TO 4TH RESPONDENT
The petitioner has filed the above application to appoint an arbitrator in respect of the matter mentioned above. This petition is posted for your appearance on **11-9-2023** and hence youare required to appear before the **Madras High Court** on that date at **10 AM** either in person or through advocate. Failing compliance, you will be set exparte and necessary proceedings taken.
//By Court order//
Chennai 25-8-2023
K.Shakespeare
V.Gopinath
K.Raghuraman
97, Law Chambers, High Court Buildings Chennai-600104.

IN THE HIGH COURT OF JUDICATURE AT MADRAS
(Ordinary Original Civil Jurisdiction)
O.P.No. 39 of 2022
In the matter of Sec. 11 (6) of Arbitration and Conciliation Act 1996
and
In the matter of construction agreement dated 1-11-2017 between Dr.Selvarangam Ramalingam and The Yercaud and the sale agreement dated 18-10-2017 between Dr.Selvarangam Ramalingam and P.Lakshmi Priya forming part and parcel of the construction agreement
Dr.Selvarangam Ramalingam,
S/o.Ramalingam, 172, 1st Main Road, Anna Indira Nagar, Yercaud Road, Near Law College, Kannankurichi, Salem 636008. - Petitioner
Versus
P.Lakshmi Priya and others - Respondents
Respondent no.4
Rajesh Sharma, S/o. Mohan Lal Sharma, House no.D 801, Mantri Pride Apartment, Mountain Road, Jayanagar 1st Block, Bangalore-16
COURT NOTICE TO 4TH RESPONDENT
The petitioner has filed the above application to appoint an arbitrator in respect of the matter mentioned above. This petition is posted for your appearance on **11-9-2023** and hence you are required to appear before the **Madras High Court** on that date at **10 AM** either in person or through advocate. Failing compliance, you will be set exparte and necessary proceedings taken.
//By Court order//
Chennai 25-8-2023
K.Shakespeare
V.Gopinath
K.Raghuraman
97, Law Chambers, High Court Buildings Chennai-600104.

PUBLIC NOTICE
This is to inform and notify the General Public that, my client **Mr. C. S. Ravi** S/o. C N. Satyanarayana Setty, residing at: No. 49, Middle School Road, Lalbagh West Gate, V. V. Puram, Basavanagudi, Bengaluru - 560 004, had lost/misplaced the bag, which was containing original of Sale Deed dated: 01/12/1971 registered on 14/02/1972 as Document No. 4994/1971-72 of Book-I, Volume No. 909 at pages 163 to 165 registered in the office of the Sub-Registrar, Bengaluru South Taluk, in respect of the property bearing Sy. No. 137 measuring 5 Acres, situated at Erasandra Village, Nettigere Dhakle, Uttarahalli Hobli, Bengaluru South Taluk, Bengaluru Urban District. Hence he has lodged a Lost Report dated: 31/08/2023 vide Lost Report No. 0707849/2023 with V.V. Puram Police Station, Bengaluru City and obtained computer generated acknowledgment under Serial No. 707849 being issued in favour of **Mr. C. S. Ravi.** The finder/s is/are hereby requested to return the aforesaid original document if found to the undersigned forthwith and of any person found dealing with the aforesaid original document would be delt in accordance with Law.
ROOPA SHETTY, Advocate
Lex Situs, No.810,
'BILWAPRIYA PLATINA',
2nd Floor, 27th Main Road,
HSR Layout, Sector 1,
Bangalore - 560102.
Phone: 080-22583563

PUBLIC NOTICE
To Place your Classified Ads Contact
9731810277

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331


NIHA DEVELOPERS & PROMOTERS

FARM LAND SITES

MAHOGANY FARMS

Nelamangala, Near Railway Gollhalli

Nelamangala - Chikka Madurai - Doddabalapura Road (100 Feet Road Connecting Airport)



Make a Smart investment in Farmland Plots

Golden chance to own a Farm House

ONE TIME INVESTMENT
Lifetime Profits

Amenities :

- 24/7 Security
- CC Camera
- Tar Road
- Each Plot 20 Types Trees
- Electricity Connection
- Solar lights
- Borewell Water Supply

Surrounded by Tourist Destinations & Good Connectivity :

- Dream Land Resort
- Gollhalli Railway Station
- Government Pre University College
- Sri Bylanjaneya Swami Temple
- Kristu Jayanti CMI Public School
- Madhure Shri Shani Mahatma Temple

Plots Size Starts From 5.5 Guntas

Highlights :

- Just 500 Meters from Doddabalapura Main Road (State Highway 74)
- 20 Minutes Drive from Tumkur Road (Nelamamangala)
- 40 Minutes Drive from Yeswanthpur
- 60 Minutes Drive from Kempegowda International Airport

•Weekend holiday home •Retirement home
•Primary home for IT professionals
•Stress Free Maintenance •Pleasant Weather

Ready For Registration Farm Sites

CALL FOR MORE DETAILS :
93809 37448 - 98800 03616

RESIDENTIAL PLOTS FOR SALE

LAUNCHING TODAY

ಮಾಲೀಕರಿಂದಲೇ ನೇರ ಮಾರಾಟ

ಇಲ್ಲಿ ನಿವೇಶನ ಮಾರಾಟ ಮತ್ತು ಖರೀದಿಯಲ್ಲಿ ಯಾವುದೇ ಮಧ್ಯವರ್ತಿಗಳ ಕಾಟವಿಲ್ಲದೇ, ನೇರವಾಗಿ ಮಾಲೀಕರಿಂದಲೇ ನಿವೇಶನಗಳು ಮಾರಾಟಕ್ಕೆ ಲಭ್ಯವಿದೆ. ಸ್ವಂತ ಜಾಗವನ್ನು ನಿಯಮಾನುಸಾರ ಅಭಿವೃದ್ಧಿಪಡಿಸಲಾಗಿದೆ.
ಇದು ಸಂಸ್ಥೆಯ 9ನೇ ಪ್ರಾಜೆಕ್ಟ್ ಆಗಿದ್ದು, ಈ ಮೊದಲು ಹೆಸರುಘಟ್ಟ ರಸ್ತೆ, ಚಿಕ್ಕಬಳ್ಳಾಪುರ ರಸ್ತೆ, ಮೈಸೂರು ರಸ್ತೆ ಹಾಗೂ ತುಮಕೂರು ರಸ್ತೆಗಳಲ್ಲಿ 8 ಪ್ರಾಜೆಕ್ಟ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಸದ್ಯ ಆರಂಭವಾಗಿರುವ ಈ 9ನೇ ಮತ್ತು 10ನೇ ಪ್ರಾಜೆಕ್ಟ್ ಅಭಿವೃದ್ದಿಯಾಗುತ್ತಿದ್ದು, ಕಾನೂನಾತ್ಮಕ ದಾಖಲೆಗಳೊಂದಿಗೆ ಮಾರಾಟಕ್ಕೆ ಹಾಗೂ ನೋಂದಣಿಗೆ ಸಿದ್ದವಿದೆ. ನಿವೇಶನ ಖರೀದಿಸುವವರಿಗೆ ಕಂಪನಿಯ ವತಿಯಿಂದಲೇ ಬ್ಯಾಂಕ್ ನಿಂದ ಸಾಲ ಸೌಲಭ್ಯ ಒದಗಿಸಿಕೊಡಲಾಗುವುದು.

NELAMANGALA, DODDABALLAPUR ROAD.
AISHWARYA ENCLAVE
Rs. 699/- per sq.ft

NELAMANGALA, TYAGADAHALLI, APMC ROAD.
AISHWARYA NEST
Rs. 899/- per sq.ft

50%
ನೋಂದಣಿ ರಿಯಾಯಿತಿ
SPOT BOOKING
ಮಾಡಿದವರಿಗೆ

ಸೌಲಭ್ಯ ಹಾಗೂ ಸೌಕರ್ಯಗಳು

ಪ್ರಾಜೆಕ್ಟ್‌ನಿಂದ 5 ನಿಮಿಷ ಪ್ರಯಾಣ ಮಾಡಿದರೆ ದೊಡ್ಡಬಳ್ಳಾಪುರ ಹೈವೇ 120 ಅಡಿ ರಸ್ತೆಯನ್ನು ಸಂಪರ್ಕಿಸುತ್ತದೆ. ಬೈರನಾಯಕನಹಳ್ಳಿ ಮತ್ತು ರೈಲ್ವೆ ಗೊಲ್ಲಹಳ್ಳಿ ರೈಲು ನಿಲ್ದಾಣಕ್ಕೆ 500 ಮೀಟರ್ ಸಮೀಪದಲ್ಲಿಯೇ ಇದೆ. ಲೇಔಟ್ ಸುತ್ತಮುತ್ತ ಚೆನ್ನಿಂಗಪ್ಪ ಇಂಜಿನಿಯರಿಂಗ್ ಕಾಲೇಜು, ಹೊಸ ಎಪಿಎಂಸಿ ಯಾರ್ಡ್, ತ್ಯಾಮಗೊಂಡ್ಲು ಇಂಡಸ್ಟ್ರಿಯಲ್ ಟೌನ್, ಮಧುರೈ ದೇವಸ್ಥಾನ ಸೇರಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಗಳಿವೆ. ಬಿಎಂಟಿಸಿ ಮತ್ತು ಕೆಎಸ್ಆರ್‌ಟಿಸಿ ಬಸ್ ಸೌಲಭ್ಯವಿದೆ. 330 ಅಡಿ ಪೆರಿಫೆರಲ್ ರಿಂಗ್ ರಸ್ತೆ ಹತ್ತಿರದಲ್ಲೇ ಇದೆ. ವಿಮಾನನಿಲ್ದಾಣಕ್ಕೆ ಸಂಪರ್ಕಿಸುವ ಎನ್ ಎಚ್ 4 ರಸ್ತೆ ಸಂಪರ್ಕವೂ ಸಮೀಪದಲ್ಲಿದೆ, ಹೂಡಿಕೆಗೆ ಅತ್ಯುತ್ತಮ ಜಾಗವಾಗಿದೆ.

AMENITIES

- ELECTRICITY
- WATER SUPPLY TO EACH SITE
- SANITORY
- METALING ROADS
- BOX TYPE STORM WATER DRAINS
- 30FEET WIDE ROADS
- TREE WITH TREE-GUARDS

CALL : 8884055599